ಮಂಗಳವಾರ, ಜೂನ್ 27, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ
ಮುಂಬೈನಲ್ಲಿ ನಡೆದ ಟಿ.ವಿ ಸರಣಿಯೊಂದರ ಪ್ರಚಾರ ಕಾರ್ಯಕ್ರಮದಲ್ಲಿ ನಟಿ ಮೋನಾ ಸಿಂಗ್ ಪಾಲ್ಗೊಂಡಿದ್ದರು

PARISHRAMA NEET ACADEMY
ಪರಿಶ್ರಮ ನೀಟ್ ಅಕಾಡೆಮಿ

#DreamwithParishrama

Congratulations to our Toppers

ನಮ್ಮ ಫಲಿತಾಂಶವು ನಮ್ಮ ಸಾಧನೆಯ ಕೈಗನ್ನಡಿ

NEET SCORE 655 — Hrushikesh Narayan, Application No 230410172335
NEET SCORE 665 — Tayyab, Application No 230410842837
NEET SCORE 670 — Prajwal R, Application No 230410115155
NEET SCORE 676 — Ujwal K, Application No 230410169382
NEET SCORE 685 — Narayana Swamy T A, Application No 230410236042
NEET SCORE 675 — Sachin K S, Application No 230410278496
NEET SCORE 675 — Rohith R K, Application No 230410077484
NEET SCORE 655 — Vinod S Ganagi, Application No 230410248323

Name	NEET Score	Ap. No.
Mokshith B L	NEET SCORE-650	230410151225
Veeresh M G	NEET SCORE-647	230410270170
Muthu Raj B K	NEET SCORE-646	230410209433
Kushal Gowda M R	NEET SCORE-645	230410265567
Sushant S Labba	NEET SCORE-643	230410124373
Prajwal K	NEET SCORE-639	230410159240
Jeevan G R	NEET SCORE-635	230410279525
Keerthan Kumar K	NEET SCORE-634	230410169874
Vilas Gowda M V	NEET SCORE-632	230410227881
Hitesh H D	NEET SCORE-631	230410263407
S Sahana	NEET SCORE-629	230410383357
Tilaka P	NEET SCORE-628	230410105072
Mahesh Gowda P M	NEET SCORE-625	230410186355
Hrushitha B	NEET SCORE-625	230410153454
Omkar M Pujeri	NEET SCORE-624	230410226425
Tejas M N	NEET SCORE-617	230410073025
Nischal K M	NEET SCORE-616	230410277435
Naveen Kumar M	NEET SCORE-615	23041027348
Shivanand M	NEET SCORE-615	230410193765
Tharun Gowtham H R	NEET SCORE-615	230410167316
Kushal G M	NEET SCORE-613	230410282307
Shashank S Patil	NEET SCORE-613	230410299986
Sanketh N T	NEET SCORE-611	230410181468
Shreyas R K	NEET SCORE-611	230410417263
Yashaswini D	NEET SCORE-610	230410169676
Nikhil S Katageri	NEET SCORE-609	230410208120
K Sanjay	NEET SCORE-607	230410152046

2023-24 ನೇ ಸಾಲಿನ ಪ್ರವೇಶಾತಿಗಳು ಪ್ರಾರಂಭ 080 45912222, 080 24413400, 9731404974

LAUNCHING NEW COURSE

Prepare for NEET/JEE Main/KCET while studying PUC 1 or 2

For admisssion call: +91 87924 95789

- Effective Results Analysis
- Completion of all the chapters from basic to NEET/JEE level
- Every Sunday Test
- Individual tracking system for each student & many more features

Lavakumar S	NEET SCORE-607	Ap. No. 230410110298
Prashant Labba	NEET SCORE-607	Ap. No. 230410124369
Shamanthakamani	NEET SCORE-606	Ap. No. 230410200760
Srijan J	NEET SCORE-606	Ap. No. 230410758897
Yuktha Padmanabh	NEET SCORE-605	Ap. No. 230410148105
Harshitha H V	NEET SCORE-603	Ap. No. 230411584163
Radhikarani K	NEET SCORE-602	Ap. No. 230410355034
Vaibhavi	NEET SCORE-601	230410287950
Aryan H M	NEET SCORE-600	Ap. No. 230410175598
Karthik K P	NEET SCORE-600	Ap. No. 230410339512
Roshan P	NEET SCORE-600	Ap. No. 230410089769
B Sanjay Patil	NEET SCORE-596	Ap. No. 230410143292
Darshan G	NEET SCORE-596	Ap. No. 230410122200
Gagandeep T P	NEET SCORE-596	Ap. No. 230410170981
Sneha V	NEET SCORE-596	Ap. No. 230410096612
Rajashree	NEET SCORE-595	Ap. No. 230410345959
Marutiesh H N	NEET SCORE-595	Ap. No. 230410273032
Shreya G S	NEET SCORE-595	Ap. No. 230410239865
Meghana P	NEET SCORE-593	Ap. No. 230410169018
Sanketh S H	NEET SCORE-593	Ap. No. 230410180461
Shamith H G	NEET SCORE-593	Ap. No. 230410143113
Umesh G	NEET SCORE-593	Ap. No. 230410276863
Akarsh Reddy S	NEET SCORE-592	Ap. No. 230410170883
Srusti S T	NEET SCORE-591	Ap. No. 230410190243
Srujan Gowda G	NEET SCORE-590	Ap. No. 230410204770
Yashaswini H J	NEET SCORE-589	Ap. No. 230410261209
Chandana Nagaraj	NEET SCORE-589	Ap. No. 230410352916
Ankitha Varsha	NEET SCORE-589	Ap. No. 230410193983
Tarun U	NEET SCORE-587	Ap. No. 230410159941
Bindushree M S	NEET SCORE-587	Ap. No. 230410186015
Akash B A	NEET SCORE-587	Ap. No. 230411405624
Chetan B	NEET SCORE-585	Ap. No. 230410238072
Sneha Kanade	NEET SCORE-584	Ap. No. 23041068688
Nadeem Salim Attar	NEET SCORE-584	Ap. No. 230410173481
Badrivishal Ellur	NEET SCORE-582	Ap. No. 230410127266
Shruthavachan K V	NEET SCORE-582	Ap. No. 230410119460
Spoorthi H S	NEET SCORE-582	Ap. No. 230410374626
Dhanush S Gowda	NEET SCORE-581	Ap. No. 230410130485
Vishwanathgouda	NEET SCORE-579	Ap. No. 230410167003
Sneha S	NEET SCORE-579	Ap. No. 230410160549
Nagaraj V Reddy	NEET SCORE-578	Ap. No. 230410267754
Bhoomika V	NEET SCORE-577	Ap. No. 230410158418
Yamini B M	NEET SCORE-577	Ap. No. 230410312165
Varsha S	NEET SCORE-577	Ap. No. 230410134975
Nitesh Kumar	NEET SCORE-576	Ap. No. 230410197151
Thanmayasree D M	NEET SCORE-576	Ap. No. 230410137327
Poornashree K J	NEET SCORE-576	Ap. No. 230410227711
Ravi Tej Gowda	NEET SCORE-575	Ap. No. 230410163906
Abhishek H	NEET SCORE-575	Ap. No. 230410147536
Bhuvan L	NEET SCORE-575	Ap. No. 230410372121
Shrishail Mahamani	NEET SCORE-575	Ap. No. 230410215199
Spoorthi G C	NEET SCORE-575	Ap. No. 230410356470
Monalisa N	NEET SCORE-574	Ap. No. 230410264214
Nandita S Patil	NEET SCORE-574	Ap. No. 230410183814
Yashas M	NEET SCORE-574	Ap. No. 230410138966
A Abhishek	NEET SCORE-574	Ap. No. 230410172837
Shreya Aroli	NEET SCORE-574	Ap. No. 230410199591
P Chetan	NEET SCORE-574	Ap. No. 230410280042
Prajwal Gowda K	NEET SCORE-573	Ap. No. 230410190966
Vikas Mulawad	NEET SCORE-573	Ap. No. 230410245812
K Hiba	NEET SCORE-573	Ap. No. 230410195530
Panchami L	NEET SCORE-572	Ap. No. 230410222369
Bharath Kumar D N	NEET SCORE-572	Ap. No. 230410204897
Sanjana Gumaste	NEET SCORE-572	Ap. No. 230410133665
Shraddha Patil	NEET SCORE-572	Ap. No. 230410190066
Jashwanth G B R	NEET SCORE-571	Ap. No. 230410171726
Dhanyata S M	NEET SCORE-571	Ap. No. 230410190255
Lipi Hegde	NEET SCORE-571	Ap. No. 230410264507
Aparna B S	NEET SCORE-570	Ap. No. 230410248265
Gireesh S Hiremath	NEET SCORE-569	Ap. No. 230410093391
Vasanth Gowda N	NEET SCORE-569	Ap. No. 230410107374
Vinitha K R	NEET SCORE-569	Ap. No. 230410178402
Rahul S Koni	NEET SCORE-569	Ap. No. 230410366954
Harsha G S	NEET SCORE-568	Ap. No. 230410158138
Siddharth M M	NEET SCORE-568	Ap. No. 230410153173
Manjunath K S	NEET SCORE-568	Ap. No. 230410222774
Abhilash N S	NEET SCORE-567	Ap. No. 230410113270
Siddana Gouda	NEET SCORE-566	Ap. No. 230410227113
Ankush Shetty	NEET SCORE-566	Ap. No. 230410170968
Jyothika R N	NEET SCORE-566	Ap. No. 230410147706
Hemanth S Ganavee	NEET SCORE-566	Ap. No. 230411164870
S Likitha Reddy	NEET SCORE-566	Ap. No. 230410286367
Arun Ravi	NEET SCORE-565	Ap. No. 230410238505
Nesara G	NEET SCORE-565	Ap. No. 230410251235
Aniketana	NEET SCORE-565	Ap. No. 230410088499
Vijaykumar S K	NEET SCORE-564	Ap. No. 230410278034
Akash K S	NEET SCORE-564	Ap. No. 230410216234
Soujanya G S	NEET SCORE-563	Ap. No. 230410091147

Many more students have secured above 500. Due to space constraint we are displaying limited photos of our rank holders. Please visit our website for more details.

www.parishramaneetacademy.com

PARISHRAMA NEET ACADEMY

#Dreamwith Parishrama

Our Esteemed Faculties

Our Faculty is the most integral part of our System.
They are the pillars on which our success rests. Thank you team.

080 45912222, 080 24413400, 9731404974

Parishrama NEET Academy - Omkar Hills Road, Srinivasapura, Dr. Vishnuvardan Road, towards Uttarahalli, Main Road, Bengaluru – 560060.

ಪ್ರಜಾ ವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಶಾಲೆಯ ಆರಂಭದಲ್ಲಿ ಮಕ್ಕಳಲ್ಲಿ ಕಾಯಿಲೆಗಳು ಕಾಣಿಸಿಕೊಳ್ಳುವುದು ಸಹಜ

ಆಳ-ಅಗಲ
ಆನ್‌ಲೈನ್ ಗೇಮ್: ಅನುಮತಿ, ನಿರ್ಬಂಧದ ಸುತ್ತ
2024ರಲ್ಲಿ ರೆಪೊ ದರ ಇಳಿಕೆ? 9
ಮಹಾರಾಷ್ಟ್ರದಲ್ಲಿ ಕೆಸಿಆರ್ ಶಕ್ತಿ ಪ್ರದರ್ಶನ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,970 ▼	18,691 ▲	₹60,300 (ಬೆಂಗಳೂರು)	₹70,400 (ಬೆಂಗಳೂರು)	82.05 ▼

ಅದಿತಿ, ನಿತಿನ್‌ಗೆ ಕೆಂಪೇಗೌಡ ಪ್ರಶಸ್ತಿ

ಬೆಂಗಳೂರು: ಪ್ರಸಕ್ತ ಸಾಲಿನ 'ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿ'ಗೆ ಗಾಲ್ಫ್ ಆಟಗಾರ್ತಿ ಅದಿತಿ ಅಶೋಕ್, ಉದ್ಯಮಿ ನಿತಿನ್ ಕಾಮತ್ ಮತ್ತು ಜಯದೇವ ಹೃದ್ರೋಗ ಆಸ್ಪತ್ರೆಯನ್ನು ಆಯ್ಕೆ ಮಾಡಲಾಗಿದೆ.

ಅದಿತಿ ಅಶೋಕ್

ನಿತಿನ್ ಕಾಮತ್

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ನಾಯಕರ ಕೆಸರೆರಚಾಟ: ಕಾರ್ಯಕರ್ತರ ಆಕ್ರೋಶ

ಬಿಜೆಪಿ ಬೇಗುದಿ ಬೀದಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆ ಸೋಲಿನ ಬಳಿಕ ಬಿಜೆಪಿಯಲ್ಲಿ ಒಳಗೊಳಗೆ ಕುದಿಯುತ್ತಿದ್ದ ಅಸಹನೆ ಈಗ ಬೀದಿಗೆ ಬಂದಿದೆ. ಪಕ್ಷದ ನಾಯಕರು ವಿವಿಧ ಜಿಲ್ಲೆಗಳಲ್ಲಿ ನಡೆಸುತ್ತಿರುವ ಸಭೆಗಳಲ್ಲಿ ನಾಯಕರ ಕೆಸರೆರಚಾಟ ಮತ್ತು ಕಾರ್ಯಕರ್ತರ ಆಕ್ರೋಶ ತಾರಕಕ್ಕೇರಿದೆ.

ಸೋಮವಾರ ವಿಜಯಪುರ ಮತ್ತು ಬಾಗಲಕೋಟೆಯಲ್ಲಿ ನಡೆದ ಬಿಜೆಪಿ ಸಭೆಗಳಲ್ಲಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಮಾಜಿ ಸಚಿವ ಮುರುಗೇಶ ನಿರಾಣಿ ಮಧ್ಯೆ ವಾಕ್ಸಮರ ನಡೆದಿದೆ. ಯತ್ನಾಳ ಬೆಂಬಲಿಗರು ಸಭೆಗಳಲ್ಲಿ ಗದ್ದಲ ಎಬ್ಬಿಸಿದರು. ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಅವರು ಕಾಂಗ್ರೆಸ್‌ನಿಂದ ವಲಸೆ ಬಂದವರ ವಿರುದ್ಧ ಹುಬ್ಬಳ್ಳಿಯಲ್ಲಿ ಕಿಡಿಕಾರಿದ್ದು, ಇದಕ್ಕೆ ಬೈರತಿ ಬಸವರಾಜ್ ತಿರುಗೇಟು ನೀಡಿದ್ದಾರೆ. 'ಕೆಲವು ನಾಯಕರ ಒಳ ಒಪ್ಪಂದದಿಂದ ಚುನಾವಣೆಯಲ್ಲಿ ಸೋಲಾಯಿತು' ಎಂದು ಹೇಳುವ ಮೂಲಕ ಮೈಸೂರು ಸಂಸದ ಪ್ರತಾಪಸಿಂಹ ಕಿಡಿ ಹೊತ್ತಿಸಿದ್ದರು.

5ನೇ ಪುಟ ನೋಡಿ

ಬಾಗಲಕೋಟೆಯಲ್ಲಿ ಸೋಮವಾರ ನಡೆದ ಜಿಲ್ಲಾ ಬಿಜೆಪಿ ಸಭೆಯಲ್ಲಿ ಕಾರ್ಯಕರ್ತರ ನಡುವೆ ವಾಗ್ವಾದ ನಡೆಯಿತು

ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಗದ್ದಲ ನಡೆದದ್ದು ದೊಡ್ಡ ವಿಚಾರವಲ್ಲ. ಆವೇಶ ಇರುವುದು ಸಹಜ. ಕೊನೆಗೆ ಎಲ್ಲರೂ ಸೇರಿ ಬಿಜೆಪಿ ಗೆಲ್ಲಿಸುವ ಸಂಕಲ್ಪ ಮಾಡಿದ್ದೇವೆ
ಬಸವರಾಜ ಬೊಮ್ಮಾಯಿ, ಶಾಸಕ

ಯತ್ನಾಳ ಸಭೆಗೆ ಬರುವ ಮೊದಲೇ ತಮ್ಮ ಬೆಂಬಲಿಗರನ್ನು ಕಳುಹಿಸಿ ಸಭೆಯಲ್ಲಿ ಗದ್ದಲ ಮಾಡಿಸಿದ್ದಾರೆ. ತಕ್ಷಣ ಅವರು ಕ್ಷಮೆ ಕೇಳಬೇಕು
ಮುರುಗೇಶ ನಿರಾಣಿ, ಮಾಜಿ ಸಚಿವ

ಕಾಂಗ್ರೆಸ್‌ನವರು ಸೇರಿದ್ದರಿಂದ ಬಿಜೆಪಿಯಲ್ಲಿ ಅಶಿಸ್ತು: ಈಶ್ವರಪ್ಪ

'ಪಕ್ಷದಲ್ಲಿ ನಾಲ್ಕೇ ಜನ ಇರುವಾಗ ಇದ್ದ ಶಿಸ್ತು ಈಗ ಕಡಿಮೆ ಆಗಿದೆ. ಕಾಂಗ್ರೆಸ್‌ನವರನ್ನು ನಾವೇ ಪಕ್ಷಕ್ಕೆ ಕರೆ ತಂದಿದ್ದು, ಅವರ ಗಾಳಿ ಬೀಸಿದೆ. ಅದಕ್ಕೆ ಈಗ ಅನುಭವಿಸುತ್ತಿದ್ದೇವೆ. ನಮ್ಮ ಹೈಕಮಾಂಡ್ ದುರ್ಬಲವಿಲ್ಲ. ಸಂದರ್ಭ ಬಂದಾಗ ಬಾಲ ಕತ್ತರಿಸುತ್ತದೆ' ಎಂದು ಬಿಜೆಪಿ ಮುಖಂಡ ಕೆ.ಎಸ್.ಈಶ್ವರಪ್ಪ ಹೇಳಿದರು. 'ನಮ್ಮದು ಶಿಸ್ತಿನ ಪಕ್ಷ. ಬಹಿರಂಗವಾಗಿ ಆರೋಪಿಸುವುದು ಪಕ್ಷದಲ್ಲಿ ಇರಲಿಲ್ಲ. ಪಕ್ಷದ ಆಂತರಿಕ ವಿಷಯಗಳು ಬಹಿರಂಗ ಚರ್ಚೆ ಆಗುತ್ತಿರುವುದು ದುರ್ದೈವದ ಸಂಗತಿ' ಎಂದು ಅವರು ಹುಬ್ಬಳ್ಳಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

ಈಶ್ವರಪ್ಪ ಹೇಳಿಕೆ ಸಹಿಸಲ್ಲ: ಬೈರತಿ

'ಈಶ್ವರಪ್ಪ ಅವರ ಹೇಳಿಕೆಗಳನ್ನು ಸಹಿಸಲು ಸಾಧ್ಯವಿಲ್ಲ' ಎಂದು ಶಾಸಕ ಬೈರತಿ ಬಸವರಾಜ್ ಹೇಳಿದ್ದಾರೆ.

ಅವರ ಹೇಳಿಕೆಯ ಬಗ್ಗೆ ಪಕ್ಷದ ವೇದಿಕೆಯಲ್ಲೇ ಚರ್ಚೆ ಮಾಡುತ್ತೇವೆ. ಅವರು ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

ರಾಜ್ಯಕ್ಕೆ ₹3,647 ಕೋಟಿ

ಬಂಡವಾಳ ಹೂಡಿಕೆಗಾಗಿ ಕೇಂದ್ರದಿಂದ ವಿಶೇಷ ನೆರವು

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಗಳ ಬಂಡವಾಳ ವೆಚ್ಚಕ್ಕೆ ಉತ್ತೇಜನ ನೀಡಲು ಕೇಂದ್ರದ ಹಣಕಾಸು ಇಲಾಖೆಯು ಬಂಡವಾಳ ಹೂಡಿಕೆಗಾಗಿ ರಾಜ್ಯಗಳಿಗೆ ವಿಶೇಷ ನೆರವು 2023-24ರ ಯೋಜನೆಯಡಿ 16 ರಾಜ್ಯಗಳಿಗೆ ₹56,415 ಕೋಟಿ ಬಿಡುಗಡೆ ಮಾಡಲು ಸೋಮವಾರ ಒಪ್ಪಿಗೆ ನೀಡಿದೆ.

ಈ ಯೋಜನೆಯಡಿ ಕರ್ನಾಟಕಕ್ಕೆ ₹3,647 ಕೋಟಿ ಬಿಡುಗಡೆಗೊಳಿಸಲು ಅನುಮೋದನೆ ನೀಡಲಾಗಿದೆ.

ಬಂಡವಾಳ ಹೂಡಿಕೆಗಾಗಿ ರಾಜ್ಯಗಳಿಗೆ ವಿಶೇಷ ಹಣಕಾಸಿನ ನೆರವು ನೀಡುವ ಈ ಯೋಜನೆಯನ್ನು ಹಣಕಾಸು ಸಚಿವಾಲಯವು 2020-21ರಲ್ಲಿ ಆರಂಭಿಸಿತು. ಕೋವಿಡ್-19 ಸಾಂಕ್ರಾಮಿಕದ ಸಂದರ್ಭದಲ್ಲಿ ರಾಜ್ಯಗಳ ಬಂಡವಾಳ ವೆಚ್ಚವನ್ನು ಹೆಚ್ಚಿಸುವ ಉದ್ದೇಶದಿಂದ ಈ ಯೋಜನೆಗೆ ಚಾಲನೆ ನೀಡಲಾಯಿತು. ಆರೋಗ್ಯ, ಶಿಕ್ಷಣ, ನೀರಾವರಿ, ನೀರು ಸರಬರಾಜು, ವಿದ್ಯುತ್, ರಸ್ತೆ, ಸೇತುವೆಗಳು, ರೈಲ್ವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆ ಯೋಜನೆಗಳಿಗೆ ಈ ಮೊತ್ತವನ್ನು ನಿಗದಿಪಡಿಸಲಾಗಿದೆ.

ಈ ಯೋಜನೆಯಡಿ ಈ ವರ್ಷ ರಾಜ್ಯಗಳಿಗೆ ₹1.3 ಲಕ್ಷ ಕೋಟಿ ನೀಡುವುದಾಗಿ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ರಾಜ್ಯಗಳಿಗೆ 50 ವರ್ಷಗಳ ಬಡ್ಡಿ ರಹಿತ ಸಾಲದ ರೂಪದಲ್ಲಿ ಈ ಮೊತ್ತ ನೀಡಲಾಗುತ್ತದೆ.

15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ಕೇಂದ್ರ ತೆರಿಗೆಗಳು ಮತ್ತು ಸುಂಕಗಳ ಪಾಲಿನ ಅನುಪಾತದಲ್ಲಿ ರಾಜ್ಯಗಳ ನಡುವೆ ಮೊತ್ತ ಹಂಚಿಕೆ ಮಾಡಲಾಗಿದೆ ಎಂದು ಹಣಕಾಸು ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ನೆರವಿನ ಮೊತ್ತ (ಕೋಟಿಗಳಲ್ಲಿ)

₹9,640 ಬಿಹಾರಕ್ಕೆ ಗರಿಷ್ಠ ನೆರವು	₹7,523 ಪಶ್ಚಿಮ ಬಂಗಾಳಕ್ಕೆ ದೊರೆತ ಮೊತ್ತ
₹7,850 ಮಧ್ಯಪ್ರದೇಶಕ್ಕೆ ಸಿಕ್ಕ ಮೊತ್ತ	₹6,026 ರಾಜಸ್ಥಾನಕ್ಕೆ ನೀಡಲಾದ ಮೊತ್ತ

ಶಾಸಕರ ತರಬೇತಿ ಶಿಬಿರ ಉದ್ಘಾಟಿಸಿ ಮಾಹಿತಿ ನೀಡಿದ ಸಿ.ಎಂ

ಬಜೆಟ್ ₹3.35 ಲಕ್ಷ ಕೋಟಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸದ್ಯವೇ ಮಂಡಿಸಲಿರುವ ರಾಜ್ಯ ಬಜೆಟ್‌ನ ಗಾತ್ರ ಅಂದಾಜು ₹3.35 ಲಕ್ಷ ಕೋಟಿ ತಲುಪಬಹುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸುಳಿವು ನೀಡಿದರು.

ವಿಧಾನಸಭೆಗೆ ಮೊದಲ ಬಾರಿ ಆಯ್ಕೆಯಾದ ಸದಸ್ಯರಿಗೆ ಸೋಮವಾರ ಹಮ್ಮಿಕೊಂಡಿದ್ದ ಮೂರು ದಿನಗಳ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

2023-24ನೇ ಸಾಲಿನ ಬಜೆಟ್ ಗಾತ್ರ ₹3.09 ಲಕ್ಷ ಕೋಟಿ ಇದೆ. ಕಾಂಗ್ರೆಸ್ ನೀಡಿದ್ದ ಗ್ಯಾರಂಟಿ ಯೋಜನೆಗಳಿಗೆ ಹೆಚ್ಚುವರಿಯಾಗಿ ₹50 ಸಾವಿರ ಕೋಟಿ ಬೇಕಾಗುತ್ತದೆ. ಹಾಗಾಗಿ, ಪೂರಕ ಬಜೆಟ್ ಗಾತ್ರ ಹೆಚ್ಚಲಿದೆ. ರಾಜ್ಯದ ಮೊದಲ ಬಜೆಟ್ ₹21.3 ಕೋಟಿ ಇತ್ತು ಎಂದರು.

ಆದಾಯದ ವೃದ್ಧಿಗೆ ಸಾಮಾನ್ಯ ಜನರಿಗೆ ಹೊರೆಯಾಗದಂತೆ ಹೇಗೆ ತೆರಿಗೆ ವಿಧಿಸಬೇಕು ಎನ್ನುವುದನ್ನು ಮಹಾಭಾರತದ ಭೀಷ್ಮ, ಯುಧಿಷ್ಠಿರನಿಗೆ ಬೋಧಿಸಿದ್ದಾರೆ. ರಾಜ್ಯ ಸರ್ಕಾರವೂ ತೆರಿಗೆ ಭರಿಸುವ ಶಕ್ತಿ ಇರುವವರಿಂದ ತೆರಿಗೆ ಸಂಗ್ರಹಿಸಲು ಆದ್ಯತೆ ನೀಡಲಿದೆ. ಬಸವಣ್ಣನವರು ಹೇಳಿದಂತೆ ಕಾಯಕ ಮತ್ತು ದಾಸೋಹ ಬಜೆಟ್‌ನ ಪ್ರಮುಖ ಸಂಗತಿಗಳು. ಕಾಯಕ ಅಂದರೆ ಉತ್ಪಾದನೆ, ದಾಸೋಹ ಅಂದರೆ ಹಂಚಿಕೆ ಎಂದು ವಿಶ್ಲೇಷಿಸಿದರು.

1994ರಲ್ಲಿ ಮೊದಲ ಬಾರಿ ಹಣಕಾಸು ಸಚಿವನಾಗಿ ಬಜೆಟ್ ಮಂಡಿಸುವಾಗ ಪತ್ರಿಕೆಯೊಂದು ಲೇವಡಿ ಮಾಡಿತ್ತು. 100 ಕುರಿ ಎಣಿಸಲು ಬಾರದವರು ಬಜೆಟ್ ಮಂಡಿಸಲಿದ್ದಾರೆ ಎಂಬ ಟೀಕೆಯನ್ನು ಸವಾಲಾಗಿ ಸ್ವೀಕರಿಸಿದ್ದೆ. ಆರ್ಥಿಕ ತಜ್ಞರು, ಚಿಂತಕರ ಸಲಹೆ, ಸಹಕಾರ ಪಡೆದು ರಾಜ್ಯದ ಆರ್ಥಿಕತೆಯನ್ನು ಯಶಸ್ವಿಯಾಗಿ ನಿಭಾಯಿಸಿದೆ. ಇನ್ನೊಂದು ಪತ್ರಿಕೆ ಅತ್ಯುತ್ತಮ ಬಜೆಟ್ ಎಂದು ಶ್ಲಾಘಿಸಿ ಸಂಪಾದಕೀಯ ಬರೆಯಿತು ಎಂದು ಹಿಂದಿನ ಘಟನೆಗಳನ್ನು ಮೆಲುಕು ಹಾಕಿದರು.

ಕುಟುಂಬ ನಿರ್ವಹಣೆ ಕೆಲಸ ಕಡಿಮೆಯೇನಲ್ಲ: ಮದ್ರಾಸ್ ಹೈಕೋರ್ಟ್

ಪತಿ ಆಸ್ತಿಯಲ್ಲಿ ಪತ್ನಿಗೂ ಸಮಪಾಲು

ಚೆನ್ನೈ (ಪಿಟಿಐ): ಗಂಡನ ಸ್ವಯಾರ್ಜಿತ ಆಸ್ತಿಯಲ್ಲಿ ಹೆಂಡತಿಗೂ ಸಮಪಾಲಿದೆ ಎಂದು ಮದ್ರಾಸ್ ಹೈಕೋರ್ಟ್ ಹೇಳಿದೆ. ಕುಟುಂಬದ ನಿರ್ವಹಣೆಯಲ್ಲಿ ಹಲವು ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸುವ ಪತ್ನಿಯ ಸಾಮರ್ಥ್ಯವನ್ನು ಪತಿಯ ಎಂಟು ಗಂಟೆಯ ದುಡಿಮೆಯೊಂದಿಗೆ ಹೋಲಿಕೆ ಮಾಡಲಾಗದು ಎಂದು ನ್ಯಾಯಾಲಯವು ಪ್ರತಿಪಾದಿಸಿದೆ.

ದಂಪತಿಯ ಆಸ್ತಿ ವಿವಾದದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣನ್ ರಾಮಸಾಮಿ ಅವರು, ಗೃಹಿಣಿಯು ನೇರವಾಗಿ ಆರ್ಥಿಕ ಕೊಡುಗೆ ನೀಡಬೇಕಾಗಿಲ್ಲ. ಆದರೆ, ಪ್ರತಿದಿನವೂ ಮಕ್ಕಳ ಪಾಲನೆ, ಅಡುಗೆ ತಯಾರಿಕೆ, ಮನೆಯ ಸ್ವಚ್ಛತೆ ಸೇರಿದಂತೆ ಹಲವು ಕಾರ್ಯಗಳಲ್ಲಿ ತೊಡಗಿಕೊಂಡಿರುತ್ತಾಳೆ. ಕುಟುಂಬದ ಮುಖ್ಯಸ್ಥನ ಕೆಲಸಕ್ಕೆ ಯಾವುದೇ ತೊಡಕು ಎದುರಾಗದಂತೆ ಕೆಲಸ ನಿಭಾಯಿಸುತ್ತಾಳೆ. ಕುಟುಂಬ ಮತ್ತು ಮಕ್ಕಳಿಗಾಗಿ ತನ್ನ ಕನಸುಗಳನ್ನು ಬದಿಗೊತ್ತಿ ಸಮಯ ಮೀಸಲಿಡುತ್ತಾಳೆ ಎಂದು ಹೇಳಿದರು.

8ನೇ ಪುಟ ನೋಡಿ

ಪ್ರಕರಣ ಏನು?

ವಿದೇಶದಲ್ಲಿದ್ದ ಪತಿಯ ಉಳಿತಾಯದ ಹಣದಲ್ಲಿ ಇಲ್ಲಿದ್ದ ಪತ್ನಿ ಆಸ್ತಿ ಖರೀದಿಸಿದ್ದರು. 2016ರಲ್ಲಿ ಗಂಡ ಮೃತಪಟ್ಟ ಬಳಿಕ ಆಕೆ ಬೇರೊಂದು ವೈವಾಹಿಕ ಸಂಬಂಧ ಹೊಂದಿದ್ದಾರೆ. ಹಾಗಾಗಿ, ಅಪ್ಪನ ಆಸ್ತಿಯಲ್ಲಿ ಅಮ್ಮನಿಗೆ ಸಮಾನ ಪಾಲಿಲ್ಲ ಎಂದು ಈ ದಂಪತಿಯ ಮೂವರು ಮಕ್ಕಳು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಯಡಿಯೂರಪ್ಪ, ಈಶ್ವರಪ್ಪ ವಿಶ್ರಾಂತಿ ಪಡೆಯಲಿ: ಡಿಕೆಶಿ

ರಾಮನಗರ: 'ಬಿಜೆಪಿ ನಾಯಕರಾದ ಬಿ.ಎಸ್.ಯಡಿಯೂರಪ್ಪ ಮತ್ತು ಕೆ.ಎಸ್.ಈಶ್ವರಪ್ಪ ವಿಶ್ರಾಂತಿ ಪಡೆಯಲಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ಈ ಸರ್ಕಾರ ಹೆಚ್ಚು ದಿನ ಉಳಿಯಲ್ಲ' ಎಂಬ ಉಭಯ ನಾಯಕರ ಮಾತಿಗೆ ಪ್ರತಿಕ್ರಿಯಿಸಿದ ಅವರು, 'ಜನರು ನಮಗೆ ಅಧಿಕಾರ ಕೊಟ್ಟಿರುವುದನ್ನು ನೋಡಿ ಅವರಿಗೆ ತಡೆದುಕೊಳ್ಳಲು ಆಗುತ್ತಿಲ್ಲ' ಎಂದು ವ್ಯಂಗ್ಯವಾಡಿದರು.

'ನಮ್ಮ ಗ್ಯಾರಂಟಿ ಯೋಜನೆಗಳ ಜನಪ್ರಿಯತೆಯನ್ನೂ ಅವರಿಗೆ ಸಹಿಸಿಕೊಳ್ಳಲಾಗುತ್ತಿಲ್ಲ. ಅವರಿಗೆ ವಿರೋಧ ಪಕ್ಷದಲ್ಲಿರುವ ಕೆಲಸ ಕೊಟ್ಟಿದ್ದಾರೆ. ಅದನ್ನು ಸರಿಯಾಗಿ ಮಾಡಲಿ' ಎಂದು ಸಂಸದ ಡಿ.ಕೆ. ಸುರೇಶ್ ಹೇಳಿದರು.

ನಮ್ಮ ಮೆಟ್ರೊ: ಮೇ 20ರಂದು ಒಂದೇ ದಿನ ಗರಿಷ್ಠ 7.3 ಲಕ್ಷ ಪ್ರಯಾಣಿಕರ ಸಂಚಾರ

ಮೆಟ್ರೊ ಪ್ರಯಾಣಿಕರ ಸಂಖ್ಯೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 'ನಮ್ಮ ಮೆಟ್ರೊ' ರೈಲಿನ ಅವಲಂಬಿತ ಪ್ರಯಾಣಿಕರ ಸಂಖ್ಯೆಯಲ್ಲಿ ಏರಿಕೆಯಾಗಿದೆ. ಹಸಿರು ಹಾಗೂ ನೇರಳೆ ಮಾರ್ಗದಲ್ಲಿ ಓಡಾಟ ನಡೆಸುವವರ ಸಂಖ್ಯೆ ನಿರೀಕ್ಷೆಗೂ ಮೀರಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಹಸಿರು, ನೇರಳೆ ಮಾರ್ಗದಲ್ಲಿ ಹಿಂದಿನ ಎಲ್ಲ ದಾಖಲೆಗಳನ್ನೂ ಮೀರಿಸಿ, ಮೇ 20ರಂದು ಒಂದೇ ದಿನ 7.3 ಲಕ್ಷ ಪ್ರಯಾಣಿಕರು ಓಡಾಟ ನಡೆಸಿದ್ದಾರೆ. ಸದ್ಯ ನಿತ್ಯ ಸರಾಸರಿ 5.70 ಲಕ್ಷ ಮಂದಿ 'ನಮ್ಮ ಮೆಟ್ರೊ'ದಲ್ಲಿ ಸಂಚಾರ ನಡೆಸುತ್ತಿದ್ದಾರೆ.

ಮೇ ತಿಂಗಳಲ್ಲಿ 1.74 ಕೋಟಿ ಪ್ರಯಾಣಿಕರು ಎರಡೂ ಮಾರ್ಗದಲ್ಲೂ ಸಂಚಾರ ನಡೆಸಿದ್ದಾರೆ. ಮೇ 20ರಂದು ಒಂದೇ ದಿನ ಗರಿಷ್ಠ ₹ 1.70 ಕೋಟಿ ಆದಾಯ ಬಂದಿದೆ. ಮೇ ತಿಂಗಳಲ್ಲಿ ಮೆಟ್ರೊಕ್ಕೆ ₹43.45 ಕೋಟಿ ಆದಾಯ ಬಂದಿದೆ ಎಂದು ತಿಳಿಸಿದೆ.

'ಶಕ್ತಿ' ಯೋಜನೆ ಜಾರಿ ಬಳಿಕ ಮಹಿಳೆಯರು ಬಿಎಂಟಿಸಿ ಬಸ್ ಅವಲಂಬಿಸಲಿದ್ದಾರೆ ಎಂಬ ಅಂದಾಜಿತ್ತು. ಆದರೆ, ಮೆಟ್ರೊದಲ್ಲಿ ಪ್ರಯಾಣಿಕರಲ್ಲಿ ವ್ಯತ್ಯಾಸ ಕಂಡುಬಂದಿಲ್ಲ. ಕಚೇರಿ, ತುರ್ತು ಕೆಲಸಕ್ಕೆ ತೆರಳುವ ಮಹಿಳೆಯರೂ ಮೆಟ್ರೊ ರೈಲು ಸೌಲಭ್ಯವನ್ನೇ ಬಳಸಿಕೊಳ್ಳುತ್ತಿದ್ದಾರೆ.

ತಿಂಗಳ ಆದಾಯ ವಿವರ

ತಿಂಗಳು	ಪ್ರಯಾಣಿಕರು	ಆದಾಯ
	(ಕೋಟಿಗಳಲ್ಲಿ)	
ಜನವರಿ	1.65	₹39.15
ಫೆಬ್ರುವರಿ	1.46	₹34.89
ಮಾರ್ಚ್	1.60	₹38.36
ಏಪ್ರಿಲ್	1.71	₹41.06
ಮೇ	1.74	₹43.45

ಒಂದೇ ದಿನ ಗರಿಷ್ಠ ಪ್ರಯಾಣಿಕರ ಸಂಖ್ಯೆ

ತಿಂಗಳು –ದಿನ	ಪ್ರಯಾಣಿಕರು
ಜನವರಿ 7	6,13,328
ಫೆಬ್ರುವರಿ 11	5,71,743
ಮಾರ್ಚ್ 4	6,13,095
ಏಪ್ರಿಲ್ 29	6,44,723
ಮೇ 20	7,03,840

ಶಕ್ತಿ ಯೋಜನೆ ಜಾರಿಯಾದ ಮರು ದಿನವೇ 6.32 ಲಕ್ಷ ಮಂದಿ ಸಂಚಾರ ನಡೆಸಿದ್ದಾರೆ ಎಂದು ವಿವರಿಸಿದೆ.

ಸೆಪ್ಟೆಂಬರ್ ವೇಳೆಗೆ ಸಂಚಾರ: ನಾಗಸಂದ್ರ–ಮಾದಾವರ ನಡುವಣ ಮೆಟ್ರೊ (ರೀಚ್–3ಸಿ) ಮಾರ್ಗದ ಕಾಮಗಾರಿ ಶೇ 94.10ರಷ್ಟು ಮುಗಿದಿದೆ. ಈ ಮಾರ್ಗದಲ್ಲಿ ಸೆಪ್ಟೆಂಬರ್‌ಗೆ ವಾಣಿಜ್ಯ ಸಂಚಾರ ಆರಂಭಗೊಳ್ಳುವ ಸಾಧ್ಯತೆಯಿದೆ. 2017ರಲ್ಲಿ ತುಮಕೂರು ಮುಖ್ಯರಸ್ತೆಯಿಂದ ಈ ಕಾಮಗಾರಿ ಆರಂಭಗೊಂಡಿತ್ತು. ಕೋವಿಡ್ ಕಾರಣದಿಂದ ಕಾಮಗಾರಿಗೆ ಹಿನ್ನಡೆ ಆಗಿತ್ತು.

ಸ್ಮಾರ್ಟ್ ಕಾರ್ಡ್ ಬಳಕೆದಾರರು ಹೆಚ್ಚಳ: ಮೆಟ್ರೊದಲ್ಲಿ ಓಡಾಟ ನಡೆಸುವವರು ಹೆಚ್ಚಾಗಿ ಸ್ಮಾರ್ಟ್ ಕಾರ್ಡ್ ಅನ್ನೇ ಬಳಸುತ್ತಿದ್ದಾರೆ. ಶೇ 52ರಷ್ಟು ಮಂದಿ ಸ್ಮಾರ್ಟ್ ಕಾರ್ಡ್ ಬಳಸಿದರೆ, ಶೇ 47.14ರಷ್ಟು ಮಂದಿ ಟೋಕನ್ ಬಳಸಿ ಸಂಚಾರ ನಡೆಸುತ್ತಿದ್ದಾರೆ.

ಸುದ್ದಿ 2 ನಿಮಿಷ

'ಪಿಆರ್‌ಆರ್ ಯೋಜನೆ ರದ್ದಾಗಲಿ'

ಬೆಂಗಳೂರು: 'ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ಯೋಜನೆಯಡಿ ಸ್ವಾಧೀನ ಪಡೆಯುವ ಭೂಮಿಗೂ 2013ರ ಕೇಂದ್ರ ಸರ್ಕಾರದ ಭೂಸ್ವಾಧೀನ ಮತ್ತು ಪುನರ್ವಸತಿ ಕಾಯ್ದೆಯಡಿ ಪರಿಹಾರ ನೀಡಬೇಕು. ಇಲ್ಲದಿದ್ದರೆ, ಯೋಜನೆಯನ್ನೇ ಕೈಬಿಡಬೇಕು' ಎಂದು ಪಿಆರ್‌ಆರ್ ರೈತ ಹಾಗೂ ನಿವೇಶನದಾರರ ಸಂಘ ಸೋಮವಾರ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಮಾವಳಿಪುರ ಬಿ.ಶ್ರೀನಿವಾಸ್, 'ಬೆಂಗಳೂರಿನ ಉತ್ತರ ಭಾಗದಲ್ಲಿರುವ 65 ಕಿ.ಮೀ. ವರ್ತುಲ ರಸ್ತೆ ಅಭಿವೃದ್ಧಿಗೆ ಬಿಡಿಎ 2005ರಲ್ಲಿ ಬಿಡಿಎ ಯೋಜನೆ ರೂಪಿಸಿದ್ದು, 1,810 ಎಕರೆ ಭೂಮಿ ಸ್ವಾಧೀನಕ್ಕಾಗಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. ಈವರೆಗೆ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಈ ಕುರಿತು ಬಿಡಿಎ ಮತ್ತು ಸರ್ಕಾರಕ್ಕೆ ಅನೇಕ ಬಾರಿ ಮನವಿ ಸಲ್ಲಿಸಿದರೂ ರೈತರಿಗೆ ಪರಿಹಾರ ಕುರಿತಂತೆ ತೀರ್ಮಾನ ಕೈಗೊಂಡಿಲ್ಲ' ಎಂದು ಆರೋಪಿಸಿದರು.

'ಸದ್ಯ ಇಲ್ಲಿ ಎಕರೆ ಜಮೀನಿಗೆ ಮಾರುಕಟ್ಟೆಯಲ್ಲಿ ₹10 ಕೋಟಿಯಿಂದ ₹14 ಕೋಟಿವರೆಗೆ ಬೆಲೆ ಇದೆ. ಯೋಜನೆಗೆ ಜಮೀನು ನೀಡಲು ಸಿದ್ಧರಿದ್ದೇವೆ. 2013ರ ಕಾಯ್ದೆಯಡಿ ಬೆಲೆ ನಿಗದಿಪಡಿಸಿ ಪರಿಹಾರ ನೀಡಬೇಕು ಅಥವಾ ಯೋಜನೆ ಕೈಬಿಟ್ಟು, ಜಮೀನುದಾರರು, ನಿವೇಶನ-ದಾರರಿಗೆ ಎನ್‌ಒಸಿ ನೀಡುವ ಬಗ್ಗೆ ತೀರ್ಮಾನ ಮಾಡಬೇಕು' ಎಂದು ಒತ್ತಾಯಿಸಿದರು.

'ಈ ಬಗ್ಗೆ ಮುಖ್ಯಮಂತ್ರಿ ಸೇರಿ ಎಲ್ಲ ಸಚಿವರಿಗೆ ಮನವಿ ಮಾಡಲಾಗುವುದು' ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ರಘು, ಉಪಾಧ್ಯಕ್ಷರಾದ ಗೌತಮ್ ಚಂದ್, ಗೋವಿಂದರಾಜು, ಜಂಟಿ ಕಾರ್ಯದರ್ಶಿ ಗೋಪಾಲ ರೆಡ್ಡಿ, ವೆಂಕಟೇಶ್ ಇದ್ದರು.

ವಿ.ಎಲ್.ಎನ್. ನಿರ್ಮಾಣ್ ಅಜೀವ ಸಾಧನಾ ಪ್ರಶಸ್ತಿ ಪ್ರದಾನ

ಸಿ.ತಾರಾರಂಗನ್, ಬಿ.ವಿ.ತಿಮ್ಮಪ್ಪ, ರಾಧಾ ಶ್ರೀನಾಥ್, ಪ್ರನಬ್ ಕುಮಾರ್ ಬಸು ಮತ್ತು ರುಕ್ಮಿಣಿ ಶೇಷಾದ್ರಿ ಅವರಿಗೆ ವಿ.ಎಲ್.ಎನ್. ನಿರ್ಮಾಣ್ ಹಿರಿಯ ನಾಕರಿಕರ ಅಜೀವ ಸಾಧನಾ ಪ್ರಶಸ್ತಿಯನ್ನು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಭಾನುವಾರ ಪ್ರದಾನ ಮಾಡಿದರು. ಸಂಸ್ಥೆಯ ಸಂಸ್ಥಾಪಕ ಲಕ್ಷ್ಮೀನಾರಾಯಣ್, ನಟ ಶ್ರೀನಾಥ್ ಇದ್ದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿರಿಯರಿಗೆ ಸಮಂಜಸ, ಸುರಕ್ಷತೆಯಿಂದ ಕೂಡಿದ ಮತ್ತು ಮನಸ್ಸಿಗೆ ಶಾಂತಿ ನೀಡುವ ವಾತಾವರಣ ತುಂಬಾ ಮುಖ್ಯ' ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಹೇಳಿದರು.

ನವ ನಿರ್ಮಾಣ್- ವಿಎಲ್‌ಎನ್ ಪ್ರಬುದ್ಧಲಾಯ ಮತ್ತು ಆಯುರ್ಧಾಮ ಭಾನುವಾರ ಆಯೋಜಿಸಿದ್ದ ವಿಎಲ್‌ಎನ್ ಪ್ರಬುದ್ಧಾಲಯದ 15ನೇ ವಾರ್ಷಿಕೋತ್ಸವ, 'ವಿಎಲ್‌ಎನ್ ನಿರ್ಮಾಣ್ ಹಿರಿಯ ನಾಗರಿಕರ ಅಜೀವ-ಸಾಧನಾ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಹೊರಗಿನ ಜಂಜಾಟಗಳಿಗೆ ತಲೆಕೆಡಿಸಿಕೊಳ್ಳದೇ ಹಿರಿಯರು ನೆಮ್ಮದಿಯಿಂದ ಸುರಕ್ಷತೆಯಿಂದ ಜೀವಿಸಲು ಪ್ರಬುದ್ಧಾಲಯವು ಹಿರಿಯ ಜೀವಿಗಳಿಗೆ ಆಶ್ರಯ ಕಲ್ಪಿಸಿದೆ ಎಂದು ಹೇಳಿದರು.

ಚಿತ್ರನಟಶ್ರೀನಾಥ್,'ಪ್ರಬುದ್ಧಾಲಯ ದಂತಹ ಹಿರಿಯರ ಮನೆ, ವೃದ್ಧರಿಗೆ ಸ್ವಂತ ಮನೆಯ ಅನುಭವ ನೀಡುತ್ತಿದೆ. ಹಿರಿಯರ ಜೀವನದ ಸಂಧ್ಯಾ ಕಾಲಕ್ಕೆ ಆಶಾದಾಯಕ-ವಾಗಿದ್ದು, ಸಮಾಜಕ್ಕೆ ಉತ್ತಮ ಮಾದರಿಯಾಗಿದೆ' ಎಂದರು.

ಇದೇ ಸಂದರ್ಭದಲ್ಲಿ ಉತ್ತಮ ಸಾಧನೆಗಾಗಿ ಸಿ.ತಾರಾರಂಗನ್, ಬಿ.ವಿ.ತಿಮ್ಮಪ್ಪ, ರಾಧಾ ಶ್ರೀನಾಥ್, ಪ್ರನಬ್ ಕುಮಾರ್ ಬಸು ಮತ್ತು ರುಕ್ಮಿಣಿ ಶೇಷಾದ್ರಿ ಅವರಿಗೆ ವಿ.ಎಲ್.ಎನ್.ನಿರ್ಮಾಣ್ ಹಿರಿಯ ನಾಕರಿಕರ ಅಜೀವ ಸಾಧನಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಂಸ್ಥೆಯ ಸಂಸ್ಥಾಪಕ ಲಕ್ಷ್ಮೀ ನಾರಾಯಣ, ಎಸ್.ಎಂ. ಪಾಟೀಲ್, ನಿರ್ದೇಶಕಿ ಸುಷ್ಮಾ ಮೂರ್ತಿ ಇದ್ದರು.

ಶತಕ ದಾಟಿದ ಟೊಮೆಟೊ ದರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಯ ಕೊರತೆ, ತಾಪಮಾನ ಏರಿಕೆಯಿಂದಾಗಿ ಟೊಮೆಟೊ ಇಳುವರಿ ಕಡಿಮೆಯಾಗಿದ್ದು, ನಗರದಲ್ಲಿ ಪ್ರತಿ ಕೆ.ಜಿಗೆ ₹100ಕ್ಕೂ ಹೆಚ್ಚಿನ ದರಕ್ಕೆ ಮಾರಾಟವಾಗುತ್ತಿದೆ.

ಕೆ.ಆರ್.ಮಾರುಕಟ್ಟೆಯಲ್ಲೇ ಗುಣ ಮಟ್ಟದ ಟೊಮೆಟೊ ಪ್ರತಿ ಕೆ.ಜಿಗೆ ₹100ಕ್ಕೆ ಮಾರಾಟವಾಗುತ್ತಿದೆ. ನಗರದ ಇತರೆ ಪ್ರದೇಶಗಳು, ಬಡಾವಣೆಗಳಲ್ಲಿ ಈ ದರ ಇನ್ನಷ್ಟು ಹೆಚ್ಚಾಗಿದೆ.

'ಕೆ.ಆರ್.ಮಾರುಕಟ್ಟೆಯಲ್ಲಿ ಹಿಂದಿನ ವಾರ ಕೆ.ಜಿ.ಟೊಮೆಟೊ ₹40, ₹50 ರಂತೆ ಮಾರಾಟವಾಗುತ್ತಿತ್ತು. 3-4 ದಿನಗಳಿಂದ ಬೆಲೆ ಏರುತ್ತಿದೆ. ಎಪಿಎಂಸಿಯಲ್ಲಿ 22 ಕೆ.ಜಿ ಒಂದು ಬಾಕ್ಸ್‌ಗೆ ₹2,200 ಬೆಲೆ ಇದೆ. ಈ ವಾರ ಬೀನ್ಸ್, ಕ್ಯಾಪ್ಸಿಕಮ್, ಬದನೆಕಾಯಿ, ಕ್ಯಾರೆಟ್, ಹಿರೇಕಾಯಿ, ನವಿಲಕೋಸು ಕೆ.ಜಿಗೆ ₹60ರ ಗಡಿ ದಾಟಿವೆ' ಎಂದು ತರಕಾರಿ ವ್ಯಾಪಾರಿ ಅಕ್ರಮ್, ಸುಭಾಷ್ ತಿಳಿಸಿದರು.

'ನಗರದ ಬಿನ್ನಿಮಿಲ್ಸ್ ಎಪಿಎಂಸಿಗೆ ಸೋಮವಾರ 551 ಕ್ವಿಂಟಲ್ ಟೊಮೆಟೊ ಪೂರೈಕೆಯಾಗಿದೆ. ಕ್ವಿಂಟಲ್‌ಗೆ ಕನಿಷ್ಠ ₹8 ಸಾವಿರ, ಗರಿಷ್ಠ ₹9 ಸಾವಿರದಂತೆ ಮಾರಾಟವಾಗಿದೆ' ಎಂದು ಎಪಿಎಂಸಿ ಅಧಿಕಾರಿಗಳು ತಿಳಿಸಿದ್ದಾರೆ.

ಕೋಲಾರ ಹಾಗೂ ಚಿಕ್ಕಬಳ್ಳಾಪುರ-ದಿಂದ ನಗರಕ್ಕೆ ಟೊಮೊಟೊ ಬರುತ್ತದೆ. ಅಲ್ಲಿನ ಮಾರುಕಟ್ಟೆಗಳಲ್ಲೂ ಪ್ರತಿ ಕೆ.ಜಿಗೆ ₹75 ನಂತೆ ಮಾರಾಟವಾಗುತ್ತಿದೆ. ಅದು ನಗರಕ್ಕೆ ಬಂದಾಗ ಬೆಲೆ ಇನ್ನೂ ಹೆಚ್ಚಾಗುತ್ತಿದೆ.

ಗುರುವಾರ (ಜೂನ್ 29) ಬಕ್ರೀದ್ ಹಬ್ಬ ನಡೆಯಲಿದ್ದು, ಬೇಡಿಕೆ ಹೆಚ್ಚಿದ್ದು, ಪೂರೈಕೆ ಕಡಿಮೆಯಾಗಿದೆ. ಇದರಿಂದ ಟೊಮೆಟೊ ಬೆಳೆದ ರೈತರಿಗೆ ಖುಷಿ ತಂದರೆ, ಗ್ರಾಹಕರ ಜೇಬಿಗೆ ಹೊರೆಯಾಗಲಿದೆ.

ಕೆಂಪೇಗೌಡ ಬಡಾವಣೆ: ರಸ್ತೆ ಕಾಮಗಾರಿ ಪೂರ್ಣಕ್ಕೆ ಸೂಚನೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆ ಕಾಮಗಾರಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಜಿ.ಕುಮಾರ ನಾಯಕ ಅವರು ಸೋಮವಾರ ವೀಕ್ಷಿಸಿ, ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಲು ಸೂಚಿಸಿದರು.

ನಾಲ್ಕು ವರ್ಷದಿಂದ ನನೆಗುದಿಗೆ ಬಿದ್ದಿದ್ದ ಜಮೀನುಗಳನ್ನು ಈಗ ನಡೆದಿರುವ ಕಾಮಗಾರಿಯನ್ನು ಪರಿಶೀಲಿಸಿದರು. ಕೊಮ್ಮಘಟ್ಟ, ಭೀಮನಕುಪ್ಪೆ, ಕೆ.ಕೃಷ್ಣಸಾಗರ ಗ್ರಾಮಗಳಲ್ಲಿ ಬರುವ ನಾಡಪ್ರಭು ಕೆಂಪೇಗೌಡ ಬಡಾವಣೆಗಳ ಬ್ಲಾಕ್ ಪರಿಶೀಲನೆ ನಡೆಯಿತು.

'ಸೆಪ್ಟೆಂಬರ್ ಅಂತ್ಯದೊಳಗೆ ಸಾರ್ವಜನಿಕರು ಬಳಸುವ ರಸ್ತೆಗಳ ಕಾಮಗಾರಿಯನ್ನು ಪೂರ್ಣಗೊಳಿಸಬೇಕು. ಅಲ್ಲದೇ ನೀರು ಪೂರೈಕೆ ಮತ್ತು ಒಳಚರಂಡಿ, ವಿದ್ಯುತ್ ಸಂಪರ್ಕ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು' ಆಯುಕ್ತರು ಸೂಚಿಸಿದರು.

ನಗರದಲ್ಲಿ ಇಂದು

ಟಿ.ಆರ್.ಚಂದ್ರಶೇಖರ್ ಅವರ 'ನಿರುದ್ಯೋಗ' ಕೃತಿ ಬಿಡುಗಡೆ: ಪ್ರಭಾತ್ ಪಟ್ನಾಯಿಕ್, ಅಧ್ಯಕ್ಷತೆ: ಎಚ್.ಎನ್. ನಾಗಮೋಹನ ದಾಸ್, ಉಪಸ್ಥಿತಿ: ಟಿ.ಆರ್.ಚಂದ್ರಶೇಖರ್, ಬಿ.ರಾಜಶೇಖರಮೂರ್ತಿ, ಕಿಗ್ಗ ರಾಜಶೇಖರ್, ಆಯೋಜನೆ: ಜನ ಪ್ರಕಾಶನ, ಸ್ಥಳ: ಡಾ.ಎಚ್.ಎನ್.ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 4.30

ರಂಗ ಜಂಗಮ ಸಿಜಿಕೆ–73ರ ನೆನಪು: ಉದ್ಘಾಟನೆ: ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ಎಲ್.ಹನುಮಂತಯ್ಯ, ಅತಿಥಿಗಳು: ಜಯಲಕ್ಷ್ಮಿ, ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಬೇಲೂರು ರಘುನಂದನ್, ಎಂ.ಪ್ರಕಾಶಮೂರ್ತಿ, ಮಾಗಡಿ ಗಿರೀಶ್, ದೀಪಕ್ ಬಿ.ವಿ., ಸಿಜಿಕೆ ಯುವ ರಂಗ ಪುರಸ್ಕಾರ: ನಿರ್ಮಲಾ ನಾದನ್, ರವಿಶಂಕರ್ ಎಸ್., ರಂಗ ಸನ್ಮಾನ: ಎಂ.ಬೋಜಣ್ಣ, ಕೆ. ಲಿಂಗದೇವರು, ಆಯೋಜನೆ: ರಂಗಚಂದಿರ ಮತ್ತು ರಂಗಮಂಡಲ ಸಿವಗಂಗ ಟ್ರಸ್ಟ್, ಸ್ಥಳ: ಸಿವಗಂಗ ರಂಗಮಂದಿರ, ಕೆಂಗೇರಿ ಉಪನಗರ, ಸಂಜೆ 6

'ಸಕುಬಾಯಿ' ಏಕವ್ಯಕ್ತಿ ನಾಟಕ ಪ್ರದರ್ಶನ: ಪ್ರಸ್ತುತಿ: ನುಡಿ ಸುದರ್ಶನ, ಆಯೋಜನೆ: ನುಡಿರಂಗ, ಸ್ಥಳ: ರಂಗಶಂಕರ, ಸಂಜೆ 7.30

ನಾಡಪ್ರಭು ಕೆಂಪೇಗೌಡ ಜಯಂತಿ

ಜಯಂತಿ ಕಾರ್ಯಕ್ರಮ: ಸಾನ್ನಿಧ್ಯ: ನಿರ್ಮಲಾ ನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಚಂದ್ರಶೇಖರನಾಥ ಸ್ವಾಮೀಜಿ, ಅತಿಥಿಗಳು: ಡಿ.ಕೆ. ಶಿವಕುಮಾರ್, ಬಿ.ಎಸ್.ಯಡಿಯೂರಪ್ಪ, ಎಚ್. ಡಿ.ಕುಮಾರಸ್ವಾಮಿ, ಜಿ.ಪರಮೇಶ್ವರ, ಆರ್. ಅಶೋಕ, ಟಿ.ಎ.ಶರವಣ, ದಿನೇಶ್ ಗುಂಡೂರಾವ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಅಧ್ಯಕ್ಷತೆ: ದೀಪಕ್ ಎಚ್.ಎನ್., ಆಯೋಜನೆ: ಕರುನಾಡ ವಿಜಯಸೇನೆ, ಸ್ಥಳ: ಮೈಸೂರು ಬ್ಯಾಂಕ್ ವೃತ್ತ, ಬೆಳಿಗ್ಗೆ 8.30

ಜಯಂತಿ ಕಾರ್ಯಕ್ರಮ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಚಂದ್ರಶೇಖರನಾಥ ಸ್ವಾಮೀಜಿ, ಉದ್ಘಾಟನೆ: ಡಿ.ಕೆ.ಶಿವಕುಮಾರ್, ಎಚ್.ಡಿ.ಕುಮಾರ ಸ್ವಾಮಿ, ಡಿ.ವಿ.ಸದಾನಂದಗೌಡ, ಆರ್.ಅಶೋಕ, ಅಧ್ಯಕ್ಷತೆ: ಬಿ. ಕೆಂಚಪ್ಪಗೌಡ, ಆಯೋಜನೆ: ರಾಜ್ಯ ಒಕ್ಕಲಿಗರ ಸಂಘ, ಸ್ಥಳ: ರಾಜ್ಯ ಒಕ್ಕಲಿಗರ ಸಂಘದ ಆವರಣ, ಕೆ.ಆರ್.ರಸ್ತೆ, ಬೆಳಿಗ್ಗೆ 9

ಜಯಂತಿ ಕಾರ್ಯಕ್ರಮ: ಅಧ್ಯಕ್ಷತೆ: ಜಯಕರ ಎಸ್.ಎಂ., ಅತಿಥಿಗಳು: ಶ್ರೀನಿವಾಸ್ ಸಿ., ಅಜಿತ್ ಕುಮಾರ್ ಹೆಗ್ಗಡೆ ಎಸ್., ಕೃಷ್ಣಮೂರ್ತಿ ಪಿ.ವಿ., ಪುಟ್ಟಸ್ವಾಮಯ್ಯ ಎಸ್., ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಪ್ರೊ.ಕೆ. ವೆಂಕಟಗಿರಿಗೌಡ ಸಭಾಂಗಣ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

ಜಯಂತಿ, ವಿಚಾರ ಸಂಕಿರಣ: ಉದ್ಘಾಟನೆ: ಮುನಿರಾಜಪ್ಪ, ಅತಿಥಿ: ಎಸ್.ಶಾರದಾ, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಉಪಸ್ಥಿತಿ: ಎಚ್.ಎಸ್.ಗಣೇಶಭಟ್ಟ, 'ಕೆಂಪೇಗೌಡರು ಮತ್ತು ಬೆಂಗಳೂರು ನಗರ ನಿರ್ಮಾಣ, ವಾಸ್ತುಶಿಲ್ಪ ಶಾಸ್ತ್ರದ ಹಿನ್ನೆಲೆ' ಉಪನ್ಯಾಸ: ಯಶಸ್ವಿನಿ ಶರ್ಮಾ, 'ನಾಡಪ್ರಭು ಹಿರಿಯ ಕೆಂಪೇಗೌಡರು ಒಂದು ಐತಿಹಾಸಿಕ ನೋಟ' ಉಪನ್ಯಾಸ: ಡಿ. ಸ್ಮಿತಾ ರೆಡ್ಡಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ವಿದ್ಯಾವಿಹಾರ, ರಾಜಾಜಿನಗರ, ಬೆಳಿಗ್ಗೆ 11

ಜಯಂತಿ ಉದ್ಘಾಟನೆ: ಎಸ್.ಟಿ.ಸೋಮಶೇಖರ್, ಉಪನ್ಯಾಸ: ಎಲ್.ಎನ್. ಮುಕುಂದರಾಜ್, ತಲಕಾಡು ಚಿಕ್ಕರಂಗೇಗೌಡ, ಅತಿಥಿಗಳು: ಅನಿಲ್ ಛಳಿಗೇರಿ, ಅನಿಲ ಕುಮಾರ, ಜಯರಾಂ, ಎಸ್. ಮಾದಯ್ಯ, ಆಯೋಜನೆ: ಬಾಂಧವ್ಯ, ಸ್ಥಳ: ಬಾಂಧವ್ಯ ಕಚೇರಿ ಆವರಣ, ಜಗಜ್ಯೋತಿನಗರ, ಜ್ಞಾನಭಾರತಿ, ಸಂಜೆ 5

ವಿಮಾನದಲ್ಲೇ ಮೂತ್ರವಿಸರ್ಜನೆ: ಬಂಧನ

ನವದೆಹಲಿ (ಪಿಟಿಐ): ಮುಂಬೈ–ದೆಹಲಿ ಏರ್ ಇಂಡಿಯಾ ವಿಮಾನದ ಹಾರಾಟದಲ್ಲಿರುವಾಗಲೇ ನೆಲದ ಮೇಲೆ ಮೂತ್ರ ವಿಸರ್ಜಿಸಿದ ಆರೋಪದಡಿ ಪೊಲೀಸರು ಪ್ರಯಾಣಿಕನೊಬ್ಬನನ್ನು ಬಂಧಿಸಿದ್ದಾರೆ.

ಈ ಘಟನೆಯು ಜೂನ್ 24ರಂದು 'ಎಐಸಿ 866' ವಿಮಾನದಲ್ಲಿ ನಡೆದಿದೆ. ಎಫ್‌ಐಆರ್‌ನ ಪ್ರಕಾರ, ರಾಮ್ ಸಿಂಗ್ ಬಂಧಿತ ಆರೋಪಿ. ಈತ ನೆಲದ ಮೇಲೆ ಮೂತ್ರವಿಸರ್ಜನೆ ಜೊತೆಗೆ 9ನೇ ಸಂಖ್ಯೆ ಸಾಲಿನ ಸೀಟುಗಳ ಮೇಲೆ ಗಲೀಜು ಎರಚಾಡಿದ್ದ.

ಈತನ ದುರ್ವರ್ತನೆಯ-ನ್ನು ಗಮನಿಸಿದ್ದ ಸಿಬ್ಬಂದಿ ಕಠಿಣ ಎಚ್ಚರಿಕೆಯನ್ನು ನೀಡಿದ್ದರು. ಅಲ್ಲದೆ, ಪೈಲಟ್ ಈ ಬಗ್ಗೆ ಕಂಪನಿಗೆ ಮಾಹಿತಿ ನೀಡಿದ್ದರು. ವಿಮಾನ ಬರುತ್ತಿದ್ದಂತೆ ಭದ್ರತಾ ಸಿಬ್ಬಂದಿ ಆತನನ್ನು ಸ್ಥಳೀಯ ಠಾಣೆಗೆ ಕರೆದೊಯ್ದರು. ಐಪಿಸಿ ಕಾಯ್ದೆ ಅನ್ವಯ ಈತನ ವಿರುದ್ಧ ಪ್ರಕರಣವನ್ನು ದಾಖಲಿಸಲಾಗಿದೆ.

ನೈಋತ್ಯ ರೈಲ್ವೆ G20

ಇ–ಟೆಂಡರು ಸೂಚನೆ ಸಂ.: BE-29-2023-24-OT-08,09

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟಿಟಿ ಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ
08	ಹಿಂದೂಪುರ, ಧರ್ಮಪುರಿ & ಕೋಲಾರದಲ್ಲಿ ವಿಶ್ರಾಂತಿ ಗೃಹಗಳನ್ನು ಹವಾನಿಯಂತ್ರಿತಗೊಳಿಸುವುದು, ಬೆಂಗಳೂರು ವಿಭಾಗದಲ್ಲಿ ರನ್ನಿಂಗ್ ಕೊಠಡಿಗಳಿಗೆ ಇತರ ಅಭಿವೃದ್ಧಿ ಕಾರ್ಯ ಮತ್ತು ಬೆಂಗಳೂರು ವಿಭಾಗದಲ್ಲಿ ವಯಸ್ಸು & ಸ್ಥಿತಿಯ ಆಧಾರದ ಮೇಲೆ ಸರ್ವೀಸ್ ಕಟ್ಟಡಗಳ ರೀ–ವೈರಿಂಗ್. **ಮುಕ್ತಾಯದ ಅವಧಿ: 12 ತಿಂಗಳುಗಳು.**	ರೂ. 94,43,023/-
09	ಕೆಲಮಂಗಲಂ, ಪೆರಿಯ ನಾಗತುಣ್ಣೈ, ರಾಯಕೋಟ್ಟೈ, ಮಾರಂಡಹಳ್ಳಿ, ಪಾಲಕ್ಕೋಡು, ತೊಪ್ಪೂರು ಮತ್ತು ಕರುವಳ್ಳಿ ನಿಲ್ದಾಣಗಳಲ್ಲಿ ಇ.ಐ. ನೊಂದಿಗೆ ತುಂಬಾ ಹಳೆಯದಾದ ಇಂಟರ್‌ಲಾಕಿಂಗ್ ಗಳನ್ನು ಮಾರ್ಪಡಿಸುವುದು, ಯಲಹಂಕ–ಪೆನುಕೊಂಡ ದ್ವಿಪಥೀಕರಣ ಯೋಜನೆಯಡಿಯಲ್ಲಿ ಹಿಂದೂಪುರ–ಪೆನುಕೊಂಡ ನಿಲ್ದಾಣಗಳ ನಡುವೆ ವಿದ್ಯುತ್ ವ್ಯವಸ್ಥೆ ಮತ್ತು ಉಳಿದಿರುವ ಕೆಲಸಗಳು. **ಮುಕ್ತಾಯದ ಅವಧಿ: 08 ತಿಂಗಳುಗಳು.**	ರೂ. 79,60,480/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: ಓಟಿ ಸಂ. 08ಕ್ಕೆ 12.07.2023 ಮತ್ತು ಓಟಿ ಸಂ. 09ಕ್ಕೆ 19.07.2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ ಬೆಂಗಳೂರು

PUB/195/AAD/PRB/SWR/2023-24

S.W.Railways SWRRLY SWRRLY

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ತುಮಕೂರು ವಿಭಾಗ, ತುಮಕೂರು

ಸಂ:ಕರಾಸಾ/ತುವಿ/ಸಂ/ವಾ/ಇ–ಟೆಂ/ಹ&ಟೆಂ/738/739/740/2023–24 ದಿನಾಂಕ: 23.06.2023

ಇ–ಟೆಂಡರ್ & ಸಂಧಾನ ಪ್ರಕಟಣೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ತುಮಕೂರು ವಿಭಾಗದ ವ್ಯಾಪ್ತಿಗೆ ಬರುವ **ಗುಬ್ಬಿ, ಕುಣಿಗಲ್, ಅಮೃತೂರು, ತುರುವೇಕೆರೆ, ಸಿ.ಎಸ್.ಪುರ, ಕಡಬ, ತಿಪಟೂರು, ಕೊರಟಗೆರೆ, ಸಿರಾ, ಮಧುಗಿರಿ ಮತ್ತು ತುಮಕೂರು** ತಾತ್ಕಾಲಿಕ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ / ಖಾಲಿಯಾಗಲಿರುವ ಮತ್ತು ಹೊಸ ವಾಣಿಜ್ಯ ಮಳಿಗೆಗಳಿಗೆ ಹಾಗೂ ಜಾಹೀರಾತು ಪ್ಯಾಕೇಜ್‌ಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು **"ಟೆಂಡರ್ ಮತ್ತು ಸಂಧಾನ"** ಪ್ರಕಟಣೆಗಳನ್ನು ಹೊರಡಿಸಲಾಗಿದೆ. ಟೆಂಡರ್ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು **ದಿ: 17.07.2023**ರ **17:00 ಗಂಟೆ**ಯೊಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ಹೆಚ್ಚಿನ ವಿವರಳಿಗಾಗಿ **ವಿಭಾಗೀಯ ಕಚೇರಿ, ಕ.ರಾ.ರ.ಸಾ. ನಿಗಮ, ತುಮಕೂರು ವಿಭಾಗ, ಮಧುಗಿರಿ ಮುಖ್ಯರಸ್ತೆ, ಎ.ಪಿ.ಎಂ.ಸಿ. ಮಾರ್ಕೆಟ್ ಹತ್ತಿರ, ಅಂತರಸನ ಹಳ್ಳಿ, ತುಮಕೂರು – 572106**ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ಮೊಬೈಲ್ ಸಂಖ್ಯೆ: **7760990902** (ವಿಭಾಗೀಯ ಸಂಚಲನಾಧಿಕಾರಿಗಳು).

ಸಹಿ/–,
ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ
ಕರಾರಸಾನಿ, ತುಮಕೂರು ವಿಭಾಗ

ವಾಸಾಸಂಇ/ವಾಪ್ರ/ಎಲ್‌ಸಿ/368/2023–24

ಮಹಡಿಯಿಂದ ಜಿಗಿದು ಕಾಲು ಮುರಿದುಕೊಂಡ

ಪ್ರಜಾವಾಣಿ ವಾರ್ತೆ

ಆನೇಕಲ್: ವೈದ್ಯಕೀಯ ತಪಾಸಣೆಗಾಗಿ ಸೋಮವಾರ ಆನೇಕಲ್ ಸರ್ಕಾರಿ ಆಸ್ಪತ್ರೆಗೆ ಪೊಲೀಸರು ಕರೆತಂದಿದ್ದ ಆರೋಪಿಯೊಬ್ಬ ತಪ್ಪಿಸಿಕೊಳ್ಳಲು ಮೊದಲನೇ ಮಹಡಿಯಿಂದ ಜಿಗಿದು ಕಾಲು ಮುರಿದುಕೊಂಡಿದ್ದಾನೆ.

ಆನೇಕಲ್ ತಾಲ್ಲೂಕಿನ ಅರವಂಟಿಕೆಪು-ರದ ಚೇತನ್ ಅಲಿಯಾಸ್ ವಾಲಿ (27) ಕಾಲು ಮುರಿದುಕೊಂಡ ಆರೋಪಿ.

2014ರಲ್ಲಿ ಜಾಮೀನಿನ ಮೇಲೆ ಹೊರ ಬಂದಿದ್ದ ಆರೋಪಿ ಕೋರ್ಟ್‌ಗೆ ಹಾಜರಾಗಿರಲಿಲ್ಲ. ಆತನ ವಿರುದ್ಧ ಬಂಧನ ವಾರಂಟ್ ಇತ್ತು. ಆನೇಕಲ್ ಪೊಲೀಸರು ಚೇತನ್‌ನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ-ದ್ದರು. ಜೈಲಿಗೆ ಕಳುಹಿಸುವ ಮುನ್ನ ತಪಾಸಣೆಗೆ ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ಕರೆ ತಂದಿದ್ದಾಗ ಈತ ತಪ್ಪಿಸಿಕೊಳ್ಳಲು ಕಿಟಕಿಯಿಂದ ಜಿಗಿದಿದ್ದ.

ಪ್ರಜಾವಾಣಿ @75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ

(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ

8147623791

080 45557204

readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ bit.ly/40dPCqy

ನಿಧನ ವಾರ್ತೆ

ತೋನ್ಸೆ ಜಯಂತ್ ಕುಮಾರ್

ಉಡುಪಿ: ಪ್ರಸಿದ್ಧ ಯಕ್ಷಗಾನ ಭಾಗವತರಾಗಿದ್ದ ತೋನ್ಸೆ ಜಯಂತ್ ಕುಮಾರ್ (77) ಸೋಮವಾರ ಬೆಳಿಗ್ಗೆ ನಿಧನರಾದರು. ಅವರಿಗೆ ಪತ್ನಿ, ಮೂವರು ಪುತ್ರರು ಇದ್ದಾರೆ.

ಜೂನ್ 27 ರಂದು ಬೆಳಿಗ್ಗೆ 10ಕ್ಕೆ ಬೀಡಿನಗುಡ್ಡೆಯಲ್ಲಿರುವ ರುದ್ರಭೂಮಿ-ಯಲ್ಲಿ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

'ರಾಷ್ಟ್ರಪ್ರಶಸ್ತಿ ಪುರಸ್ಕೃತ ಸಂಚಾರಿ ಯಕ್ಷಗಾನ ಭಂಡಾರ' ಎಂದೇ ಕರೆಸಿ-ಕೊಳ್ಳುತ್ತಿದ್ದ ತೋನ್ಸೆ ಕಾಂತಪ್ಪ ಮಾಸ್ಟರ್ ಅವರ ಪುತ್ರ ತೋನ್ಸೆ ಜಯಂತ್ ಕುಮಾರ್ ಅವರು ಯಕ್ಷಗಾನದ ಸಾಂಪ್ರದಾಯಿಕ ಮೌಲ್ಯಗಳನ್ನು ಉಳಿಸಲು ಶ್ರಮವಹಿಸಿದ್ದರು.

ಯಕ್ಷಗಾನ ಸಂಘಗಳನ್ನು ಕಟ್ಟಿದ್ದರು. ತೋನ್ಸೆ ಜಯಂತ್ ಕುಮಾರ್ ಅವರ ಕಲಾಸೇವೆಗೆ ರಾಷ್ಟ್ರಪತಿ ಗೌರವ, ಅಕಾಡೆಮಿ ಪ್ರಶಸ್ತಿ, ಯಕ್ಷಸುಮ ಪ್ರಶಸ್ತಿ, ಕಾಳಿಂಗ ನಾವುಡ ಪ್ರಶಸ್ತಿಗಳು ಸಂದಿವೆ.

ಅರುಣ್ ಅವಧಾನಿ

ಬೆಂಗಳೂರು: ಹೈಕೋರ್ಟ್‌ನ ಹಿರಿಯ ಕ್ರಿಮಿನಲ್ ವಕೀಲ ಸಿ.ವಿ. ನಾಗೇಶ್ ಅವರ ಪುತ್ರ ಅರುಣ್ ಅವಧಾನಿ (41) ಭಾನುವಾರ ಮಧ್ಯರಾತ್ರಿ ತೀವ್ರ ಹೃದಯಾಘಾತದಿಂದ ನಿಧನರಾದರು. ಅವರಿಗೆ 11 ವರ್ಷದ ಪುತ್ರ ಮತ್ತು ಪತ್ನಿ ಇದ್ದಾರೆ.

'ಅರುಣ್ ಅವರ ಇಬ್ಬರು ಸಹೋದರಿಯರು ಅಮೆರಿಕ, ಆಸ್ಟ್ರೇಲಿಯಾದಲ್ಲಿ ನೆಲೆಸಿದ್ದಾರೆ. ಬುಧವಾರ (ಜೂ.28) ಬೆಳಿಗ್ಗೆ ಅಂತ್ಯಕ್ರಿಯೆ ನಡೆಯಲಿದೆ. ಅಂದು ಬೆಳಿಗ್ಗೆ 8ಕ್ಕೆ ಪಾರ್ಥಿವ ಶರೀರವನ್ನು ಸೌತ್ ಎಂಡ್ ಸರ್ಕಲ್ ಬಳಿಯ ನಿವಾಸಕ್ಕೆ ತರಲಾಗುವುದು. ಅಲ್ಲಿಯವರೆಗೆ ಪಾರ್ಥಿವ ಶರೀರವನ್ನು ಸಾಗರ್ ಆಸ್ಪತ್ರೆಯಲ್ಲಿ ಇರಿಸಲಾಗಿರುತ್ತದೆ' ಎಂದು ಕುಟುಂಬದ ಆಪ್ತ ಮೂಲಗಳು ತಿಳಿಸಿವೆ.

ಸುದ್ದಿ ತಿಳಿಯುತ್ತಿದ್ದಂತೆಯೇ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ, ನಟ ಶಿವರಾಜ್ ಕುಮಾರ್, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಸೇರಿ ಹಲವು ಪ್ರಮುಖರು ಅಂತಿಮ ದರ್ಶನ ಪಡೆದರು. ವಿವರಕ್ಕೆ ಎಂ.ದೇವರಾಜ್ ಅವರ ಸಂಪರ್ಕ ಸಂಖ್ಯೆ 9845071935

27 ಜೂನ್

ಬೆಂಗಳೂರಿನ ನಿರ್ಮಾತೃ
ನಾಡಪ್ರಭು ಕೆಂಪೇಗೌಡ ಜಯಂತಿಯ
ಹಾರ್ದಿಕ ಶುಭಾಶಯಗಳು

ಬನ್ನಿ ನಾಡ ಕಟ್ಟೋಣ, ಕೆಂಪೇಗೌಡರ ಹಾದಿಯಲಿ ನಡೆಯೋಣ

ಕೆಂಪೇಗೌಡ ಜಯಂತಿ ಆಚರಣೆ

ಬೆಳಿಗ್ಗೆ 8 ಗಂಟೆ
ಕೆಂಪೇಗೌಡ ಗಡಿಗೋಪುರ,
ಮೇಖ್ರಿ ಸರ್ಕಲ್

ಬೆಳಿಗ್ಗೆ 10 ಗಂಟೆ
ಪ್ರಗತಿಯ ಪ್ರತಿಮೆ (Statue Of Prosperity)
ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ದೇವನಹಳ್ಳಿ

ಬೆಳಿಗ್ಗೆ 11.30
ವೀರಸಮಾಧಿ ಕೆಂಪಾಪುರ,
ತಿಪ್ಪಸಂದ್ರ, ಹೋಬಳಿ, ಮಾಗಡಿ

ಬನ್ನಿ ಭಾಗವಹಿಸಿ, ಯಶಸ್ವಿಗೊಳಿಸಿ

ಡಾ|| ಸಿ. ಎನ್. ಅಶ್ವಥ್ ನಾರಾಯಣ್ ಅಭಿಮಾನಿಗಳ ಬಳಗ

ಕೆನರಾ ಬ್ಯಾಂಕ್
Canara Bank
ಭಾರತ ಸರ್ಕಾರದ ಒಂದು ಉದ್ಯಮ
Together We Can

ದೇಶದ ಅಭಿವೃದ್ಧಿಯಲ್ಲಿ
ಕೊಡುಗೆ ನೀಡಿದ ಅತಿ ಚಿಕ್ಕ, ಸಣ್ಣ ಮತ್ತು
ಮಧ್ಯಮ ಉದ್ದಿಮೆದಾರರಿಗೆ
ಧನ್ಯವಾದಗಳು

ಸಂಭ್ರಮಾಚರಣೆ
ಎಂಎಸ್ಎಂಇ
ದಿನ
27.06.2023

ಕೆನರಾ ಎಂಎಸ್ಎಂಇ ಸ್ಟಾರ್ — ಕಡಿಮೆ ಬಡ್ಡಿದರದಲ್ಲಿ ಎಂಎಸ್ಎಂಇಗಳ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸಲು

ಕೆನರಾ ಸ್ಮಾರ್ಟ್ ಪ್ರೊಫೆಷನಲ್ — ವೃತ್ತಿಪರರ ಸಾಲದ ಅವಶ್ಯಕತೆಗಳನ್ನು ಪೂರೈಸಲು

ಕೆನರಾ ಮಹಿಳಾ ವಿಕಾಸ್ — ಮಹಿಳಾ ಉದ್ಯಮಿಗಳ ವ್ಯಾಪಾರ ಸಂಬಂಧಿತ ಅವಶ್ಯಕತೆಗಳನ್ನು ಪೂರೈಸಲು

ಕೆನರಾ ಡಾಕ್ಟರ್ಸ್ ಚಾಯ್ಸ್ — ನೋಂದಾಯಿತ ವೈದ್ಯಕೀಯ ವೃತ್ತಿಪರರ ಕ್ರೆಡಿಟ್ ಬೇಡಿಕೆಗಳನ್ನು ಪೂರೈಸಲು

ಕೆನರಾ ಜಿಎಸ್‌ಟಿ — ಎಲ್ಲಾ ಜಿಎಸ್‌ಟಿ ನೋಂದಾಯಿತ ಸಂಸ್ಥೆಗಳಿಗೆ ಸರಿಹೊಂದುವ ನವೀನ ಯೋಜನೆ

ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ

canarabank | canarabankofficial | canarabankinsta
ಕೆನರಾಗೆ ಕರೆ ಮಾಡಿ ☎ 1800 1030
www.canarabank.com

ಭಾರತ 2023 INDIA
ಸ್ವಾತಂತ್ರ್ಯದ ಅಮೃತಮಹೋತ್ಸವ

ಸರ್ವಶ್ರೇಷ್ಠ ದಾರ್ಶನಿಕ * ಅಪ್ರತಿಮ ಆಡಳಿತಗಾರ * ಬೆಂಗಳೂರು ಮಹಾನಗರ ನಿರ್ಮಾತೃ
ನಾಡಪ್ರಭು ಕೆಂಪೇಗೌಡರ 514ನೇ ಜಯಂತಿ ಕಾರ್ಯಕ್ರಮ
ದಿನಾಂಕ: 27.06.2023 ಮಂಗಳವಾರ, ಸಮಯ: ಬೆಳಿಗ್ಗೆ 11.30 ಗಂಟೆ | ಸ್ಥಳ : ವಿಧಾನಸೌಧದ ಬ್ಯಾಂಕ್ವೆಟ್ ಹಾಲ್, ಬೆಂಗಳೂರು

ಮಾನ್ಯ ಉಪ ಮುಖ್ಯಮಂತ್ರಿ ಹಾಗೂ ಸಚಿವರುಗಳು ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡಿರುವುದು

-: ಉದ್ಘಾಟನೆ :-
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ದಿವ್ಯ ಸಾನಿಧ್ಯ
ಪರಮ ಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಡಾ|| ನಿರ್ಮಲಾನಂದನಾಥ ಮಹಾ ಸ್ವಾಮೀಜಿಯವರು
ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ
ಪರಮ ಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಡಾ|| ನಂಜಾವದೂತ ಮಹಾ ಸ್ವಾಮೀಜಿಯವರು
ಪೀಠಾಧ್ಯಕ್ಷರು, ಶ್ರೀ ಸ್ಫಟಿಕಪುರಿ ಮಹಾಸಂಸ್ಥಾನ ಮಠ, ಶ್ರೀ ಕ್ಷೇತ್ರ ಪಟ್ಟನಾಯಕನಹಳ್ಳಿ
ಪರಮ ಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಚಂದ್ರಶೇಖರ ಸ್ವಾಮೀಜಿಯವರು
ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠ

ವಿಶೇಷ ಆಹ್ವಾನಿತರು
ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಹಣಕಾಸು ಮತ್ತು ಕಾರ್ಪೋರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಶ್ರೀ ಎಂ. ರಾಜೀವ್ ಚಂದ್ರಶೇಖರ್
ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು, ಭಾರತ ಸರ್ಕಾರ

ಘನ ಉಪಸ್ಥಿತಿ
ಶ್ರೀ ಡಿ.ಕೆ.ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು, ಬೃಹತ್ ಮತ್ತು ಮಧ್ಯಮ ನೀರಾವರಿ, ಬೆಂಗಳೂರು ನಗರಾಭಿವೃದ್ಧಿ ಸಚಿವರು
ಶ್ರೀ ರಾಮಲಿಂಗಾರೆಡ್ಡಿ
ಮಾನ್ಯ ಸಾರಿಗೆ, ಮುಜರಾಯಿ ಮತ್ತು ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಉಪಾಧ್ಯಕ್ಷರು, ನಾ.ಕೆಂ.ಪಾ.ತಾ.ಅ.ಪ್ರಾ.

ಗೌರವ ಉಪಸ್ಥಿತಿ
ಶ್ರೀ ಕೃಷ್ಣ ಭೈರೇ ಗೌಡ
ಮಾನ್ಯ ಕಂದಾಯ ಸಚಿವರು, ಹಾಗೂ ಪದನಿಮಿತ್ತ ಸದಸ್ಯರು, ನಾ.ಕೆಂ.ಪಾ.ತಾ.ಅ.ಪ್ರಾ.
ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ
ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು, ಹಾಗೂ ಪದನಿಮಿತ್ತ ಸದಸ್ಯರು, ನಾ.ಕೆಂ.ಪಾ.ತಾ.ಅ.ಪ್ರಾ.
ಶ್ರೀ ಡಿ.ಕೆ. ಸುರೇಶ್
ಮಾನ್ಯ ಸಂಸದರು, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ, ಹಾಗೂ ಪದನಿಮಿತ್ತ ಸದಸ್ಯರು, ನಾ.ಕೆಂ.ಪಾ.ತಾ.ಅ.ಪ್ರಾ
ಶ್ರೀ ಹೆಚ್.ಸಿ. ಬಾಲಕೃಷ್ಣ
ಮಾನ್ಯ ಶಾಸಕರು, ಮಾಗಡಿ ವಿಧಾನಸಭಾ ಕ್ಷೇತ್ರ ಹಾಗೂ ಪದನಿಮಿತ್ತ ಸದಸ್ಯರು, ನಾ.ಕೆ.ಪಾ.ತಾ.ಅ.ಪ್ರಾ
ಶ್ರೀ ಎಸ್.ಆರ್. ವಿಶ್ವನಾಥ್
ಮಾನ್ಯ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ ಹಾಗೂ ಪದನಿಮಿತ್ತ ಸದಸ್ಯರು. ನಾ.ಕೆಂ.ಪಾ.ತಾ.ಅ.ಪ್ರಾ

ಸರ್ವರಿಗೂ ಆದರದ ಸ್ವಾಗತ

ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ತುಷಾರ್ ಗಿರಿನಾಥ್ ಭಾ.ಆ.ಸೇ.
ಮುಖ್ಯ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು,

ರಾಜೇಂದರ್ ಕುಮಾರ್ ಕಟಾರಿಯಾ, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ

ಡಾ.ಎನ್. ಮಂಜುಳ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ವಿನಯ್ ದೀಪ್. ಆರ್
ಆಯುಕ್ತರು / ವಿಶೇಷಾಧಿಕಾರಿಗಳು
ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ

ದೇಶದ ಕಾಡು, ವನ್ಯಜೀವಿ ನದಿಗಳು ಸೇರಿ ಪರಿಸರ ಉಳಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

‘ಯುವಜನರ ಭವಿಷ್ಯಕ್ಕೆ ಡ್ರಗ್ಸ್ ಮಾರಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾದಕವಸ್ತುಗಳು ಯುವಜನರ ಭವಿಷ್ಯಕ್ಕೆ ಮಾರಕವಾಗಲಿದೆ. ಅದನ್ನು ಕೊನೆಗೊಳಿಸಲು ವಿದ್ಯಾರ್ಥಿಗಳು, ಯುವ ಸಮೂಹದಲ್ಲಿ ಜಾಗೃತಿ ಮೂಡಿಸಬೇಕಿದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೋಮವಾರ ಹೇಳಿದರು.

ವಿಶ್ವ ಮಾದಕವಸ್ತು ವಿರೋಧಿ ದಿನದ ನಿಮಿತ್ತ ವಿಧಾನಸೌಧ ಎದುರು ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗಾಂಧಿ ಸ್ಮಾರಕ ನಿಧಿ ಸಹಯೋಗದಲ್ಲಿ ನಡೆದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

‘ಮಾದಕವಸ್ತುಗಳಿಗೆ ಕಡಿವಾಣ ಹಾಕುವ ಮೂಲಕ ಸಮಾಜವನ್ನು ರಕ್ಷಿಸಿ ಆರೋಗ್ಯಕರ ಸಮಾಜ ನಿರ್ಮಿಸಬೇಕು. ಮಕ್ಕಳು, ಯುವಜನರು ದೇಶದ ಆಸ್ತಿ. ಅವರು ಡ್ರಗ್ಸ್ ವ್ಯಸನ, ದುಶ್ಚಟಗಳಿಂದ ದೂರವಿದ್ದರೆ ಮಾತ್ರ ಸಾಧನೆ ಮಾಡಲು ಸಾಧ್ಯ’ ಎಂದು ಹೇಳಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಬಿ.ನಾಗೇಂದ್ರ, ‘ಮಾದಕವಸ್ತುಗಳ ಮಾರಾಟದ ವಿರುದ್ಧ ಕ್ರಮ ಜರುಗಿಸಲಿದ್ದು, ಮಾದಕ ವ್ಯಸನಿಗಳಿಗೆ ಸಮಾಲೋಚನೆ ನಡೆಸಲಾಗುವುದು‘ ಎಂದು ಹೇಳಿದರು.

ಜಾಗೃತಿ ಜಾಥಾ: ಆ ನಂತರ ವಿಧಾನಸೌಧದಿಂದ ಕಂಠೀರವ ಕ್ರೀಡಾಂಗಣದವರೆಗೆ ಜಾಗೃತಿ ಜಾಥಾ ನಡೆಯಿತು. ಜಾಥಾದಲ್ಲಿ ಕಾಲೇಜು ವಿದ್ಯಾರ್ಥಿಗಳು, ಸ್ವಯಂ ಸೇವಕರು, ವಿವಿಧ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಅವರು ಪ್ರತಿಜ್ಞಾವಿಧಿ ಬೋಧಿಸಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇದ್ದರು.

ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಬಿ.ನಾಗೇಂದ್ರ ಇದ್ದರು

₹21 ಕೋಟಿ ಮೌಲ್ಯದ ಡ್ರಗ್ಸ್ ನಾಶ

ನಗರ ಪೊಲೀಸ್ ಕಮಿಷನರೇಟ್ ಕಚೇರಿ ಆವರಣದಲ್ಲಿ ವಿಶೇಷ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಮಾದಕವಸ್ತುಗಳ ಸೇವನೆ ಮತ್ತು ಕಳ್ಳ ಸಾಗಣೆ ವಿರೋಧಿ ದಿನದ ನಿಮಿತ್ತ ವಿಶೇಷ ಅಭಿಯಾನ ನಡೆಸಿದ ಪೊಲೀಸರು, ಸೋಮವಾರ ₹ 21 ಕೋಟಿ ಮೌಲ್ಯದ 2,117 ಕೆ.ಜಿ ಡ್ರಗ್ಸ್ ನಾಶಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪೊಲೀಸ್ ಕಮಿಷನರ್ ಬಿ.ದಯಾನಂದ್, ‘ನಗರದ ವಿವಿಧೆಡೆ ವಿಶೇಷ ಕಾರ್ಯಾಚರಣೆ ನಡೆಸಿ ವಶಕ್ಕೆ ಪಡೆದಿದ್ದ 2,053 ಕೆ.ಜಿ ಗಾಂಜಾ, 9 ಕೆ.ಜಿ ಹಶೀಷ್, 12 ಕೆ.ಜಿ ಅಫೀಮು, 9 ಕೆ.ಜಿ ಚರಸ್, 568 ಗ್ರಾಂ ಕೊಕೇನ್, 13 ಗ್ರಾಂ ಹೆರಾಯಿನ್, 5 ಕೆ.ಜಿ ಎಂಡಿಎಂಎ ಅನ್ನು ಕೋರ್ಟ್ ಆದೇಶ ಪಡೆದು ನಾಶಪಡಿಸಲಾಗಿದೆ’ ಎಂದರು.

‘ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ 2022ರ ಜನವರಿಯಿಂದ 2023ರ ಜೂನ್‌ವರೆಗೆ 6,191 ಪ್ರಕರಣ ದಾಖಲಾಗಿದೆ. ಈ ಸಂಬಂಧ 7,723 ಭಾರತೀಯರು, 159 ವಿದೇಶಿಯರನ್ನು ಬಂಧಿಸಿದ್ದು, ₹ 117 ಕೋಟಿ ಮೌಲ್ಯದ 6,261 ಕೆ.ಜಿ ಡ್ರಗ್ಸ್ ಜಪ್ತಿ ಮಾಡಲಾಗಿದೆ’ ಎಂದು ಅವರು ವಿವರಿಸಿದರು.

ಡ್ರಗ್ಸ್ ಪೊಟ್ಟಣಗಳನ್ನು ಕಮಿಷನರ್ ಬಿ.ದಯಾನಂದ್ ವೀಕ್ಷಿಸಿದರು. ಸಿಸಿಬಿ ಜಂಟಿ ಕಮಿಷನರ್ ಎಸ್‌.ಡಿ.ಶರಣಪ್ಪ ಇದ್ದರು – ಪ್ರಜಾವಾಣಿ ಚಿತ್ರ

‘ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದಿದ್ದ ‘ಡ್ರಗ್ಸ್ ಸಾಗಣೆ ಹಾಗೂ ರಾಷ್ಟ್ರೀಯ ಭದ್ರತೆ’ ಕುರಿತು ಸಮಾವೇಶದ ಭಾಗವಾಗಿ ₹ 92 ಕೋಟಿ ಮೌಲ್ಯದ 4,397 ಕೆ.ಜಿ ಡ್ರಗ್ಸ್ ನಾಶಪಡಿಸಲಾಗಿತ್ತು’ ಎಂದು ದಯಾನಂದ್ ಅವರು ಸ್ಮರಿಸಿದರು.

ಶಾಲೆ–ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮ: ‘ನಗರದ ಶಾಲೆ–ಕಾಲೇಜುಗಳಲ್ಲಿ ಡ್ರಗ್ಸ್ ವಿರುದ್ಧ ಜಾಗೃತಿ ಕಾರ್ಯಕ್ರಮ ನಡೆಸಲಿದ್ದು, ಈವರೆಗೆ 1.95 ಲಕ್ಷ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲಾಗಿದೆ. ಡ್ರಗ್ಸ್ ವಿರುದ್ಧ ವಿದ್ಯಾರ್ಥಿಗಳು ಪ್ರತಿಜ್ಞೆ ಸ್ವೀಕರಿಸಿದ್ದಾರೆ’ ಎಂದು ಹೇಳಿದರು.

ಡ್ರಗ್ಸ್ ಸಾಗಣೆ, ಮಾರಾಟ ಕಂಡುಬಂದರೆ ಸಾರ್ವಜನಿಕರು ‘ನಮ್ಮ 112’ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಬೇಕು

ಬಿ. ದಯಾನಂದ್, ನಗರ ಪೊಲೀಸ್ ಕಮಿಷನರ್

‘ಡ್ರಗ್ಸ್ ಸಾಗಣೆ ಹಾಗೂ ಮಾರಾಟ ಪ್ರಕರಣದಲ್ಲಿ ಸಿಕ್ಕಿಬಿದ್ದಿರುವ ಆರೋಪಿಗಳ ದತ್ತಾಂಶ ಸಂಗ್ರಹಕ್ಕೆ ‘ಬಿಸಿಪಿ ಎನ್‌ಡಿಪಿಎಸ್’ ಪೋರ್ಟಲ್ ರೂಪಿಸಲಾಗಿದೆ. ಪೊಲೀಸರು ಈ ವ್ಯವಸ್ಥೆಯಿಂದ ಆರೋಪಿಗಳ ಜಾಡು ಪತ್ತೆ ಮಾಡುತ್ತಿದ್ದಾರೆ’ ಎಂದು ಹೇಳಿದರು.

ವಿಶೇಷ ಕಾರ್ಯಾಗಾರ

ಮಾದಕ ವಸ್ತು ನಿಯಂತ್ರಣ ಕಾಯ್ದೆ (ಎನ್‌ಡಿಪಿಎಸ್) ಹಾಗೂ ಅದರ ತಿದ್ದುಪಡಿಗಳ ಬಗ್ಗೆ ಪೊಲೀಸರಿಗೆ ಅರಿವು ಮೂಡಿಸಲು ಸಿಸಿಬಿ ಕಚೇರಿಯಲ್ಲಿ ಸೋಮವಾರ ವಿಶೇಷ ಕಾರ್ಯಾಗಾರ ನಡೆಸಲಾಯಿತು.

ಕಾರ್ಯಾಗಾರ ಉದ್ಘಾಟಿಸಿದ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಅಲೋಕ್ ಮೋಹನ್, ‘ಕಾಯ್ದೆ ಬಗ್ಗೆ ಹೆಚ್ಚು ಜ್ಞಾನ ಹೊಂದಿರಬೇಕು. ಸೂಕ್ತ ಪುರಾವೆಗಳ ಮೂಲಕ ಆರೋಪಿಗಳಿಗೆ ಶಿಕ್ಷೆ ಕೊಡಿಸಬೇಕು’ ಎಂದರು ರಾಜ್ಯದ 100 ಪೊಲೀಸ್ ಅಧಿಕಾರಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಪತ್ನಿಗೆ ಇರಿತ: ರೌಡಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಯ ಶೀಲ ಶಂಕಿಸಿ ತೊಡೆಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ್ದ ಆರೋಪದಡಿ ರೌಡಿ ದಯಾನಂದ್‌ನನ್ನು ಆಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ಬಜಾರ್ ಸ್ಟ್ರೀಟ್‌ನ ನಿವಾಸಿ ದಯಾನಂದ್, ಅಪರಾಧ ಹಿನ್ನೆಲೆಯುಳ್ಳವ. ಅಶೋಕನಗರ ಠಾಣೆಯ ರೌಡಿ ಪಟ್ಟಿಯಲ್ಲಿ ಈತನ ಹೆಸರಿದೆ. 10 ದಿನಗಳ ಹಿಂದೆಯಷ್ಟೇ ಜಾಮೀನು ಮೇಲೆ ಜೈಲಿನಿಂದ ಬಿಡುಗಡೆಯಾಗಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೆಲಸಕ್ಕೆ ಹೋಗುತ್ತಿದ್ದ ಪತ್ನಿ, ಸಹೋದ್ಯೋಗಿ ಜೊತೆ ಹೆಚ್ಚು ಮಾತನಾಡುತ್ತಿದ್ದರು. ಜೈಲಿನಿಂದ ಬರುತ್ತಿದ್ದಂತೆ ಪತ್ನಿ ಮೊಬೈಲ್ ಪರಿಶೀಲಿಸಿದ್ದ. ಸಲುಗೆ ಇಟ್ಟುಕೊಂಡಿರುವುದಾಗಿ ಅನುಮಾನಪಟ್ಟು ಪತ್ನಿಗೆ ಹೊಡೆದಿದ್ದ. ಪತ್ನಿಯ ಹೇಳಿಕೆ ಪಡೆದು ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ಕುಟುಂಬ ಕಲಹ: ನಿರ್ಮಾಪಕನ ಕುಟುಂಬ ದೂರು

ಬೆಂಗಳೂರು: ಕೌಟುಂಬಿಕ ಕಲಹದಿಂದಾಗಿ ಸಿನಿಮಾ ನಿರ್ಮಾಪಕ ಟಿ.ಚಂದ್ರಶೇಖರ್ ಹಾಗೂ ಅವರ ಪತ್ನಿ, ಚನ್ನಮ್ಮನ ಕೆರೆ ಅಚ್ಚುಕಟ್ಟು ಠಾಣೆ ಮೆಟ್ಟಿಲೇರಿದ್ದಾರೆ. ಇಬ್ಬರೂ ಪ್ರತ್ಯೇಕ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ

‘ಡ್ರಗ್ಸ್ ವ್ಯಸನಿಯಾಗಿರುವ ಪತ್ನಿ ಅಕ್ರಮ ಸಂಬಂಧ ಇಟ್ಟುಕೊಂಡಿದ್ದಾರೆ. ಪ್ರಶ್ನಿಸಿದ್ದಕ್ಕೆ ಹಲ್ಲೆ ಮಾಡಿದ್ದಾರೆ’ ಎಂದು ಸಿನಿಮಾ ನಿರ್ಮಾಪಕ ಟಿ.ಚಂದ್ರಶೇಖರ್ ದೂರು ನೀಡಿದ್ದಾರೆ.

ಪ್ರತಿ ದೂರು ನೀಡಿರುವ ಪತ್ನಿ, ‘ನನ್ನ ಮೇಲೆ ಪತಿ ಹಲ್ಲೆ ಮಾಡಿದ್ದಾರೆ. ಮನೆಯಲ್ಲಿ ಡ್ರಗ್ಸ್ ಇಟ್ಟು ಜೈಲಿಗೆ ಕಳುಹಿಸುವುದಾಗಿ ಬೆದರಿಸಿದ್ದಾರೆ. ನನ್ನ ಸ್ನೇಹಿತನಿಗೂ ಹೊಡೆದು ಕೊಲೆ ಮಾಡುವುದಾಗಿ ಹೆದರಿಸಿದ್ದಾರೆ’ ಎಂದಿದ್ದಾರೆ.

ಕೊಲೆ ಯತ್ನ: ಆರೋಪಿ ಬಂಧನ

ಬೆಂಗಳೂರು: ‘ವೈಷ್ಣವಿ ಬಿಲ್ಡರ್ಸ್ ಮಾಲೀಕ ಗೋವಿಂದರಾಜು ಪುತ್ರ ದರ್ಶನ್ ಮೇಲೆ ಹಲ್ಲೆ ಮಾಡಿ ಕೊಲೆಗೆ ಯತ್ನಿಸಿದ್ದ ಆರೋಪದಡಿ ವೇದಾಂತ್ ದುಗಾರ್‌ನನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ‘ ಪೊಲೀಸರು ಬಂಧಿಸಿದ್ದಾರೆ.

‘ವೇದಾಂತ್ ಸಂಬಂಧಿಕರು ನೇಪಾಳದಲ್ಲಿದ್ದಾರೆ. ಕೃತ್ಯದ ಬಳಿಕ ಆತ ನೇಪಾಳಕ್ಕೆ ಹೋಗಿದ್ದ. ಆತ ಬೆಂಗಳೂರಿಗೆ ವಾಪಸು ಬರುತ್ತಿದ್ದಂತೆ ಬಂಧಿಸಲಾಯಿತು’ ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

ಇನ್‌ಸ್ಪೆಕ್ಟರ್ ಅಮಾನತು

ಬೆಂಗಳೂರು: ಅಕ್ರಮ ಚಟುವಟಿಕೆ ಮೇಲೆ ನಿಗಾ ವಹಿಸದೇ ಕರ್ತವ್ಯಲೋಪ ಎಸಗಿದ್ದ ಆರೋಪದಡಿ ಅಶೋಕನಗರ ಠಾಣೆಯ ಇನ್‌ಸ್ಪೆಕ್ಟರ್ ಶ್ರೀಕಾಂತ್ ತೋಟಗಿ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಠಾಣೆ ವ್ಯಾಪ್ತಿಯ ದಿ ಪ್ರೈಡ್ ಹೋಟೆಲ್ ಮೇಲೆ ಸಿಸಿಬಿ ಪೊಲೀಸರು ಇತ್ತೀಚೆಗಷ್ಟೇ ದಾಳಿ ಮಾಡಿದ್ದರು. ಮಾನವ ಕಳ್ಳಸಾಗಣೆ ಮೂಲಕ ಯುವತಿಯರನ್ನು ಕರೆತಂದು ಅಕ್ರಮ ಚಟುವಟಿಕೆ ನಡೆಸುತ್ತಿದ್ದ ಸಂಗತಿಯನ್ನು ಪತ್ತೆ ಮಾಡಿದ್ದರು.

‘ಇಲ್ಲಿ ಹಲವು ದಿನಗಳಿಂದ ಅಕ್ರಮ ಚಟುವಟಿಕೆ ನಡೆಯುತ್ತಿದೆ. ಇದರ ತಡೆಗೆ ಇನ್‌ಸ್ಪೆಕ್ಟರ್ ಗಮನ ಹರಿಸಿರಲಿಲ್ಲ’ ಎಂದು ಸಿಸಿಬಿ ಪೊಲೀಸರು ವರದಿ ನೀಡಿದ್ದರು. ಕೇಂದ್ರ ವಿಭಾಗದ ಡಿಸಿಪಿ ಶ್ರೀನಿವಾಸ್ ಗೌಡ ವರದಿ ಪರಿಶೀಲಿಸಿದ್ದ ಕಮಿಷನರ್ ದಯಾನಂದ್, ಅಮಾನತು ಮಾಡಿ ಸೋಮವಾರ ಆದೇಶ ಹೊರಡಿಸಿದ್ದಾರೆ.

ಚೆಕ್ ಬೌನ್ಸ್: ಮಾಜಿ ಶಾಸಕ ನರಸಿಂಹಸ್ವಾಮಿಗೆ ₹65 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೆಕ್ ಬೌನ್ಸ್ ಆರೋಪದ ಪ್ರಕರಣದಲ್ಲಿ ಮಾಜಿ ಶಾಸಕ ಹಾಗೂ ದಿವಂಗತ ಆರ್.ಎಲ್.ಜಾಲಪ್ಪ ಅವರ ಪುತ್ರ ಜೆ.ನರಸಿಂಹ ಸ್ವಾಮಿ ಅವರನ್ನು ತಪ್ಪಿತಸ್ಥ ಎಂದು ತೀರ್ಮಾನಿಸಿರುವ ಜನಪ್ರತಿನಿಧಿಗಳ ಕೋರ್ಟ್ ₹ 65 ಲಕ್ಷ ದಂಡ ವಿಧಿಸಿದೆ.

ಈ ಕುರಿತಂತೆ ಪ್ರಕಾಶ್ ಕುಮಾರ್ ಯರಪ್ಪ ನೀಡಿದ್ದ ದೂರಿನ ವಿಚಾರಣೆ ನಡೆಸಿದ, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ’ದ ನ್ಯಾಯಾಧೀಶೆ ಜೆ.ಪ್ರೀತ್, ‘ಆರೋಪಿಯು ದಂಡ ಪಾವತಿ ಮಾಡದೇ ಹೋದಲ್ಲಿ ಆರು ತಿಂಗಳ ಜೈಲು ಶಿಕ್ಷೆ ಅನುಭವಿಸಬೇಕು’ ಎಂದು ಸೋಮವಾರ ಆದೇಶಿಸಿದ್ದಾರೆ.

‘ದಂಡದ ಮೊತ್ತ ₹ 65 ಲಕ್ಷದಲ್ಲಿ ₹ 64 ಲಕ್ಷದ 95 ಸಾವಿರವನ್ನು ದೂರುದಾರ ಪ್ರಕಾಶ್ ಕುಮಾರ್ ಯರಪ್ಪ ಅವರಿಗೆ ನೀಡಬೇಕು. ಉಳಿದ ₹ 5 ಸಾವಿರ ಮೊತ್ತವನ್ನು ರಾಜ್ಯ ಸರ್ಕಾರಕ್ಕೆ ಪಾವತಿಸಬೇಕು‘ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಮಣಿಪಾಲ್ ಸೆಂಟರ್‌ನಲ್ಲಿ ಅಂಚೆ ಪಾರ್ಸೆಲ್ ಬುಕ್ಕಿಂಗ್ ಸೇವೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಅಂಚೆ ವೃತ್ತದ ‘ಡೋರ್ ಸ್ಟೆಪ್ ಬುಕ್ಕಿಂಗ್ ಆಫ್ ಪಾರ್ಸೆಲ್ಸ್ ಥ್ರೂ ಮೊಬೈಲ್ ವ್ಯಾನ್ಸ್’ ಸೇವೆ ಬೆಂಗಳೂರಿನ ಎಂ.ಜಿ.ರಸ್ತೆಯಲ್ಲಿರುವ ಮಣಿಪಾಲ್ ಸೆಂಟರ್‌ನಲ್ಲಿ ಸೋಮವಾರ ಆರಂಭಗೊಂಡಿತು.

ನಿಗದಿತ ಪ್ರದೇಶದ ಸಾರ್ವಜನಿಕರು ಪಾರ್ಸೆಲ್ ಬುಕ್ಕಿಂಗ್ ಸೇವೆಯನ್ನು ಹೆಚ್ಚಿನ ಶುಲ್ಕ ನೀಡದೇ ಪಡೆಯಬಹುದು. ಮೊಬೈಲ್ ವ್ಯಾನ್ ನಿತ್ಯ ಮಧ್ಯಾಹ್ನ 2.30ಕ್ಕೆ ಮಣಿಪಾಲ್ ಸೆಂಟರ್‌ಗೆ ಬರಲಿದ್ದು, 3.30ರವರೆಗೆ ಇರಲಿದೆ. ಬೆಂಗಳೂರಿನ ಇತರೆಡೆಗೆ ಈ ಸೇವೆ ವಿಸ್ತರಿಸುವ ಉದ್ದೇಶವಿದೆ ಎಂದು ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್.ರಾಜೇಂದ್ರ ಕುಮಾರ್ ಮಾಹಿತಿ ನೀಡಿದರು. ಬೆಂಗಳೂರು ಅಂಚೆ ಕಚೇರಿ ವ್ಯಾಪ್ತಿಯಲ್ಲಿ ಪಾರ್ಸೆಲ್ ಬುಕ್ ಮಾಡಲು ಮೊಬೈಲ್ ಸಂಖ್ಯೆ 94808 09797 ಸಂಪರ್ಕಿಸಬಹುದು. ಪ್ರಾಯೋಗಿಕವಾಗಿ 20 ದಿನದ ಹಿಂದೆ ಅಬ್ಬಿಗೆರೆ–ಪೀಣ್ಯದಲ್ಲಿ ಆರಂಭಿಸಿದ್ದೆವು. ಈವರೆಗೆ 1,124 ಪಾರ್ಸೆಲ್‌ಗಳು ಬಂದಿವೆ’ ಎಂದರು.

ಎಂ.ಜಿ. ರಸ್ತೆಯು ಜನರಿಗೆ ಹೆಚ್ಚು ಅನುಕೂಲಕರ’ ಎಂದು ಹೇಳಿದರು.

ಚಿತ್ರಾವಳಿ

ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ, ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಜೆಡಿಎಸ್ ವರಿಷ್ಠ, ರಾಜ್ಯಸಭೆ ಸದಸ್ಯ ಎಚ್‌.ಡಿ. ದೇವೇಗೌಡ ಅವರನ್ನು ಪದ್ಮನಾಭನಗರದಲ್ಲಿರುವ ಅವರ ಮನೆಯಲ್ಲಿ ಭೇಟಿ ಮಾಡಿದರು

ಟಿ.ವಿ ವಾಹಿನಿಯೊಂದರ ಕ್ಯಾಮೆರಾಮನ್ ಬಿ.ರಾಜು ಅವರ ಕುಟುಂಬದ ನಿರ್ವಹಣೆಗೆ ಸಚಿವ ಜಮೀರ್ ಅಹಮದ್ ಖಾನ್ ಅವರು ಸೋಮವಾರ ₹2 ಲಕ್ಷ ಮೊತ್ತದ ಚೆಕ್ ನೀಡಿದರು. ರಾಜು ಅವರ ಕಾಲಿನ ಶಸ್ತ್ರಚಿಕಿತ್ಸೆಯ ವೆಚ್ಚವನ್ನು ಭರಿಸಲಾಗುವುದು ಎಂದು ಭರವಸೆ ನೀಡಿದರು. ಸಚಿವರು ತಮ್ಮ ವೇತನವನ್ನು ಆರೋಗ್ಯ ಚಿಕಿತ್ಸೆಗೆ ಮೀಸಲಿಟ್ಟಿದ್ದಾರೆ ಎಂದು ಹೇಳಿಕೆ ತಿಳಿಸಿದೆ.

ಮೈಸೂರು- ಬೆಂಗಳೂರು ದಶಪಥ ಎಕ್ಸ್‌ಪ್ರೆಸ್ ಹೆದ್ದಾರಿ

ಎಕ್ಸ್‌ಪ್ರೆಸ್ ಅಧ್ಯಯನಕ್ಕೆ ತಾಂತ್ರಿಕ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಸಂಭವಿಸುತ್ತಿರುವ ಸರಣಿ ಅಪಘಾತ, ಮೂಲಸೌಲಭ್ಯಗಳ ಕೊರತೆ, ಸರ್ವೀಸ್ ರಸ್ತೆಯಲ್ಲಿ ನೀರು ಸಂಗ್ರಹ ಸೇರಿ ವಿವಿಧ ಸಮಸ್ಯೆಗಳ ಅಧ್ಯಯನಕ್ಕೆ ತಾಂತ್ರಿಕ ತಂಡ ರಚಿಸಲಿದ್ದು, ಈ ತಂಡ ಸಮಗ್ರ ಅಧ್ಯಯನ ನಡೆಸಿ ವರದಿ ಸಲ್ಲಿಸಲಿದೆ’ ಎಂದು ಕೃಷಿ ಸಚಿವ ಎನ್.ಚಲುವರಾಯ ಸ್ವಾಮಿ ತಿಳಿಸಿದರು.

ವಿಧಾನಸೌಧದಲ್ಲಿ ಸೋಮವಾರ ನಡೆದ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

‘ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು ಸೇರಿದಂತೆ ಹೆದ್ದಾರಿಯಲ್ಲಿ ಸಿಗುವ ನಗರ, ಪಟ್ಟಣಗಳಿಗೆ ಪ್ರವೇಶ ಮತ್ತು ನಿರ್ಗಮನ ಪಥಗಳು ನಿರ್ಮಾಣಗೊಳ್ಳಬೇಕಿದೆ. ಸಾರ್ವಜನಿಕರ ದೂರುಗಳನ್ನು ಆಧರಿಸಿ ತಾಂತ್ರಿಕ ತಂಡ ಸಮಗ್ರ ಅಧ್ಯಯನ ನಡೆಸಲಿದೆ’ ಎಂದರು.

‘ಅಪಘಾತಗಳ ಹೆಚ್ಚಳಕ್ಕೆ ಕಾರಣಗಳೇನು, ಸ್ಥಳಗಳಾವುವು, ಮಳೆ ನೀರು ರಸ್ತೆಯಲ್ಲಿ ನಿಲ್ಲಲು ಕಾರಣವೇನು, ಪ್ರಾಧಿಕಾರದ ಅಧಿಕಾರಿಗಳು ಯಾವ ಕ್ರಮ ಕೈಗೊಂಡಿದ್ದಾರೆ ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗಿದೆ’ ಎಂದರು.

‘ಎಕ್ಸ್‌ಪ್ರೆಸ್ ಕಾಮಗಾರಿ ಆರಂಭವಾದಾಗ ಅಧಿಕೃತ ಒಪ್ಪಂದದಲ್ಲಿ ಯಾವ ವಿಷಯಗಳು ಇದ್ದವು ಎಂಬ ಬಗ್ಗೆ ಸ್ಪಷ್ಟತೆ ಬೇಕಾಗಿದೆ. ಒಪ್ಪಂದದ ನಿಯಮಗಳನ್ನು ಪಾಲಿಸಲಾಗಿದೆಯೇ ಎಂದು ತಿಳಿಯಬೇಕಿದೆ. ಕಾಮಗಾರಿ ಸಂಪೂರ್ಣಗೊಳ್ಳದೇ ಏಕೆ ಟೋಲ್ ಸಂಗ್ರಹ ಮಾಡಲಾಗುತ್ತಿದೆ ಎಂಬ ಬಗ್ಗೆ ಸ್ಪಷ್ಟತೆ ಬೇಕಾಗಿದೆ. ಈ ಎಲ್ಲಾ ವಿಚಾರ ಕುರಿತು ತಾಂತ್ರಿಕ ತಂಡ ಅಧ್ಯಯನ ಮಾಡಲಿದೆ’ ಎಂದರು.

ಸಂಸದೆ ಸುಮಲತಾ, ಶಾಸಕರಾದ ಪಿ.ಎಂ. ನರೇಂದ್ರಸ್ವಾಮಿ, ರಮೇಶ್ ಬಂಡಿಸಿದ್ದೇಗೌಡ, ದಿನೇಶ್ ಗೂಳಿಗೌಡ, ಮಧು ಮಾದೇಗೌಡ, ರವಿಕುಮಾರ್ ಗಣಿಗ, ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್, ಹೆದ್ದಾರಿ ಪ್ರಾಧಿಕಾರ, ದಿಲೀಪ್ ಬಿಲ್ಡ್‌ಕಾನ್ ಲಿಮಿಟೆಡ್ ಸಂಸ್ಥೆಯ ಅಧಿಕಾರಿಗಳು ಇದ್ದರು.

ಮುಖ್ಯಮಂತ್ರಿ ನೇತೃತ್ವದಲ್ಲಿ ಸಭೆ

‘ತಾಂತ್ರಿಕ ತಂಡದ ವರದಿ ಆಧರಿಸಿ ದಶಪಥ ಹೆದ್ದಾರಿಯ ಸಮಸ್ಯೆಗಳ ಕುರಿತು ಮುಖ್ಯಮಂತ್ರಿ ಸಮ್ಮುಖದಲ್ಲಿ ಸಭೆ ನಡೆಸಲಿದ್ದು, ಆಗಬೇಕಾಗಿರುವ ಕಾಮಗಾರಿಗಳ ಬಗ್ಗೆ ಕೇಂದ್ರ ಹೆದ್ದಾರಿ ಸಚಿವರು ಹಾಗೂ ಹೆದ್ದಾರಿ ಪ್ರಾಧಿಕಾರಿಗಳ ಗಮನಕ್ಕೆ ತರಲಾಗುವುದು’ ಎಂದು ಚಲುವರಾಯಸ್ವಾಮಿ ಹೇಳಿದರು.

‘ಸದ್ಯ ಹೆದ್ದಾರಿಯಲ್ಲಿ ನಡೆಯುತ್ತಿರುವ ಸರಣಿ ಅಪಘಾತಗಳ ತಡೆಗೆ ಶೀಘ್ರ ಕ್ರಮ ಕೈಗೊಳ್ಳಬೇಕು. ವಾಹನಗಳ ವೇಗ ನಿಯಂತ್ರಣದ ಮೇಲೆ ಪ್ರಾಧಿಕಾರದ ಅಧಿಕಾರಿಗಳು ನಿಗಾ ವಹಿಸಬೇಕು’ ಎಂದರು.

‘ಚುನಾವಣೆಗೆ ಮೊದಲು ಪಕ್ಷದ ಸಲುವಾಗಿ ಹೆದ್ದಾರಿ ಉದ್ಘಾಟನೆ ಮಾಡಿದ್ದಾರೆ. ಹೆದ್ದಾರಿ ಆದಮೇಲೆ ಅಪಘಾತಗಳ ಸಂಖ್ಯೆ ಕಡಿಮೆ ಆಗಬೇಕಿತ್ತು. ಆದರೆ, ಇದೀಗ ಅಪಘಾತ ಸಂಖ್ಯೆ ಜಾಸ್ತಿ ಆಗಿದೆ. ಭೂಸ್ವಾಧೀನ ಪ್ರಕ್ರಿಯೆಯೇ ದೊಡ್ಡ ಸಮಸ್ಯೆಯಾಗಿದೆ. ಸಾಕಷ್ಟು ಲೋಪಗಳಿವೆ. ಎಲ್ಲ ಸಮಸ್ಯೆ ಸರಿಯಾಗುವವರೆಗೂ ಶ್ರೀರಂಗಪಟ್ಟಣ ಬಳಿ ಟೋಲ್ ಸಂಗ್ರಹಿಸದಿರಲು ಸೂಚಿಸಿದ್ದೇವೆ’ ಎಂದು ಹೇಳಿದರು.

ಬೆಂಗಳೂರು– ಮಂಗಳೂರು ಹೆದ್ದಾರಿಯೇ ಇದಕ್ಕಿಂತ ಎಷ್ಟೋ ಉತ್ತಮವಾಗಿದೆ. ಪಾಪ, ಸಂಸದ ಪ್ರತಾಪ್ ಸಿಂಹ ಅವರಿಗೆ ಇವೆಲ್ಲ ಏನೂ ಗೊತ್ತಿಲ್ಲ

ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENT And Finance Now funds are Available on Lowinterest against properties mortgage Land/Building, Land development/ projects Contract-7204995189

EDUCATIONAL

Diploma Courses

DIPLOMA IN Student Counselling, 6-months, ONLINE, Starts:11-July WhatsApp: 9886044221 www.darwinpsychologycentre.com

JOB OPPORTUNITIES

Teachers/ Professors

VALLABHA INTERNATIONAL School Somanahalli, Kanakapura Road requires Highschool Teachers for Maths & Science. Walk-in Call: 9606369681

RENTAL PROPERTIES

Accommodation Available

Commercial

6500 SFT Office Space partially furnished spread over 2 floors, reserved parking, generator, lift located near Double Road Lalbagh gate Hosur Rd. 9844005254

GROUND FLOOR available for Office space, Doctors, C.A.'s, Advocates available on Rent 1500 sft. 5th A Main road facing ,HRBR layout, Kammanahalli, Bengaluru. Contact - 9019146695

REAL ESTATE SELLING

House

Kengeri

HOUSE FOR SALE Kengeri Upanagara, Bande Mata, Arunachalam Layout, 1st Cross, East Facing: 28x39 sft., 2BHK, Ground, First, Second and Third Floor. 9731751079

TOURS & TRAVEL

Travel

CONTACT ORCHID Travel and Tours, Basavanagudi to Book 20 Days Australia and Newzealand Group Tour, Package cost Includes Air Tickets, visa Accommodation in 4 Star Hotel, Indian Meal, Tour Manager from Bangalore, Call: 9900080796 9880100099

DH DECCAN HERALD
To Place your ad in Deccan Herald & Prajavani Classifieds
For details contact :
9901641752 : 9886213331
9845114560 : 9731810277
080 - 45557163 / 164

CONNECT ಕ್ಲಾಸಿಫೈಡ್ಸ್

ಆರ್ಟಿಸನ್ಸ್ ಬಜಾರ್
Artisans Bazaar
There is a memory in every single piece of art.
Date : 27th June to 2nd July, 2023
Timings: 11 AM to 7 PM
STARTS TODAY
Arts, Crafts & Handlooms Exhibition
100+ Shopping Stalls | Live Performance & More
Entry Free! (6 Days Exhibition)
The Puppet Show
Live Performance
2nd July 2023
5.00 PM to 6:30 PM
Entry Free!
Organized By
Grand Flea Market
For Details Contact
9036658774 / 6364685716
Karnataka Chitrakala Parishath,
Kumara Krupa Road, Near Shivananda Circle
Bengaluru -560 001.
HANDLOOMS | HOME DECOR | HANDICRAFTS | CLOTHING | JEWELLERS

PERSONAL

Change of Name

CHANGE OF NAME
I, **VEENA** W/o JC763026W, Ex-Sub Hony Capt Ramesha D K R/at.# 101/1, 3rd Floor, 8th Cross, Domlur, Bangalore- 71 have changed my name to **VEENA N R** vide affidavit dt.21/06/2023 before Notary P.N. Ganesha Bengaluru

I, PRANAV KASHYAP, residing at 2B, Anandi Villa, 98/4, 6th Main, 13th Cross, Malleswaram, Bangalore 560003, have changed my name from PRANAV KASHYAP to PRANAV BALASUBRAMANIAN KASHYAP, vide affidavit dated 22/06/2023, sworn before Kundan Babu M, Notary, Bangalore.

CHANGE OF NAME
I, **SOKAVATHI** W/o No. 13831720, Rank: NK(MT) K.P. Ananda, R/at. # 77, Near Deepa Stores, Avalahalli, Old Madras Road, Virgonagar, Bengaluru- 560049, have changed my name to **Y.S.SOKAVATHY** vide affidavit dated 26/05/2023 before Notary L. Gopalakrishna, Bengaluru

I, ANUSHKA V, resident of GA Westwood Apartment, 69, 17th Cross, Margosa Road, Malleswaram, Bangalore 560055, have changed my name from ANUSHKA V to ANUSHKA VENKATESH, vide affidavit dated 22/06/2023, sworn before Kundan Babu M., Notary, Bangalore.

CHANGE OF NAME
I, **JC763026W,** Ex-Sub Hony Capt Ramesha D K R/at.# 101/1, 3rd Floor, 8th Cross, Domlur, Bangalore- 560071 have changed my minor son's name from **ASHWIN** to **ASHWIN KASHYAP** vide affidavit dt.21/06/2023 before Notary P.N. Ganesha Bengaluru

I, ARCHNA JAIN, residing at Bengaluru-20 have changed my name as ARCHANA JAIN, vide affidavit dated 26/06/2023 before Notary P.C.Ramaiah, Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

2nd PU Failed?
Don't be left behind!
A golden opportunity to study degree under any University this academic year and save one precious year of your life.
BE, MBBS, BSc, BBA, BCA
and other degrees
Limited seats. For admissions call:
2nd ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:
7846000222

INVESTORS ATTENTION
BUSINESS INVESTMENT OPPORTUNITY
Min 3 Crores & above, with ROI up to 10% Plus
6,500 sqft SUPER DELUXE FLAT for Lease / Sale in Malleswaram, Near Sankey Lake, Prominent Area for Vegetarians only.
3 BHK READY FLAT FOR SALE / LEASE in K.R. Puram / Horamavu 2200 sqft.
PROPERTIES FOR SALE / LEASE
Fetching 10% Plus ROI with rentals available.
Immediate Investors only may Apply.
Mr. Kumar 76 766 766 22
Landline : 080 2336 36 46
Email : prashasthj1995@gmail.com
JINESHWAR MEDIA COMPANY

I,PRACHI KAUSTABH ACHARYA, changed-my daughter's name-from MIHIKA ACHARYA to MIHIKA KAUSTABH ACHARYA dtd.21.06.2023. Sworn before_notary H.S.Sakal Aradhya, Bengaluru

I,PRACHI KAUSTABH ACHARYA,changed my-son's name-from AVIRAL ACHARYA to AVIRAL KAUSTABH ACHARYA dtd.21.06.2023. Sworn before_notary H.S.Sakalesh Aradhya, Bengaluru

I,PRACHI ACHARYA, changed-my name-to PRACHI KAUSTABH ACHARYA dated:21.06.2023. Sworn before notary H.S.Sakalesh Aradhya, Bengaluru.

ಒಂದೇ ಬಾರಿ 5 ವಂದೇ ಭಾರತ್ ದ ದೇಶವಾಸಿಗಳಿಗೆ ಉಡುಗೊರೆ

ದೇಶದ ಎಲ್ಲ ವಿದ್ಯುದೀಕರಣಗೊಂಡ ರೈಲು ಮಾರ್ಗ ಇರುವ ರಾಜ್ಯಗಳನ್ನು ತಲುಪಿದ ವಂದೇ ಭಾರತ್

ಭೋಪಾಲ್ (ರಾಣಿ ಕಮಲಪತಿ) – ಇಂದೋರ್ ವಂದೇ ಭಾರತ್ ಎಕ್ಸ್‌ಪ್ರೆಸ್

- ಭೋಪಾಲದ ಮಹಾಕಾಲ ನಗರ ಉಜ್ಜೈನಿಗೆ ತ್ವರಿತ ಸಂಪರ್ಕ
- ಭೋಪಾಲ್–ಇಂದೋರ್ ನಡುವೆ 1 ಗಂಟೆ ಪ್ರಯಾಣದ ಸಮಯ ಉಳಿತಾಯ
- ಭೋಜ್‌ಪುರ ಮತ್ತು ಇಂದೋರ್ ಸಮೀಪವಿರುವ ಬೌದ್ಧ ಧರ್ಮ ಸಂಚಿ ಮತ್ತು ಭೀಂಬೆಟ್ಕಾ ಮತ್ತು ಮಾಂಡೂ ಮತ್ತು ಓಂಕಾರೇಶ್ವರ ಪ್ರಮುಖ ಯುನೆಸ್ಕೋ ಪರಂಪರೆಯ ತಾಣಗಳಿಗೆ ಪ್ರವಾಸೋದ್ಯಮ ಉತ್ತೇಜನ

ಭೋಪಾಲ್ (ರಾಣಿ ಕಮಲಪತಿ) – ಜಬಲ್‌ಪುರ ವಂದೇ ಭಾರತ್ ಎಕ್ಸ್‌ಪ್ರೆಸ್

- ಭೋಪಾಲ್ – ಜಬಲ್‌ಪುರ ನಡುವಿನ ಪ್ರಯಾಣದ ಸಮಯದಲ್ಲಿ ಸುಮಾರು 1 ಗಂಟೆ ಉಳಿತಾಯ
- ಭೋಪಾಲ್ ಬಳಿಯ ಪಚ್ಮರ್ಹಿ, ತವಾ ಅಣೆಕಟ್ಟು ಮತ್ತು ಸಾತ್ಪುರ ಹುಲಿ ಸಂರಕ್ಷಿತ ಪ್ರದೇಶ ಮತ್ತು ಚೌಸಟ್ ಯೋಗಿನಿ ದೇವಸ್ಥಾನ, ಭೇಡಾಘಾಟ್, ಧುಂವಾಧರ್ ಜಲಪಾತ, ಜಬಲ್‌ಪುರ ಬಳಿಯ ಕಾನ್ಹಾ ರಾಷ್ಟ್ರೀಯ ಉದ್ಯಾನವನದ ಪ್ರವಾಸೋದ್ಯಮಕ್ಕೆ ಉತ್ತೇಜನ
- ಭೋಪಾಲ್ ಮತ್ತು ಜಬಲ್‌ಪುರ್ ನಡುವೆ ವೇಗದ, ಆರಾಮದಾಯಕ ಮತ್ತು ಉತ್ತಮ ಪ್ರಯಾಣದ ಅನುಭವ

ಈ ಮಾರ್ಗಕ್ಕೆ ಚಾಲನೆ

ರಾಂಚಿ – ಪಟನಾ ವಂದೇ ಭಾರತ್ ಎಕ್ಸ್‌ಪ್ರೆಸ್

- ಬಿಹಾರ ಮತ್ತು ಜಾರ್ಖಂಡ್ ರಾಜ್ಯದ ಮೊದಲ ವಂದೇ ಭಾರತ್ ರೈಲು. ಎರಡು ರಾಜಧಾನಿಗಳ ನಡುವಿನ ರೈಲು ಪ್ರಯಾಣ 1 ಗಂಟೆ 45 ನಿಮಿಷ ಕಡಿಮೆಯಾಗಿದೆ
- ದುರ್ಗಮ ಬೆಟ್ಟಗಳನ್ನು ಕತ್ತರಿಸಿ ನಿರ್ಮಿಸಿದ ಬರ್ಕಾಕಾನಾದಿಂದ ರಾಂಚಿಗೆ (ಸಿದ್ವರ್ ಮತ್ತು ಶಂಕಿ ಮೂಲಕ) ಹೊಸ ಮಾರ್ಗದಲ್ಲಿ ಓಡಿದ ಮೊದಲ ಪ್ರಯಾಣಿಕ ರೈಲು
- ರಾಂಚಿ ಮತ್ತು ಸುತ್ತಮುತ್ತಲಿನ ಪ್ರದೇಶಗಳ ನಿವಾಸಿಗಳು ಪಟ್ನಾ ಸಾಹಿಬ್, ಗುರು ಗೋಬಿಂದ್ ಸಿಂಗ್ ಜಿ ಅವರ ಜನ್ಮಸ್ಥಳ, ಬೋಧಗಯಾ, ಭಗವಾನ್ ಬುದ್ಧನ ಜ್ಞಾನದ ಸ್ಥಳ ಮತ್ತು ಪೂರ್ವಜರ ಮೋಕ್ಷದ ಸ್ಥಳವಾದ ಗಯಾಗೆ ಸುಲಭವಾಗಿ ಪ್ರಯಾಣಿಸಬಹುದು.

ಧಾರವಾಡ – ಕೆಎಸ್‌ಆರ್ ಬೆಂಗಳೂರು ವಂದೇ ಭಾರತ್ ಎಕ್ಸ್‌ಪ್ರೆಸ್

- ಧಾರವಾಡ–ಕೆಎಸ್ ಆರ್ ಬೆಂಗಳೂರು ಪ್ರಯಾಣದ ಸಮಯ 1 ಗಂಟೆ ಉಳಿತಾಯ
- ಉತ್ತರ ಕರ್ನಾಟಕದ ಹೆಬ್ಬಾಗಿಲು ಹುಬ್ಬಳ್ಳಿ–ಧಾರವಾಡ, ದೇಶದ ಸಿಲಿಕಾನ್ ವ್ಯಾಲಿ ಮತ್ತು ಸ್ಟಾರ್ಟ್ ಅಪ್ ರಾಜಧಾನಿ ಬೆಂಗಳೂರಿಗೆ ವೇಗದ ಸಂಪರ್ಕ
- ವ್ಯಾಪಾರ ಮತ್ತು ವಾಣಿಜ್ಯ ಕೇಂದ್ರ ಹುಬ್ಬಳ್ಳಿ ಮತ್ತು ಶೈಕ್ಷಣಿಕ ಕೇಂದ್ರ ಧಾರವಾಡದ ಯುವಜನರಿಗೆ ಶಿಕ್ಷಣ ಮತ್ತು ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುತ್ತದೆ

ಗೋವಾ (ಮಡಗಾಂವ್) – ಮುಂಬೈ ವಂದೇ ಭಾರತ್ ಎಕ್ಸ್‌ಪ್ರೆಸ್

- ಗೋವಾದ ಮೊದಲ ವಂದೇ ಭಾರತ್ ಎಕ್ಸ್‌ಪ್ರೆಸ್
- ಗೋವಾ–ಮುಂಬೈ ಪ್ರಯಾಣದ ಸಮಯ 1 ಗಂಟೆ ಉಳಿತಾಯ
- ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರವಾಸೋದ್ಯಮಕ್ಕೆ ಉತ್ತೇಜನ, ಈಗ ಪ್ರವಾಸಿಗರು ಪಶ್ಚಿಮ ಘಟ್ಟಗಳ ಅದ್ಭುತ ಸೌಂದರ್ಯವನ್ನು ಆನಂದಿಸಲು ಸಾಧ್ಯವಾಗುತ್ತದೆ

ವೀಡಿಯೊ ಕಾನ್ಫರೆನ್ಸಿಂಗ್ ಮೂಲಕ

ಶುಭಾರಂಭ

ನರೇಂದ್ರ ಮೋದಿ

ಪ್ರಧಾನಮಂತ್ರಿ

ಮೂಲಕ

ಗೌರವಪೂರ್ಣ ಉಪಸ್ಥಿತಿ

ಮಂಗುಭಾಯ್ ಛ. ಪಟೇಲ್
ರಾಜ್ಯಪಾಲರು, ಮಧ್ಯ ಪ್ರದೇಶ

ಸಿ. ಪಿ. ರಾಧಾಕೃಷ್ಣನ್
ರಾಜ್ಯಪಾಲರು, ಜಾರ್ಖಂಡ್
(ವೀಡಿಯೋ ಕಾನ್ಫರೆನ್ಸಿಂಗ್ ಮೂಲಕ)

ಥಾವರ್ ಚಂದ್ ಗೆಹಲೋಟ್
ರಾಜ್ಯಪಾಲರು, ಕರ್ನಾಟಕ
(ವೀಡಿಯೋ ಕಾನ್ಫರೆನ್ಸಿಂಗ್ ಮೂಲಕ)

ಪಿ. ಎಸ್. ಶ್ರೀಧರನ್ ಪಿಳ್ಳೈ
ರಾಜ್ಯಪಾಲ, ಗೋವಾ
(ವೀಡಿಯೋ ಕಾನ್ಫರೆನ್ಸಿಂಗ್ ಮೂಲಕ)

ಶಿವರಾಜ್ ಸಿಂಗ್ ಚೌಹಾಣ್
ಮುಖ್ಯಮಂತ್ರಿ, ಮಧ್ಯ ಪ್ರದೇಶ

ಸಿದ್ದರಾಮಯ್ಯ
ಮುಖ್ಯಮಂತ್ರಿ, ಕರ್ನಾಟಕ
(ವೀಡಿಯೋ ಕಾನ್ಫರೆನ್ಸಿಂಗ್ ಮೂಲಕ)

ಡಾ. ಪ್ರಮೋದ್ ಸಾವಂತ್
ಮುಖ್ಯಮಂತ್ರಿ, ಗೋವಾ
(ವೀಡಿಯೋ ಕಾನ್ಫರೆನ್ಸಿಂಗ್ ಮೂಲಕ)

ಪ್ರಹ್ಲಾದ್ ಜೋಶಿ
ಕೇಂದ್ರೀಯ ಸಂಸದೀಯ ವ್ಯವಹಾರಗಳು, ಕಲ್ಲಿದ್ದಲು ಮತ್ತು ಗಣಿಗಳ ಸಚಿವರು
(ವೀಡಿಯೋ ಕಾನ್ಫರೆನ್ಸಿಂಗ್ ಮೂಲಕ)

ಅಶ್ವಿನಿ ವೈಷ್ಣವ್
ಕೇಂದ್ರೀಯ ರೈಲ್ವೆ, ಸಂಚಾರ, ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವರು

ಅನ್ನಪೂರ್ಣಾ ದೇವಿ
ಕೇಂದ್ರೀಯ ಶಿಕ್ಷಣ ರಾಜ್ಯ ಸಚಿವೆ
(ವೀಡಿಯೋ ಕಾನ್ಫರೆನ್ಸಿಂಗ್ ಮೂಲಕ)

DD NEWS ಡಿಡಿ ನ್ಯೂಸ್ ನಲ್ಲಿ ಕಾರ್ಯಕ್ರಮದ ನೇರ ಪ್ರಸಾರವನ್ನು ವೀಕ್ಷಿಸಿ

27 ಜೂನ್, 2023 | ಬೆಳಗ್ಗೆ: 9:30 ಕ್ಕೆ | ರಾಣಿ ಕಮಲಪತಿ ರೈಲ್ವೆ ಸ್ಟೇಷನ್, ಭೋಪಾಲ

ಭಾರತೀಯ ರೈಲ್ವೆ

www.indianrailways.gov.in

ಕ್ಷೇಮ ಕುಶಲ

ಶಾಲೆ ಶುರುವಾದರೆ ಕಾಯಿಲೆಯೂ ಶುರುವಾಗಬೇಕೆ?

ಡಾ. ಕುಶ್ವಂತ್ ಕೋಳಿಬೈಲು

ಬೇಸಿಗೆಯ ರಜೆಯಲ್ಲಿ ಎರಡು ತಿಂಗಳುಗಳ ಕಾಲ ಮನೆಯಲ್ಲಿ ಮಜಾ ಮಾಡುತ್ತಿದ್ದ ಮಕ್ಕಳು ಶಾಲೆ ಪ್ರಾರಂಭವಾಗುತ್ತಿದ್ದಂತೆ ಅನಾರೋಗ್ಯ ಪೀಡಿತರಾದರೆ ಹೆತ್ತವರು ಆತಂಕಕ್ಕೆ ಒಳಗಾಗುವುದು ಸಹಜ. ಮನೆಯಲ್ಲಿ ಆರಾಮವಾಗಿದ್ದವರು ಶಾಲೆ ಶುರುವಾದ ನಂತರ ರೋಗಗ್ರಸ್ತರಾಗಲು ಶಾಲೆಯ ನೀರು, ಶೌಚಾಲಯ ಅಥವಾ ವಾತಾವರಣದಲ್ಲಿ ಏನಾದರು ಲೋಪವಿರಬಹುದೆಂದು ಶಂಕಿಸುವ ಮಂದಿಯೂ ಇದ್ದಾರೆ. ಶಾಲಾ ವಯಸ್ಸಿನ ಮಕ್ಕಳು ಕೆಲವು ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುವುದು

> ಶಾಲೆಗೆ ಹೋಗುವ ಮಕ್ಕಳಲ್ಲಿ ಶೀತ, ಜ್ವರ, ಸೇರಿ ಹಲವು ಸೋಂಕು ಕಂಡುಬಂದಾಗ ಹೆದರದೇ ತಜ್ಞವೈದ್ಯರಿಂದ ಚಿಕಿತ್ಸೆ ಒದಗಿಸಿ. ಜತೆಗೆ ಈ ಸೋಂಕುಗಳು ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿಯನ್ನು ಸಕ್ರಿಯಗೊಳಿಸುವ ಕೆಲಸವನ್ನೂ ಮಾಡುತ್ತವೆ ಎಂಬುದನ್ನು ನೆನಪಿಡಿ.

ನೈಸರ್ಗಿಕ ಪ್ರಕ್ರಿಯೆ ಎಂದು ಅವರಿಗೆ ತಿಳಿಹೇಳಿದರೆ ಹೆತ್ತವರ ಆತಂಕ ಸ್ವಲ್ಪ ಕಡಿಮೆಯಾಗಬಹುದು. ರಜಾದಿನಗಳನ್ನು ಮನೆಯಲ್ಲಿ ಮಕ್ಕಳು ಕಳೆಯುವಾಗ ಅವರು ಹೊರಗಡೆಯ ವಾತಾವರಣದಲ್ಲಿರುವ ಅನೇಕ ಸಾಂಕ್ರಾಮಿಕ ವೈರಸ್ ಮತ್ತು ಬ್ಯಾಕ್ಟೀರಿಯಾಗಳಿಂದ ದೂರವಿರುತ್ತಾರೆ. ಶಾಲೆಯ ಆರಂಭವಾಯಿತೆಂದರೆ, ಹಲವು ವಿವಿಧ ಬಡಾವಣೆ ಮತ್ತು ಊರುಗಳಿಂದ ವಿವಿಧ ಮಕ್ಕಳು ಒಂದೇ ಸೂರಿನಡಿ ಸೇರುತ್ತಾರೆ. ಆಯಾ ಪ್ರದೇಶಗಳಿಂದ ಮಕ್ಕಳು ಒಂದೇ ಸೂರಿನ ಕೆಳಗೆ ವಿವಿಧ ಸೋಂಕುಗಳನ್ನು ತರುತ್ತಾರೆ. ಒಂದು ಮಗುವಿಗೆ ವೈರಲ್ ಸೋಂಕು ಬಂದಿತೆಂದರೆ ಅದು ಗಾಳಿಯ ಮೂಲಕ ಮತ್ತೊಬ್ಬರಿಗೆ ಹರಡುತ್ತಾ ಹೋಗಿ ಉಳಿದ ಮಕ್ಕಳಲ್ಲೂ ಸೋಂಕನ್ನು ಉಂಟುಮಾಡುತ್ತದೆ. ಒಂದೇ ಕೋಣೆಯೊಳಗೆ ಕುಳಿತು, ಒಂದೇ ಗಾಳಿಯನ್ನು ಉಸಿರಾಡುವಾಗ ಈ ಮಾದರಿಯ ಸೋಂಕು ಹರಡದಂತೆ ತಡೆಯುವುದು ಸಾಧ್ಯವಿಲ್ಲ.

ಮಕ್ಕಳು ಬೆಳೆಯುವ ಹಂತದಲ್ಲಿ ವಿವಿಧ ವೈರಸ್ ಮತ್ತು ಬ್ಯಾಕ್ಟೀರಿಯಾಗಳ ಸೋಂಕು ತಗುಲಿದಾಗ ಅವರ ದೇಹದ ರೋಗನಿರೋಧಕ ವ್ಯವಸ್ಥೆಯು ಜಾಗೃತಗೊಂಡು 'ಆ್ಯಂಟಿಬಾಡಿ'ಗಳು ಉತ್ಪತ್ತಿಯಾಗುತ್ತವೆ. ವಿವಿಧ ರೋಗಾಣುಗಳ ವಿರುದ್ಧ ಆ್ಯಂಟಿಬಾಡಿ ಉತ್ಪಾದನೆಯಾಗುತ್ತಾ ಹೋದಂತೆ ದೇಹದ ರೋಗನಿರೋಧಕ ಶಕ್ತಿ ಬೆಳೆಯುತ್ತದೆ. ಈ ಆ್ಯಂಟಿಬಾಡಿಗಳು ಅದೇ ರೋಗಾಣುಗಳು ಮತ್ತೆ ದೇಹದೊಳಗೆ ಸೋಂಕು ತರುವುದನ್ನು ತಡೆಯುತ್ತದೆ. ಒಂದು ಪ್ರಬೇಧದ ರೋಗಾಣುವಿನ ವಿರುದ್ಧ ಸೃಷ್ಟಿಯಾದ ಆ್ಯಂಟಿಬಾಡಿಗಳು ಅದೇ ಪ್ರಭೇದ ಇತರ ರೋಗಾಣುಗಳ ವಿರುದ್ಧವೂ ಅಲ್ಪಮಟ್ಟಿಗಿನ ರಕ್ಷಣೆಯನ್ನು ಒದಗಿಸುತ್ತದೆ. ಹಾಗಾಗಿ ಶಾಲಾಮಕ್ಕಳಿಗೆ ಬರುವ ಶೀತ, ಜ್ವರ, ಗಂಟಲುನೋವು ಮುಂತಾದ ಸೋಂಕುಗಳು ಅವರ ದೇಹದ ರೋಗನಿರೋಧಕ ಶಕ್ತಿಯನ್ನು ಸಕ್ರಿಯಗೊಳಿಸುವ ಕೆಲಸವನ್ನೂ ಮಾಡುತ್ತದೆ. ವಾತಾವರಣದಲ್ಲಿ ಲಕ್ಷಾಂತರ ವೈರಾಣುಗಳಿವೆ ಅದರಲ್ಲಿ ಹೆಚ್ಚಿನವು ಗಂಭೀರ ಸೋಂಕನ್ನು ಉಂಟು ಮಾಡುವುದಿಲ್ಲ. ಅದರೆ ಈ ವೈರಾಣುಗಳಿಗೆ ತಮ್ಮ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಮತ್ತೊಂದು ಜೀವಿಯ ಕೋಶದೊಳಗೆ ಪ್ರವೇಶಿಸುವುದು ಅವರುಗಳಿಗೆ ಅನಿವಾರ್ಯ. ಹಾಗಾಗಿ ವೈರಾಣುಗಳು ತಾವು ಉಳಿಯಲು ಮತ್ತು ಬೆಳೆಯಲು ಮನುಷ್ಯನ ದೇಹವನ್ನು ನಂಬಿಕೊಂಡಿರುವ ಕಾರಣ ಈ ವೈರಲ್ ಸೋಂಕುಗಳು ಶಾಲೆಯಲ್ಲಿ ಮಕ್ಕಳಿಂದ ಮಕ್ಕಳಿಗೆ ಹರಡುವುದು ಸ್ವಾಭಾವಿಕ ಪ್ರಕ್ರಿಯೆ.

ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ಸುಮಾರು ಎರಡು ವರ್ಷಗಳ ಕಾಲ ಶಾಲಾ–ಕಾಲೇಜುಗಳು ತೆರೆದಿರಲಿಲ್ಲ. ಈ ಸಮಯದಲ್ಲಿ ಮನೆಯಲ್ಲೆ ಇದ್ದ ಮಕ್ಕಳಿಗೆ ಶೀತ ಮತ್ತು ಜ್ವರ ತರುವ ಯಾವುದೇ ಸೋಂಕು ತಗಲುವ ಸಾಧ್ಯತೆಗಳು ಇರಲಿಲ್ಲ. ಆ ಸಮಯದಲ್ಲಿ ಮಕ್ಕಳು ಮಾತ್ರವಲ್ಲದೆ ಹೊರಗಡೆ ಓಡಾಡುವ ವಯಸ್ಕರರು ಕೂಡ ಮಾಸ್ಕ್ ಬಳಸುತ್ತಿದ್ದ ಕಾರಣದಿಂದ ಹಿರಿಯರಲ್ಲಿಯೂ ಶೀತ ಮತ್ತು ಜ್ವರ ಹೆಚ್ಚಾಗಿ ಕಂಡು ಬರಲಿಲ್ಲ. ಈ ಎರಡು ವರ್ಷಗಳ ಕಾಲ ಮಕ್ಕಳು ಆ ವಯಸ್ಸಿನಲ್ಲಿ ಸ್ವಾಭಾವಿಕವಾಗಿ ಸೋಂಕನ್ನು ಉಂಟು ಮಾಡುತ್ತಿದ್ದ ನೂರಾರು ರೋಗಾಣುಗಳ ಸೋಂಕಿನಿಂದ ರಕ್ಷಿತರಾದರು. ಆದರೆ ಅವರ ದೇಹದಲ್ಲಿ ಈ ರೋಗಾಣುಗಳ ಸೋಂಕನ್ನು ತಡೆಗಟ್ಟುವ ರೋಗನಿರೋಧಕ ಶಕ್ತಿಯಿಲ್ಲ. ಇದೇ ಕಾರಣದಿಂದ ಶಾಲೆ ಶುರುವಾದ ನಂತರ ಮಕ್ಕಳು ಪದೇ ಪದೇ ಶೀತಜ್ವರಗಳಿಗೆ ತುತ್ತಾಗುತ್ತಿದ್ದಾರೆ. ಶೀತ ಮತ್ತು ಜ್ವರವನ್ನು ಹೊರತುಪಡಿಸಿ ಉಳಿದ ಸಾಂಕ್ರಾಮಿಕ ಚರ್ಮರೋಗಗಳು ಒಬ್ಬರಿಂದ ಮತ್ತೊಬ್ಬರಿಗೆ ಬಹುಬೇಗ ಹರಡುತ್ತವೆ. ಚಿಕನ್ ಪಾಕ್ಸ್, ಕೈ-ಕಾಲು ಮತ್ತು ಬಾಯಿ ರೋಗಗಳು ಕೂಡ ವೈರಸ್ ಮೂಲಕ ಬರುವ ರೋಗಗಳಾದುದರಿಂದ ಒಬ್ಬರಿಗೆ ಬಂದರೆ ಶಾಲೆಯ ಇತರ ಮಕ್ಕಳಿಗೂ ಬರುವ ಸಾಧ್ಯತೆಗಳು ಹೆಚ್ಚಿರುತ್ತದೆ.

ಚರ್ಮದಲ್ಲಿ ಕಜ್ಜಿಗಳು ಏಳುವ ಮತ್ತು ಜ್ವರ ಶುರುವಾಗುವ ಒಂದೆರಡು ದಿನಗಳ ಮೊದಲೇ ಮಕ್ಕಳು ಆ ಸೋಂಕನ್ನು ಅಕ್ಕಪಕ್ಕದ ಮಕ್ಕಳಿಗೆ ಹರಡಲು ಶುರುಮಾಡಿಬಿಟ್ಟಿರುತ್ತಾರೆ. ಹಾಗಾಗಿ ಸೋಂಕಿನ ರೋಗಲಕ್ಷಣಗಳು ಮಕ್ಕಳ ದೇಹದಲ್ಲಿ ವ್ಯಕ್ತವಾಗುವ ಮೊದಲೇ ಮಕ್ಕಳು ಸೋಂಕನ್ನು ಇತರರಿಗೆ ಹಬ್ಬಿಸಿರುವ ಕಾರಣದಿಂದ ಶಾಲೆಗಳಲ್ಲಿ ಮಕ್ಕಳಿಗೆ ಬರುವ ಸಾಮಾನ್ಯ ಸೋಂಕುಗಳನ್ನು ಸಂಪೂರ್ಣವಾಗಿ ನಿಯಂತ್ರಿಸುವುದು ಸಾಧ್ಯವಿಲ್ಲ.

ಸರ್ಕಾರದ ಕಡೆಯಿಂದ ಮಕ್ಕಳಿಗೆ ನೀಡುವ ಲಸಿಕೆಗಳು ಕೇವಲ ಮಾರಣಾಂತಿಕ ರೋಗಗಳ ವಿರುದ್ಧ ರಕ್ಷಣೆ ನೀಡುವುದಕ್ಕೆ ಮಾತ್ರ ಸೀಮಿತವಾಗಿದೆ. ಲಸಿಕೆಯ ಆವಿಷ್ಕಾರದ ಇತಿಹಾಸವನ್ನು ನೀವು ಮೆಲುಕು ಹಾಕಿದರೆ ಮಾರಕ ರೋಗಗಳಿಗೆ ಮಾತ್ರ ಲಸಿಕೆಯನ್ನು ಉತ್ಪಾದನಾ ಮಾಡಲಾಗುತ್ತಿತ್ತು. ಪೋಲಿಯೋ, ಧನುರ್ವಾಯು, ಗಂಟಲಮಾರಿ, ನಾಯಿಕೆಮ್ಮು ಮುಂತಾದ ರೋಗಗಳು 'ರಾಷ್ಟ್ರೀಯ ಲಸಿಕಾ ಕಾರ್ಯಕ್ರಮ'ದಿಂದಾಗಿ ಸಂಪೂರ್ಣ ನಿಯಂತ್ರಣಕ್ಕೆ ಬಂದಿದೆ. ಟೈಫಾಯ್ಡ್, ಹಿಪಟೈಟಿಸ್–ಎ, ಚಿಕನ್‌ಪಾಕ್ಸ್, ಫ್ಲೂ ಮುಂತಾದ ರೋಗಗಳಿಗೆ ಲಸಿಕೆಗಳು ಸರ್ಕಾರದ ಈ ಕಾರ್ಯಕ್ರಮದ ವ್ಯಾಪ್ತಿಯಲ್ಲಿ ಇಲ್ಲವಾದುದರಿಂದ ಆರ್ಥಿಕವಾಗಿ ಶಕ್ತರಾಗಿರುವವರು ಖಾಸಗಿ ಆಸ್ಪತ್ರೆಗಳಲ್ಲಿ ಈ ಲಸಿಕೆಗಳನ್ನು ಪಡೆಯುತ್ತಾರೆ. ಐದು ವರ್ಷದ ಒಳಗಿನ ಮಕ್ಕಳಿಗೆ ಜೀವಹಾನಿ ಮಾಡಬಲ್ಲ ಎರಡು ಪ್ರಮುಖ ರೋಗಗಳಾದ ನ್ಯುಮೋನಿಯಾ ಮತ್ತು ವಾಂತಿ-ಭೇದಿಯನ್ನು ನಿಯಂತ್ರಿಸುವ ಬಗ್ಗೆ ಆಲೋಚನೆಗಳು ನಡೆದವು. ಒಂದು ವರ್ಷದ ಒಳಗಿನ ಮಕ್ಕಳಲ್ಲಿ ತೀವ್ರ ರೀತಿಯ ಭೇದಿಯನ್ನು ಉಂಟುಮಾಡುವ ರೋಟಾ ವೈರಸ್ ಮತ್ತು ಮಕ್ಕಳಲ್ಲಿ ನ್ಯುಮೋನಿಯಾ, ಕಿವಿಸೋರುವಿಕೆ ಮತ್ತು ಮೆದುಳಿನ ಪೊರೆಯ ಸೋಂಕನ್ನು ಉಂಟುಮಾಡಬಲ್ಲ 'ಸ್ಟ್ರೆಪ್ಟೋಕೋಕಲ್ ನ್ಯುಮೋನಿಯೆ' (streptococcal pneumoniae) ಬ್ಯಾಕ್ಟೀರಿಯಾದ ಸೋಂಕನ್ನು ತಡೆಯುವ ಲಸಿಕೆಗಳೂ ಈಗ ಲಭ್ಯವಿವೆ.

ಮಕ್ಕಳಿಗೆ ಬರಬಲ್ಲ ಪ್ರತಿಯೊಂದು ಸೋಂಕನ್ನು ತಡೆಯಲೇಬೇಕೆಂಬ ಹಠಕ್ಕೆ ಬಿದ್ದರೆ ಮಕ್ಕಳನ್ನು ಶಾಲೆಗೆ ಕಳಿಸದೆ ಮನೆಯಲ್ಲಿ ಕೂಡಿಡಬೇಕಾಗುತ್ತದೆ. ಆದರೆ ಅದು ಸಾಧ್ಯವಾಗುವ ಮಾತಲ್ಲ. ಪ್ರತಿಯೊಂದು ವೈರಸ್ ಅಥವಾ ಬ್ಯಾಕ್ಟೀರಿಯಾದ ಸೋಂಕನ್ನು ತಡೆಯಲು ಅದರ ವಿರುದ್ಧ ಲಸಿಕೆ ತಯಾರಿಸುವುದು, ಅದನ್ನು ಪೂರೈಸುವುದು ಸಾಧ್ಯವಾಗದ ಕೆಲಸ. ಎಲ್ಲ ಸೋಂಕಿಗಳಿಗೂ ಲಸಿಕೆಯ ಅವಶ್ಯಕತೆ ಕೂಡ ಇರುವುದಿಲ್ಲ. ಶಾಲೆ ಶುರುವಾದ ನಂತರ ಮಕ್ಕಳಲ್ಲಿ ಕಂಡು ಬರುವ ಸೋಂಕುಗಳನ್ನು ಸೂಕ್ತ ಸಮಯದಲ್ಲಿ ವೈದ್ಯಕೀಯ ನೆರವು ಪಡೆದು ಔಷಧಗಳ ನೆರವಿನಿಂದ ಗುಣಪಡಿಸಬಹುದು. ❖

ಕೂದಲು ಸೌಂದರ್ಯಕ್ಕೂ ಆರೋಗ್ಯಕ್ಕೂ

ಡಾ. ವಿಜಯಲಕ್ಷ್ಮಿ ಪಿ.

'ಡಾಕ್ಟ್ರೇ, ವಿಪರೀತ ಕೂದಲು ಉದುರುತ್ತಿದೆ, ತಲೆ ನವೆ', ಎಂದು ಹೇಳುವ ರೋಗಿಗಳು ಅನೇಕರಿದ್ದಾರೆ. ಇಬ್ಬರು ಹೆಣ್ಣುಮಕ್ಕಳು, ಹಿರಿಯರಿರಲಿ ಕಿರಿಯರಿರಲಿ, ಒಟ್ಟಿಗೆ ಕುಳಿತು ಮಾತನಾಡುವಾಗ, ಒಂದಲ್ಲಾ ಒಂದು ರೀತಿಯಲ್ಲಿ ಕೇಶರಕ್ಷಣೆಯ ಬಗ್ಗೆ ವಿಮರ್ಶಿಸುತ್ತಾರೆ. ಹೆಣ್ಣುಮಕ್ಕಳ ಸೌಂದರ್ಯವಿರುವುದೇ ಕೇಶದಲ್ಲಿ ಎನ್ನುವಷ್ಟು ಕೂದಲಿನ ರಕ್ಷಣೆಯ ಬಗ್ಗೆ ಕಾಳಜಿ ವಹಿಸುತ್ತಾರೆ. ಇನ್ನು ಗಂಡುಮಕ್ಕಳೇನೂ ಕಡಿಮೆಯಲ್ಲ; ಬೊಕ್ಕತಲೆಯ ತೊಂದರೆಯನ್ನು ತಿಳಿಸಲು ಒಂದು ಚಲನಚಿತ್ರವನ್ನೆ ತಯಾರಿಸಿದ್ದಾರಲ್ಲಾ! ಹುಟ್ಟಿದ ಮಗುವನ್ನು ನೋಡುವಾಗಲೂ ಮೊದಲು ನಮ್ಮಿಂದ ಬರುವ ಮಾತು 'ಕೂದಲು ತುಂಬಾ ಚೆನ್ನಾಗಿದೆ' ಎಂದು.

ಕೂದಲಿಗೇಕೆ ಇಷ್ಟು ಪ್ರಾಮುಖ್ಯ? ಕೂದಲು ಸೌಂದರ್ಯದ ಸಾಧನ ಮಾತ್ರವಲ್ಲದೆ, ದೇಹದ ಆರೋಗ್ಯಸೂಚಕವೂ ಆಗಿದೆ. ಕೂದಲಿನಲ್ಲಾಗುವ ಬದಲಾವಣೆಗಳು ಕೂದಲಿನ ಆರೋಗ್ಯದ ಜೊತೆಗೆ ದೇಹದ ಆರೋಗ್ಯವನ್ನೂ ನಿರ್ದೇಶಿಸುತ್ತದೆ.

ಬೋಳುತಲೆಗೆ ಪ್ರಧಾನ ಕಾರಣ ಆನುವಂಶಿಕತೆ; ಅದು ದೇಹಕ್ಕೆ ವಯಸ್ಸಾಗುತ್ತಿರುವುದರ ಸೂಚಕವೂ ಹೌದು. ವಿನಾಕಾರಣ ನಿತ್ಯವೂ ಕೂದಲು ಸಿಕ್ಕಾಗುತ್ತಿದ್ದರೆ, ಅಗತ್ಯ ಪೋಷಕಾಂಶಗಳನ್ನು ಪರಿಪೂರ್ಣವಾಗಿ ಪರಿವರ್ತಿಸಲು ದೇಹಕ್ಕೆ ಸಾಧ್ಯವಾಗುತ್ತಿಲ್ಲ ಎನ್ನುವುದನ್ನು ಸೂಚಿಸುತ್ತದೆ.

ತಲೆಹೊಟ್ಟು, ಕೂದಲು ಸೀಳುವುದು ಇದ್ದರೆ, ದೇಹದಲ್ಲಿ ನೀರಿನಂಶ, ಜಿಡ್ಡಿನಂಶ ಕಡಿಮೆಯಾಗಿ ದೇಹ ಒಣಗುತ್ತಿದೆ ಎಂದರ್ಥ. ವಿಪರೀತ ಕೂದಲು ಉದುರುವುದು ನಿರಂತರ ಆತಂಕ, ಸಿಟ್ಟು, ದ್ವೇಷ, ದುಃಖವನ್ನು ಅನುಭವಿಸುತ್ತಿರುವ ಸೂಚನೆಯೂ ಇರಬಹುದು ಅಥವಾ ಅಗತ್ಯ ಪೊಷಕಾಂಶಗಳು, ಕಬ್ಬಿಣ, ಸತು, ಪ್ರೊಟೀನುಗಳ ಕೊರತೆಯೂ ಕಾರಣವಾಗಿರಬಹುದು. ಥೈರಾಯ್ಡ್, ಯಂಡ್ರೋಜನ್, ಪ್ರೊಜೆಸ್ಟರಾನ್ ಮುಂತಾದ ಹಾರ್ಮೊನುಗಳ ಏರುಪೇರು ಕೂಡ ಕೂದಲು ಉದುರಲು ಕಾರಣವಾಗುತ್ತದೆ.

ಅಮ್ಲಪಿತ್ತ ನಿವಾರಕ ಔಷಧಗಳು, ವಿಟಮಿನ್ 'ಎ' ಮತ್ತು 'ಇ' ಪೋಷಕಾಂಶಗಳ ಮಿತಿ ಇಲ್ಲದ ಸೇವನೆ, ಕ್ಯಾನ್ಸರ್ ನಿವಾರಕ ಔಷಧಗಳ ಸೇವನೆ, ಕೆಲವು ವಿಷಕಾರಿ ಪದಾರ್ಥಗಳ, ಔಷಧಗಳ ನಿರಂತರ ಸೇವನೆ ಇವುಗಳ ಅಡ್ಡ ಪರಿಣಾಮವಾಗಿಯೂ ಕೂದಲು ಉದರುವುದನ್ನು ಕಾಣುತ್ತೇವೆ. ಸೋರಿಯಾಸಿಸ್ ಮೊದಲಾದ ಚರ್ಮರೋಗಗಳಲ್ಲಿ, ಕೆಲವು ಲೈಂಗಿಕ ರೋಗಗಳಲ್ಲಿ, ಕೂದಲಿನ ಕೂಪಕ್ಕೆ ತಗಲುವ ಫಂಗಸ್, ಬ್ಯಾಕ್ಟೀರಿಯಾಗಳಿಂದಾಗಿ, ಕೂದಲಿನ ಸಮಸ್ಯೆಗಳು ಕಾಣಿಸಿ ಕೊಳ್ಳಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಸಂದರ್ಭಕ್ಕೆ ತಕ್ಕಂತೆ, ಆಯಾ ಕಾಲದ ಫ್ಯಾಷನ್ನಿಗನುಗುಣವಾಗಿ ಕೇಶವಿನ್ಯಾಸವನ್ನು ಬದಲಾಯಿಸುವುದು, ಅದಕ್ಕಾಗಿ ಕೂದಲಿನ ಸ್ವಭಾವವನ್ನು ಬದಲಾಯಿಸುವಂತಹ ರಾಸಾಯನಿಕಗಳನ್ನು ಬಳಸುವುದು, ಬಿಗಿಯಾಗಿ ಎಳೆದು ಹಿಡಿದಿಡುವಂತಹ ಕೇಶವಿನ್ಯಾಸಗಳು ರೋಮಕೂಪಗಳ ಮೇಲೆ ಅಧಿಕ ಒತ್ತಡವನ್ನು ಹೇರಿ ಕೂದಲಿನ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ.

ಯಾವುದೇ ವೈಜ್ಞಾನಿಕ ತಳಹದಿ ಇಲ್ಲದ, ಕೂದಲಿನ ಮೇಲಿನ ಪರಿಣಾಮವನ್ನು ತಿಳಿಯದೇ ಕೇವಲ ಜಾಹೀರಾತನ್ನು ನಂಬಿ ಉಪಯೋಗಿಸುವ ಕೇಶಸೌಂದರ್ಯ ಸಾಧನಗಳೂ ಕೂದಲಿನ ಆರೋಗ್ಯವನ್ನು ಹಾಳುಮಾಡುತ್ತವೆ.

ಕೂದಲಿನ ಆರೋಗ್ಯವನ್ನು ಕಾಪಾಡಲು ದೇಸೀ ಹಸುವಿನ ಹಾಲಿನ ಸೇವನೆ ಅತ್ಯಂತ ಪರಿಣಾಮಕಾರಿಯಾಗಿದೆ. ಅದು ಕೊಬ್ಬು, ಪ್ರೊಟೀನು, ಕ್ಯಾಲ್ಸಿಯಂ, ವಿಟಮಿನ್ 'ಎ'ಗಳ ಹದವಾದ ಮಿಶ್ರಣವಾಗಿದೆ. ಇದು ಕೂದಲನ್ನು ಸೊಂಪಾಗಿಸಿ ಕಾಂತಿಯುತವಾಗಿ ಮಾಡುತ್ತದೆ. ಉಗುರು ಬೆಚ್ಚಗಿನ ಎಳ್ಳೆಣ್ಣೆ, ಕೊಬ್ಬರಿ ಎಣ್ಣೆಗಳ ಮಿಶ್ರಣವನ್ನು ನಿತ್ಯವೂ ತಲೆಗೆ ಹಚ್ಚುವುದರಿಂದ ಕೂದಲಿಗೆ ಸಂಬಂಧಿಸಿದ ರೋಗಗಳ ಜೊತೆಗೆ ನರದೌರ್ಬಲ್ಯ ಬಾರದಂತೆ ತಡೆಗಟ್ಟಬಹುದು. ತಲೆ ಅಥವಾ ಕೂದಲನ್ನು ತೊಳೆಯಲು ರಾಸಾಯನಿಕಗಳ ಬಳಕೆ ಒಳ್ಳೆಯದಲ್ಲ. ಸೀಗೆಪುಡಿ, ಚಿಗರೆಪುಡಿ, ಅಂಟುವಾಳದಕಾಯಿ, ಜೊತೆಗೆ ನೆಲ್ಲಿಕಾಯಿ ಮತ್ತು ಭೃಂಗರಾಜದ ಪುಡಿಗಳನ್ನು ಮಿಶ್ರಮಾಡಿ ಬಳಸುವುದರಿಂದ ಆರೋಗ್ಯಕರ ಕೂದಲನ್ನು ಪಡೆಯಬಹುದು ಮತ್ತು ಬಾಲನೆರೆಯನ್ನೂ ತಡೆಗಟ್ಟಬಹುದು.

ಆಹಾರ, ನಿದ್ರೆ, ಬ್ರಹ್ಮಚರ್ಯೆಗಳನ್ನು ಸಮಂಜಸವಾಗಿ ಪಾಲನೆ ಮಾಡುವುದರಿಂದ, ಹಾರ್ಮೋನುಗಳ ವ್ಯತ್ಯಾಸದಿಂದ ಉತ್ಪನ್ನವಾಗುವ ಎಲ್ಲಾ ಸಮಸ್ಯೆಗಳನ್ನೂ ತಡೆಗಟ್ಟಬಹುದು. ಸೂರ್ಯೋದಯಕ್ಕಿಂತ ಮುಂಚಿತವಾಗಿ ಏಳುವುದು, ರಾತ್ರಿ ನಿದ್ರೆಗೆಡದಿರುವುದು, ಸಕಾಲದಲ್ಲಿ ಸರಿಯಾದ ಆಹಾರವನ್ನು ಹಿತಮಿತವಾಗಿ ಸೇವಿಸುವುದು, ಬೇಳೆಕಾಳುಗಳು, ಹಸಿರು ತರಕಾರಿಗಳು, ಸಕಾಲದ ಹಣ್ಣುಗಳ ಯುಕ್ತಿಯುಕ್ತವಾದ ಸೇವನೆ, ಸಾತ್ವಿಕ ಚಿಂತನೆಗಳು, ಥೈರಾಯ್ಡ್, ಹಾರ್ಮೋನುಗಳು ಸರಿಯಾಗಿ ಸ್ರವಿಸುವಂತೆ ಮಾಡುತ್ತದೆ. ಇದರಿಂದ ಕೂದಲು, ಶಕ್ತಿಯುತವಾಗಿಯೂ ಕಾಂತಿಯುತವಾಗಿಯೂ ಕೂಡಿರುತ್ತದೆ.

ತಲೆಹೊಟ್ಟು ಮತ್ತೊಂದು ಸಮಸ್ಯೆ. ಕೆಲವೊಮ್ಮ ತಲೆಯ ಚರ್ಮದ ಒಣಗುವಿಕೆಯಿಂದ, ಕೆಲವೊಮ್ಮೆ ಚರ್ಮವ್ಯಾಧಿಯ ಪೂರ್ವರೂಪವಾಗಿ, ಯಾವುದಾದರೂ ಸೋಂಕು ತಗುಲುವುದರಿಂದ, ಅಥವಾ ಅಲರ್ಜಿಗಳಿಂದ ಉತ್ಪನ್ನವಾಗಬಹುದು. ಎಣ್ಣೆ ಹಚ್ಚುವುದು, ಚರ್ಮದ ರೂಕ್ಷತೆಯನ್ನು ಕಡಿಮೆ ಮಾಡುವ ಮೆಂತ್ಯ, ಕಮಲದ ಹೂವಿನ ಪುಡಿ, ತ್ರಿಫಲಾಚೂರ್ಣ, ಮುಂತಾದ ದ್ರವ್ಯಗಳನ್ನು ತಲೆಗೆ ಲೇಪಮಾಡಿ ಸ್ನಾನ ಮಾಡುವುದು, ಹೊಟ್ಟನ್ನು ದೂರ ಮಾಡುವ ಒಂದು ಪರಿಹಾರ. ಯಾವುದಾದರೂ ಸೊಂಕಾಗಿದ್ದರೆ, ಅಲರ್ಜಿಯಿಂದಾಗಿ ತೊಂದರೆ ಆಗುತ್ತಿದ್ದರೆ, ವೈದ್ಯರನ್ನು ಕಂಡು ಸೂಕ್ತ ಪರಿಹಾರ ಮಾಡಿಕೊಳ್ಳಬೇಕು. ಇಲ್ಲದಿದ್ದಲ್ಲಿ ಸೊಂಕು ದೇಹದ ಬೇರೆ ಭಾಗಗಳಿಗೂ ಹರಡಬಹುದು, ಹೊಟ್ಟು ಬಿದ್ದ ಜಾಗದಲ್ಲಿ ಮೊಡವೆಯಂತಹ ಸಣ್ಣ ಸಣ್ಣ ಗುಳ್ಳೆಗಳಾಗಿ ತುರುಕೆ, ಉರಿ, ನೋವು ಉತ್ಪನ್ನವಾಗಬಹುದು. ಇಂತಹ ಸಂದರ್ಭದಲ್ಲಿ ಮನೆಮದ್ದಿಗೆ ಮೊರೆ ಹೋಗದೆ ಸೂಕ್ತವಾದ ವೈದ್ಯರ ಸಲಹೆ ಪಡೆದು ಚಿಕಿತ್ಸೆ ಮಾಡಿಕೊಳ್ಳಬೇಕು.

ತಲೆಹೊಟ್ಟಿನಂತೆ ಕಂಡರೂ ಸೋರಿಯಾಸಿಸ್ ಮೊದಲಾದ ಚರ್ಮರೋಗಗಳು ಶಿರಸ್ಸಿನಲ್ಲಿ ಉತ್ಪನ್ನವಾಗುತ್ತವೆ. ಹೊಟ್ಟು, ಚರ್ಮರೋಗ ಇರುವವರು ಬಳಸಿದ ಬಾಚಣಿಗೆ, ಟವೆಲು, ಬಟ್ಟೆಗಳನ್ನು ಬಳಸುವುದರಿಂದಲೂ ಹರಡುತ್ತದೆ. ಆಗ ಚರ್ಮರೋಗದ ಚಿಕಿತ್ಸೆಯಿಂದ ಮಾತ್ರ ಇದರಿಂದ ಬಿಡುಗಡೆ ಪಡೆಯಲು ಸಾಧ್ಯ. ಯಾವುದೋ ಎಣ್ಣೆ, ಲೋಶನ್‌ಗಳ ಬಳಕೆಯಿಂದ ಗುಣವಾಗಬಹುದೆಂಬ ಪೊಳ್ಳು ನಂಬಿಕೆ, ಭರವಸೆಗಳಿಗೆ ಮರುಳಾಗಬಾರದು. ಅತಿಯಾದ ಚಿಂತೆ, ಅತಿಯಾದ ಲೋಶನ್‌ಗಳ ಬಳಕೆಯಿಂದ, ತಲೆಯ ಕೆಲವು ಭಾಗಗಳಲ್ಲಿ ಮಾತ್ರ ಕೂದಲು ಉದುರಿ ನೆತ್ತಿಯ ಮೇಲೆ ಬೋಳುಕಲೆಗಳನ್ನು ಉಂಟುಮಾಡುತ್ತದೆ. ಆಗ ವೈದ್ಯರ ಸಲಹೆಯ ಮೇರೆಗೆ ಕಲೆ ಇರುವ ಭಾಗಕ್ಕೇ ಔಷಧಿ ಹಚ್ಚಿ, ಜೊತೆಗೆ ಕೆಲವು ಔಷಧಗಳನ್ನು ಸೇವಿಸಿ ಗುಣಮಾಡಿಕೊಳ್ಳಬೇಕು.

ಕೂದಲಿಗೆ ಅತಿ ಹೆಚ್ಚು ತೊಂದರೆ ಕೊಡುವುದರಲ್ಲಿ ಮೊದಲನೆಯ ಸ್ಥಾನ ಹೇನು, ಸೀರುಗಳಿಗೆ. ಅದು ವ್ಯಕ್ತಿಯ ಘನತೆಯನ್ನು ಸಾಮಾಜಿಕವಾಗಿಯೂ ವೈಯಕ್ತಿಕವಾಗಿಯೂ ಗಾಸಿಗೊಳಿಸುತ್ತದೆ. ಕಹಿ ಜೀರಿಗೆ ಲೇಪ, ಎಣ್ಣೆಗಳನ್ನು ಹಚ್ಚಿ ಹೇನನ್ನು ದೂರಮಾಡಬಹುದು. ಅದು ವಿಪರೀತವಾಗಿದ್ದರೆ ಹುಳಕ್ಕೆ ಕೊಡುವ ಆಂತರಿಕ ಔಷಧಗಳ ಸೇವನೆಯ ಮೂಲಕ ಹೇನು ಸೀರುಗಳು ಉತ್ಪನ್ನವಾಗದಂತೆ ತಡೆಗಟ್ಟಬಹುದು.

ಶುದ್ಧ ಆಚಾರ-ವಿಚಾರಗಳಿಂದ ಕೂದಲಿನ ಆರೋಗ್ಯವನ್ನು ಕಾಪಾಡಿಕೊಳ್ಳೋಣ. ❖

ನಿಮ್ಮೊಂದಿಗೆ ನೀವಿರಿ

ರೂಪಾ ಕೆ.ಎಂ.

ನಕಾರಾತ್ಮಕತೆ, ಅನವಶ್ಯಕ ಅಭಿಪ್ರಾಯ, ಟೀಕೆಗಳನ್ನು ಎದುರಿಸುವುದು ಅಷ್ಟು ಸುಲಭದ ಮಾತಲ್ಲ. ಅದರಲ್ಲಿಯೂ ಹೆಣ್ಣುಮಕ್ಕಳು ತಮ್ಮ ಬದುಕಿನ ಪ್ರಮುಖ ಘಟ್ಟಗಳಲ್ಲಿ ಈ ನಕಾರಾತ್ಮಕತೆಯನ್ನು ಎದುರಿಸುವ ಬಹು ದೊಡ್ಡ ಸವಾಲನ್ನು ಅನುಭವಿಸುತ್ತಾರೆ. ಅಮ್ಮನಾಗುವ ಸಂಭ್ರಮದಲ್ಲಿರುವ ಗರ್ಭಿಣಿಯರು, ಮಗು ಹೆತ್ತು ಅದನ್ನು ಪೋಷಿಸುವ ಹೊಸ ಅಮ್ಮಂದಿರು ಈ ನಕಾರಾತ್ಮಕತೆಯಿಂದ ಉಂಟಾಗುವ ತೀವ್ರ ಒತ್ತಡ ಹಾಗೂ ಆತಂಕದಲ್ಲಿಯೇ ತಮ್ಮ ಬಹು ಸಮಯವನ್ನು ಕಳೆಯಬೇಕಾಗುತ್ತದೆ.

> ಅನವಶ್ಯಕ ಅಭಿಪ್ರಾಯ, ದಿಕ್ಕೆಡಿಸುವ ಮಾತುಗಳು ಎನಿಸಿದರೆ ಸಾರಸಗಟಾಗಿ ಅದರತ್ತ ತಿರಸ್ಕಾರದ ನೋಟವನ್ನು ಬೀರಲು ಕಲಿಯಿರಿ



ಗರ್ಭಿಣಿಯಾಗಿದ್ದಾಗ ಹೊಟ್ಟೆ ದೊಡ್ಡದಿದ್ದರೂ, ಚಿಕ್ಕದಿದ್ದರೂ; ಬಾಣಂತನದಲ್ಲಿ ತೂಕ ಗಳಿಸಿದ್ದರೂ, ಗಳಿಸದೇ ಕೃಶವಾಗಿದ್ದರೂ ಹೀಗೆ... ಎಲ್ಲವನ್ನು ನೆಪ ಮಾಡಿಕೊಂಡು ಗೊತ್ತಿದ್ದೊ ಗೊತ್ತಿಲ್ಲದೆಯೋ ಅನವಶ್ಯಕ ಅಭಿಪ್ರಾಯಗಳನ್ನು ನೀಡುತ್ತಲೇ ಅಭದ್ರತೆ, ಆತಂಕ ಭಾವವನ್ನು ಹೆಣ್ಣುಮಕ್ಕಳಲ್ಲಿ ಹುಟ್ಟುಹಾಕಲಾಗುತ್ತದೆ. ಇನ್ನು ಮಗುವಿನ ಪೋಷಣೆ, ಆರೈಕೆಯಲ್ಲಿ ತುಸು ಹೆಚ್ಚು ಕಡಿಮೆಯಾದರೂ ಅದರ ಬೆಳವಣಿಗೆ ಸಹಜವಾಗಿದ್ದರೂ, ಸಹಜವಾಗಿದೆಯೇ ಇಲ್ಲವೇ ಎಂಬುದನ್ನು ಪದೇ ಪದೇ ಪರಿಶೀಲಿಸುವಂತೆ ಒಂದು ಅಮೂರ್ತವಾದ ಒತ್ತಡ ಹೆಣ್ಣುಮಕ್ಕಳ ಹೆಗಲೇರಿರುತ್ತದೆ. ಜತೆಗೆ ಬಾಣಂತನ ಹಾಗೂ ಮಗುವಿನ ಆರೈಕೆಯ ಸಮಯದಲ್ಲಿ ವೈದ್ಯರ ಮಾತು ಸರಿಯೋ? ಅಜ್ಜಿಯ ಮನೆಮದ್ದು ಸರಿಯೋ? ಇಂಥ ಗೊಂದಲಗಳಂತೂ ಇದ್ದೇ ಇರುತ್ತವೆ.

11 ತಿಂಗಳ ಮಗು ಇನ್ನು ಸ್ವತಂತ್ರವಾಗಿ ನಿಂತುಕೊಳ್ಳುತ್ತಿಲ್ಲ ಎಂದಾಕ್ಷಣ ಮನೆ ಮಂದಿ, ಕಂಡ ಕಂಡ ಸಂಬಂಧಿಕರೆಲ್ಲ 'ಇನ್ನು ಸ್ವತಂತ್ರವಾಗಿ ನಿಲ್ಲುವುದಿಲ್ಲವೇ? ಏನಾಶ್ಚರ್ಯ' ಎಂಬ ನೋಟ ಬೀರುತ್ತಾರೆ. ಈ ನೋಟವೇ ಸಾಕು ಸೂಕ್ಷ್ಮಮನಸ್ಸಿನವರಲ್ಲಿ ನಕಾರಾತ್ಮಕ ಆಲೋಚನೆಗಳು ತುಂಬುವುದಕ್ಕೆ. ಬೆಳೆಯುತ್ತಿರುವ ಮಗು ಸರಿಯಾದ ಪ್ರಮಾಣದಲ್ಲಿ ಊಟ ಮಾಡುತ್ತಿಲ್ಲವೆಂದೋ, ಮೊದಲಿಗಿಂತಲೂ ದಷ್ಟಪುಷ್ಟವಾಗಿಲ್ಲವೆಂದೋ 'ಏನಾದರೂ ಸಮಸ್ಯೆ ಇದ್ದಿರಬಹುದು ಸೂಕ್ತ ವೈದ್ಯರಲ್ಲಿ ತೋರಿಸಿ' ಎಂಬ ಸಲಹೆಯೊಂದೇ ಸಾಕು ದಿನವಿಡೀ ಚಿಂತಿತರಾಗಲು.

ಮಗುವಿನ ಪೋಷಣೆ ವಿಚಾರದಲ್ಲಿ ಕಚೇರಿಗೆ ಹೋಗುವ ಅಮ್ಮಂದಿರ ಗೊಂದಲ, ಆತಂಕ, ಅಭದ್ರತೆ ತುಸು ವಿವರಿಸುವುದು ಕಷ್ಟವೇ. ಹಾಗಾದರೆ ಈ ನಕಾರಾತ್ಮಕತೆಯಿಂದ ಉಂಟಾಗುವ ಅಡ್ಡಪರಿಣಾಮಗಳಿಗೆ ತೆರೆ ಎಳೆಯುವುದೇ ಹೇಗೆ ಎಂಬುದರತ್ತವೂ ಆಲೋಚಿಸೋಣ.

ಹೆಣ್ಣುಮಕ್ಕಳು ಕೇವಲ ಭಾವನಾಜೀವಿಗಳಷ್ಟೆ ಅಲ್ಲ, ವಾಸ್ತವವಾದಿಗಳೂ ಹೌದು ಎಂಬುದನ್ನು ಮೊದಲಿಗೆ ನಮಗೆ ನಾವೇ ಅರ್ಥ ಮಾಡಿಕೊಳ್ಳಬೇಕಿದೆ. ಬದುಕನ್ನು ವಾಸ್ತವದ ಹಿನ್ನೆಲೆಯಲ್ಲಿ ನೋಡುವುದಕ್ಕೆ ಸದಾ ಪ್ರಯತ್ನಿಸೋಣ. ತಳಬುಡವಿಲ್ಲದ ಅಭಿಪ್ರಾಯ, ನಕಾರಾತ್ಮಕ ಆಲೋಚನೆಗಳನ್ನು ಸ್ವೀಕರಿಸುವ ಮೊದಲು ಆ ವಿಚಾರಗಳ ಬಗ್ಗೆ ಸ್ಪಷ್ಟವಾಗಿ ತಿಳಿದುಕೊಳ್ಳುವುದು ಅಗತ್ಯ.

ಸರಿಯಾಗಿ ಅರ್ಥಮಾಡಿಕೊಂಡರೆ ಅಪಾರ್ಥಕ್ಕೆ ಎಡೆ ಇರುವುದಿಲ್ಲ. ಗರ್ಭಿಣಿಯರಾಗಲಿ, ಬಾಣಂತಿಯರಾಗಲಿ, ಮಗುವಿನ ಪೋಷಣೆ ಮಾಡುತ್ತಿರುವ ಹೊಸ ತಾಯಂದಿರಾಗಲಿ ಯಾವುದೇ ವಿಷಯದ ಕುರಿತು ಸ್ಪಷ್ಟವಾದ ತಿಳಿವಳಿಕೆಯನ್ನು ತಜ್ಞರಿಂದ ಪಡೆದುಕೊಳ್ಳುವ ಮಾರ್ಗವನ್ನು ಅನುಸರಿಸಿ.

ಯಾರೋ ಏನೋ ಅಂದರು ಎಂದು ತಲೆಕೆಡಿಸಿಕೊಂಡು ಮನಸ್ಸು ಹಾಳುಮಾಡಿಕೊಳ್ಳುವುದಕ್ಕಿಂತ ಇಂಥ ಸಂದರ್ಭದಲ್ಲಿ ತಾಳ್ಮೆ ವಹಿಸಿ. ಯಾವುದು ಸರಿ, ಅನವಶ್ಯಕವಾಗಿ ಮಂಡನೆಯಾಗುವ ಅಭಿಪ್ರಾಯಗಳು ಯಾವುವು? ಅವುಗಳಲ್ಲಿ ವ್ಯಕ್ತವಾಗುವ ನೈಜ ಕಾಳಜಿ ಎಷ್ಟು? ಇವನ್ನು ಮೊದಲು ಅರ್ಥ ಮಾಡಿಕೊಳ್ಳಲು ಆರಂಭಿಸಿ. ಅನವಶ್ಯಕ ಅಭಿಪ್ರಾಯ, ದಿಕ್ಕೆಡಿಸುವ ಮಾತುಗಳು ಎನಿಸಿದರೆ ಸಾರಸಗಟಾಗಿ ಅದರತ್ತ ತಿರಸ್ಕಾರದ ನೋಟವನ್ನು ಬೀರಲು ಕಲಿಯಿರಿ. ಎಂಥದ್ದೇ ಸಂದರ್ಭದಲ್ಲಿ ನಿಮ್ಮೊಂದಿಗೆ ನೀವಿರಲು ಪ್ರಯತ್ನಿಸಿ. ನಿಮ್ಮ ಮನವನ್ನು ನೀವೆ ಸಂತೈಸಿಕೊಳ್ಳಲು ಸಶಕ್ತರಾಗವಷ್ಟು ನಿಮ್ಮೊಳಗಿನ ಧೀಃಶಕ್ತಿಯನ್ನು ಪ್ರೇರೇಪಿಸಿ. ಮನಸ್ಸಿನೊಂದಿಗೆ ಕನಿಷ್ಠ ಹತ್ತು ನಿಮಿಷವಾದರೂ ಮಾತಾಡುವ ಕೌಶಲ ರೂಪಿಸಿಕೊಳ್ಳಿ. ಬದುಕಿನ ಜಂಜಾಟದಲ್ಲಿ ಹೈರಾಣಾಗಿರುವ ಮನಸ್ಸಿನೊಂದಿಗೆ 'ಯಾವುದಕ್ಕೂ ಹೆದರದಿರು' ಎಂಬ ಸಾಂತ್ವನದ ಮಾತುಗಳನ್ನಾಡಿ. ನಿಮಗೆ ನೀವೆ ಸಂಗಾತಿಯಾದರೆ, ಭಾವಾನಾತ್ಮಕವಾಗಿ ಬೇರೆಯವರನ್ನು ಅವಲಂಬಿಸುವುದು ತಪ್ಪುತ್ತದೆ. ❖

ಹೀಗೆ ಮಾಡಿ

- ಎಂಥಹುದೇ ವೃತ್ತಿ ನಿರ್ವಹಿಸುತ್ತಿರಲಿ. ಸ್ವತಂತ್ರವಾಗಿ ಆಲೋಚಿಸುವ ಮನೋಭಾವವನ್ನು ಬೆಳೆಸಿಕೊಳ್ಳಿ.
- ಪೋಷಣೆ–ಪಾಲನೆ ವಿಚಾರಗಳಲ್ಲಿ ಹಿರಿಯರ ಮಾತು ಅಲ್ಲಗಳೆಯಲು ಸಾಧ್ಯವಿಲ್ಲವಾದರೂ ಅನವಶ್ಯಕವಾಗಿ ವ್ಯಕ್ತವಾಗುವ ಅಭಿಪ್ರಾಯಗಳಿಗೆ ತಲೆ ಕೆಡಿಸಿಕೊಳ್ಳದೆ ಮನಸ್ಸಿಗೆ ಯಾವುದು ಸರಿ ಎಂಬುದನ್ನು ಅವಲೋಕಿಸಿ.
- ಈ ಸಮಯದಲ್ಲಿ ಮನಸ್ಸು ಸೂಕ್ಷ್ಮವಾಗಿರುತ್ತದೆ ಎಂಬುದು ನಿಜವಾದರೂ ದೃಢಮನಸ್ಸು ಇದ್ದರೆ ಮಾತ್ರ ನಕಾರಾತ್ಮಕತೆಯನ್ನು ಹಿಮ್ಮೆಟಿಸಲು ಸಾಧ್ಯ ಎಂಬುದನ್ನು ಅರ್ಥ ಮಾಡಿಕೊಳ್ಳಿ.
- ಆಯಾ ಕಾಲಕ್ಕೆ ಬೇಕಾದ ವ್ಯವಹಾರಜ್ಞಾನ, ತಾಂತ್ರಿಕ ಜ್ಞಾನಗಳನ್ನು ಬೆಳೆಸಿಕೊಳ್ಳಿ. ನಿಮ್ಮೊಂದಿಗೆ ನೀವಿದ್ದರೆ, ಆತ್ಮವಿಶ್ವಾಸವೊಂದು ನಿಮ್ಮ ಜತೆ ಇದ್ದರೆ ಎಂಥ ಟೀಕೆ, ಅನವಶ್ಯಕ ಅಭಿಪ್ರಾಯಗಳನ್ನಾದರೂ ಮೆಟ್ಟಿ ಗುರಿಯತ್ತ ಆಲೋಚಿಸಬಹುದು.
- ದೈಹಿಕ ಆರೋಗ್ಯಕ್ಕೆ ಯೋಗ, ಮಾನಸಿಕ ಆರೋಗ್ಯಕ್ಕೆ ಪ್ರಾಣಾಯಾಮ ಮಾಡಲು ಮರೆಯದಿರಿ. ಮನಸ್ಸಿಗೆ ಹಿಡಿಸುವ ಸ್ನೇಹಿತರ ಸಹವಾಸ ಹಾಗೂ ಪುಸ್ತಕಗಳ ಓದಿನಿಂದ ಸಕಾರಾತ್ಮಕ ವಾತಾವರಣವನ್ನು ಸೃಷ್ಟಿಸಿಕೊಳ್ಳಬಹುದು.

ವಂದೇ ಭಾರತ್: ಹೆಚ್ಚಿನ ನಿಲುಗಡೆಗೆ ಬೇಡಿಕೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬೆಂಗಳೂರು–ಧಾರವಾಡ ನಡುವೆ ಸಂಚರಿಸಲಿರುವ 'ವಂದೇ ಭಾರತ್' ಎಕ್ಸ್‌ಪ್ರೆಸ್ ರೈಲು ಜೂನ್ 27ರಂದು ಚಾಲನೆಗೊಳ್ಳಲಿದೆ. ಬೆಂಗಳೂರು–ಧಾರವಾಡ ಮಧ್ಯೆ ಕೇವಲ ಮೂರು ನಿಲುಗಡೆ ಇದ್ದು, ಕನಿಷ್ಠ ಆರು ನಿಲುಗಡೆಗೆ ಅವಕಾಶ ನೀಡಿದರಷ್ಟೇ ಪ್ರಯಾಣಿಕರಿಗೆ ಪ್ರಯೋಜನವಾಗಲಿದೆ ಎಂಬ ಕೂಗು ಎದ್ದಿದೆ.

ಈ ರೈಲು ಯಶವಂತಪುರ ಮತ್ತು ದಾವಣಗೆರೆಯಲ್ಲಿ ತಲಾ 2 ನಿಮಿಷ ಹಾಗೂ ಹುಬ್ಬಳ್ಳಿ ಜಂಕ್ಷನ್‌ನಲ್ಲಿ 5 ನಿಮಿಷ ನಿಲ್ಲಲಿದೆ. ಮೂರೇ ನಿಲುಗಡೆ ಇರುವುದರಿಂದ ಪ್ರಯಾಣಿಕರ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇದೆ. ಅದಕ್ಕಾಗಿ ತುಮಕೂರು, ಬೀರೂರು ಮತ್ತು ಹಾವೇರಿಯಲ್ಲಿ ತಲಾ 2 ನಿಮಿಷಗಳ ನಿಲುಗಡೆ ನೀಡಿದರೆ ಪ್ರಯಾಣಿಕರ ಸಂಖ್ಯೆ ಹೆಚ್ಚಲಿದೆ. ನೈರುತ್ಯ ರೈಲ್ವೆ ಈ ಬಗ್ಗೆ ನಿರ್ಧಾರ ಕೈಗೊಳ್ಳಬೇಕು ಎಂದು ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ಒತ್ತಾಯಿಸಿದರು.

ತುಮಕೂರಿನಿಂದ ಬೆಂಗಳೂರಿಗೆ ಎಕ್ಸ್‌ಪ್ರೆಸ್ ರೈಲಿನಲ್ಲಿ ಬರುವವರ ಸಂಖ್ಯೆ ಕಡಿಮೆ ಇರಬಹುದು. ಆದರೆ, ತುಮಕೂರಿನಿಂದ ಹುಬ್ಬಳ್ಳಿ, ಧಾರವಾಡಕ್ಕೆ ಹೋಗುವವರ ಸಂಖ್ಯೆ ಜಾಸ್ತಿ ಇದೆ. ಅದೇ ರೀತಿ ಹಾವೇರಿಯಿಂದ ತುಮಕೂರು–ಬೆಂಗಳೂರು ಕಡೆಗೆ ಹೆಚ್ಚು ಪ್ರಯಾಣಿಕರಿದ್ದಾರೆ ಎಂದು ತುಮಕೂರು ಜಿಲ್ಲಾ ರೈಲ್ವೆ ಪ್ರಯಾಣಿಕರ ಸಂಘದ ಕಾರ್ಯದರ್ಶಿ ಕರ್ಣಂ ರಮೇಶ್ ಅಭಿಪ್ರಾಯ ವ್ಯಕ್ತಪಡಿಸಿದರು.

'ಬೀರೂರಿನಲ್ಲಿ ನಿಲುಗಡೆ ನೀಡಿದರೆ ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳ ಪ್ರಯಾಣಿಕರಿಗೆ ಅನುಕೂಲ ಆಗಲಿದೆ. ಅಲ್ಲದೇ ಇದು ಬೆಂಗಳೂರು ಬದಲು ಧಾರವಾಡದಿಂದ ಬೆಳಿಗ್ಗೆ ಪ್ರಾರಂಭವಾಗಿ ಬೆಂಗಳೂರಿಗೆ ಬಂದು ರಾತ್ರಿ ಧಾರವಾಡಕ್ಕೆ ತಲುಪುವಂತಾಗಿದ್ದರೆ ಇನ್ನೂ ಅನುಕೂಲವಾಗುವುದು ಎಂದು ರೈಲ್ವೆ ಪ್ರಯಾಣಿಕ ಹರೀಶ್ ತುಮಕೂರು ವಿವರಿಸಿದರು.

ಈಗ ನಿರ್ಧಾರವಾಗಿರುವ ಮೂರು ನಿಲುಗಡೆಗಳಲ್ಲದೇ ಈ ಮೂರು ನಿಲುಗಡೆಗಳನ್ನು ಆರಂಭದಲ್ಲೇ ಸೇರಿಸಬೇಕು. ಆಗ ಪ್ರಯಾಣಿಕರನ್ನು ಸೆಳೆಯುವುದು ಸುಲಭ. ಹಳೇ ಜಂಕ್ಷನ್ ಆದ ಅರಸೀಕೆರೆಯಲ್ಲಿ ನಿಲುಗಡೆ ನೀಡಲು ಸಾಧ್ಯವಾದರೆ ಮಂಗಳೂರು, ಮೈಸೂರು ಕಡೆಗೆ ಹೋಗುವವರಿಗೂ ಪ್ರಯೋಜನವಾಗಲಿದೆ.

ದರಪಟ್ಟಿ (₹ ಗಳಲ್ಲಿ)

ಎಲ್ಲಿಂದ	ಎಲ್ಲಿಗೆ	ಎಸಿ ಚೇರ್ ಕಾರ್	ಎಕ್ಸಿಕ್ಯುಟಿವ್ ಕ್ಲಾಸ್
ಕೆಎಸ್‌ಆರ್ ಬೆಂಗಳೂರು	ಯಶವಂತಪುರ	410	545
ಕೆಎಸ್‌ಆರ್ ಬೆಂಗಳೂರು	ದಾವಣಗೆರೆ	915	1740
ಕೆಎಸ್‌ಆರ್ ಬೆಂಗಳೂರು	ಹುಬ್ಬಳ್ಳಿ ಜಂಕ್ಷನ್	1135	2180
ಕೆಎಸ್‌ಆರ್ ಬೆಂಗಳೂರು	ಧಾರವಾಡ	1165	2010
ಧಾರವಾಡ	ಕೆಎಸ್‌ಆರ್ ಬೆಂಗಳೂರು	1330	2440
ಧಾರವಾಡ	ಯಶವಂತಪುರ	1340	2440
ಧಾರವಾಡ	ದಾವಣಗೆರೆ	745	1282
ಧಾರವಾಡ	ಹುಬ್ಬಳ್ಳಿ ಜಂಕ್ಷನ್	410	545

'ನಿಲುಗಡೆ ಹೆಚ್ಚಿಸಲು ಸಾಧ್ಯ'

'ಗೋವಾ–ಮುಂಬೈ ನಡುವೆ 'ವಂದೇ ಭಾರತ್' ಎಕ್ಸ್‌ಪ್ರೆಸ್ ರೈಲು ಅಂದೇ ಚಾಲನೆಗೊಳ್ಳಲಿದೆ. ಅದು 586 ಕಿಲೋಮೀಟರ್ ಕ್ರಮಿಸುತ್ತಿದ್ದು, ಮಧ್ಯೆ ಎಂಟು ನಿಲುಗಡೆಗಳಿವೆ. 489 ಕಿಲೋಮೀಟರ್ ಅಂತರ ಇರುವ ಬೆಂಗಳೂರು–ಧಾರವಾಡದ ನಡುವೆ 6 ನಿಲುಗಡೆ ನೀಡುವುದು ಕಷ್ಟವಲ್ಲ. ರೈಲ್ವೆ ಇಲಾಖೆ ನಿಲುಗಡೆ ಹೆಚ್ಚಿಸಬೇಕು' ಎಂದು ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ಆಗ್ರಹಿಸಿದರು.

ಪ್ರಯಾಣಿಕರ ಸಂಖ್ಯೆ ಹೆಚ್ಚಾದರೆ 8 ಕೋಚ್‌ಗಳಿರುವುದನ್ನು 16 ಕೋಚ್‌ಗಳಿಗೆ ಏರಿಸಲು ಅವಕಾಶ ಇದೆ. ಸಿಕಂದರಾಬಾದ್–ತಿರುಪತಿ ನಡುವಿನ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಕೋಚ್ ಹೆಚ್ಚಿಸಿರುವ ಉದಾಹರಣೆ ಇದೆ ಎಂದೂ ವಿವರಿಸಿದರು.

ಇಂದು ಚಾಲನೆ ನೀಡಲಿರುವ ಪ್ರಧಾನಿ

ಧಾರವಾಡದಿಂದ ಹೊರಡಲಿರುವ 'ವಂದೇ ಭಾರತ್' ಎಕ್ಸ್‌ಪ್ರೆಸ್ ರೈಲಿಗೆ ಪ್ರಧಾನಿ ನರೇಂದ್ರ ಮೋದಿ ಜೂನ್ 27ರಂದು ಬೆಳಿಗ್ಗೆ 9.45ಕ್ಕೆ ವರ್ಚುವಲ್ ಮೂಲಕ ಚಾಲನೆ ನೀಡಲಿದ್ದಾರೆ. ಉದ್ಘಾಟನೆಯ ದಿನದ ವಿಶೇಷವಾಗಿ ಧಾರವಾಡದಿಂದ ಬೆಂಗಳೂರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣಕ್ಕೆ ತಲುಪುವ ನಡುವೆ 14 ರೈಲು ನಿಲ್ದಾಣಗಳಲ್ಲಿ ನಿಲುಗಡೆಯಾಗಲಿವೆ. ಸಂಜೆ 5.30ಕ್ಕೆ ಬೆಂಗಳೂರಿಗೆ ಬರುವುದರಿಂದ ಮತ್ತೆ ಧಾರವಾಡಕ್ಕೆ ಅಂದು ಹಿಂದಿರುಗುವುದಿಲ್ಲ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ. ದೇಶದ ವಿವಿಧೆಡೆ ಐದು 'ವಂದೇ ಭಾರತ್' ರೈಲುಗಳಿಗೆ ಅಂದು ಏಕಕಾಲಕ್ಕೆ ಪ್ರಧಾನಿ ಮೋದಿ ಅವರು ಚಾಲನೆ ನೀಡಲಿದ್ದಾರೆ.

ಹೆಚ್ಚಿನ ನಿಲುಗಡೆಗೆ ಪ್ರಯಾಣಿಕರು, ಜನಪ್ರತಿನಿಧಿಗಳಿಂದ ಬೇಡಿಕೆ ಹೆಚ್ಚಿದರೆ ರೈಲ್ವೆ ಆಡಳಿತ ಮಂಡಳಿಯು ಈ ಬಗ್ಗೆ ಚರ್ಚಿಸಿ ತೀರ್ಮಾನಿಸಲಿದೆ

ಕುಸುಮಾ ಹರಿಪ್ರಸಾದ್, ವಿಭಾಗೀಯ ರೈಲ್ವೆ ಹೆಚ್ಚುವರಿ ವ್ಯವಸ್ಥಾಪಕಿ (ಆಡಳಿತ)

ಯಶವಂತಪುರ ಬೆಂಗಳೂರಿನಲ್ಲೇ ಇದೆ. ಹುಬ್ಬಳ್ಳಿಯು ಧಾರವಾಡದ ಹತ್ತಿರ ಇದೆ. ಮಧ್ಯೆ ದಾವಣಗೆರೆಯಲ್ಲಷ್ಟೇ ನಿಲುಗಡೆ ಇದೆ. ಬೀರೂರಿನಲ್ಲಿ ಅವಕಾಶ ನೀಡಬೇಕು

ಹರೀಶ್ ತುಮಕೂರು, ರೈಲು ಪ್ರಯಾಣಿಕ

ರೈಲ್ವೆ ಹಿರಿಯ ಅಧಿಕಾರಿಗಳ ಜೊತೆಗೆ ಈ ಬಗ್ಗೆ ಚರ್ಚಿಸಿದಾಗ 5 ನಿಲುಗಡೆ ನೀಡುವ ಸಾಧ್ಯತೆ ಬಗ್ಗೆ ಮಾಹಿತಿ ನೀಡಿದ್ದಾರೆ. ತುಮಕೂರಲ್ಲಿ ನಿಲುಗಡೆ ಬೇಕು

ಕರ್ಣಂ ರಮೇಶ್, ತುಮಕೂರು ಜಿಲ್ಲಾ ರೈಲು ಪ್ರಯಾಣಿಕರ ಸಂಘದ ಕಾರ್ಯದರ್ಶಿ

ಹಾವೇರಿಯಲ್ಲಿ ವಂದೇ ಭಾರತ್ ನಿಲುಗಡೆ ನೀಡಿದರೆ ದಾವಣಗೆರೆ, ತುಮಕೂರು, ಬೆಂಗಳೂರಿಗೆ ಹೋಗುವವರಿಗೆ ಅನುಕೂಲವಾಗುತ್ತದೆ

ಎಂ. ಕರಿಬಸಪ್ಪ, ರೈಲು ಪ್ರಯಾಣಿಕ

'ಭೂಮಾಪಕರ ಕೊರತೆ ಜಂಟಿ ಸರ್ವೆ ವಿಳಂಬ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಭೂಮಿಯ ಒತ್ತುವರಿ ಸಮಸ್ಯೆಯನ್ನು ಬಗೆಹರಿಸಲು ಕಂದಾಯ ಇಲಾಖೆಯ ಜತೆ ಸೇರಿ ಜಂಟಿ ಸರ್ವೆ ನಡೆಸುವ ಅಗತ್ಯವಿದ್ದು, ಭೂಮಾಪಕರ ಕೊರತೆಯಿಂದ ಈ ಪ್ರಕ್ರಿಯೆ ತಡವಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

'ಮುಂಬರುವ ಅಧಿವೇಶನದ ವೇಳೆ ಕಂದಾಯ ಸಚಿವರ ಜತೆ ಸಭೆ ನಡೆಸಿ, ಖಾಸಗಿ ಭೂಮಾಪಕರ ನೆರವು ಪಡೆದು ಆರು ತಿಂಗಳೊಳಗೆ ಜಂಟಿ ಸರ್ವೆಗೆ ಯತ್ನಿಸಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅರಣ್ಯ ವ್ಯಾಪ್ತಿಯಲ್ಲಿ ಅಕ್ರಮವಾಗಿ ಮರ ಕಡಿದರೆ, ಅರಣ್ಯ ಭೂ ಒತ್ತುವರಿಯಾದರೆ ಕಠಿಣ ಕ್ರಮ ಜರುಗಿಸಲಾಗುವುದು ಎಂದೂ ಎಚ್ಚರಿಸಿದರು.

'ರಾಜ್ಯದಲ್ಲಿ ಹಸಿರು ವ್ಯಾಪ್ತಿ ಹೆಚ್ಚಳವನ್ನು ಶೇ 21 ರಿಂದ ಶೇ 33 ಕ್ಕೆ ಹೆಚ್ಚಿಸುವುದು ನಮ್ಮ ಗುರಿ. ಜುಲೈ 1 ರಿಂದ 7 ರವರೆಗೆ ರಾಜ್ಯದಾದ್ಯಂತ ವನಮಹೋತ್ಸವ ಆಚರಿಸಲಾಗುತ್ತಿದ್ದು, 1 ಕೋಟಿ ಸಸಿ ನೆಟ್ಟು, ಜಿಯೋ ಟ್ಯಾಗ್ ಮಾಡಲಾಗುವುದು ಎಂದು ಹೇಳಿದರು.

ಹೊಸ ಲಾಂಛನ ಬಿಡುಗಡೆ: ಅರಣ್ಯ ಇಲಾಖೆಗೆ ಹೊಸ ಲಾಂಛನ ರೂಪಿಸುವ ಉದ್ದೇಶದಿಂದ ನಡೆದ ಲೋಗೊ ವಿನ್ಯಾಸ ಸ್ಪರ್ಧೆಯಲ್ಲಿ ವಿಜೇತರಾದ ಮೈಸೂರಿನ ಶಮಂತ್ ಗೊರೂರು ಅವರಿಗೆ ₹ 20 ಸಾವಿರ ನಗದು ಬಹುಮಾನ ಮತ್ತು ಪ್ರಮಾಣ ಪತ್ರವನ್ನು ಸಚಿವರು ವಿತರಿಸಿ, ಲಾಂಛನವನ್ನು ಬಿಡುಗಡೆ ಮಾಡಿದರು.

335 ಹುದ್ದೆ ಭರ್ತಿ

ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ 335 ಹುದ್ದೆಗಳ ಭರ್ತಿಗೆ ಹಣಕಾಸು ಇಲಾಖೆ ಅನುಮೋದನೆ ಪಡೆದು ಶೀಘ್ರವೇ ಅಧಿಸೂಚನೆ ಹೊರಡಿಸಲಾಗುವುದು ಎಂದು ಈಶ್ವರ ಖಂಡ್ರೆ ತಿಳಿಸಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ನೇಮಕಾತಿಗೆ ಹಣಕಾಸು ಇಲಾಖೆಯ ಅನುಮತಿ ಅಗತ್ಯವಿಲ್ಲ. ಇಲ್ಲಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿದೆ ಎಂದರು.



ಹೊಸ ಲಾಂಛನ

ಅದಿತಿ, ನಿತಿನ್‌ಗೆ ಕೆಂಪೇಗೌಡ ಪ್ರಶಸ್ತಿ

ಒಂದನೇ ಪುಟದಿಂದ

ಪ್ರಶಸ್ತಿಗೆ ಆಯ್ಕೆಯಾದವರ ಹೆಸರನ್ನು ಸೋಮವಾರ ಪ್ರಕಟಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ (ಜೂನ್ 27) ನಡೆಯಲಿರುವ ಕೆಂಪೇಗೌಡ 514ನೇ ಜಯಂತಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪುರಸ್ಕೃತರಿಗೆ ತಲಾ ₹5 ಲಕ್ಷ ನಗದು ಜೊತೆ ಗೌರವ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದರು.

ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್ ನೇತೃತ್ವದಲ್ಲಿ ರಚಿಸಲಾಗಿದ್ದ ಆಯ್ಕೆ ಸಮಿತಿಯು ಪ್ರಶಸ್ತಿಗೆ ಅರ್ಹರಾದವರನ್ನು ಆಯ್ಕೆ ಮಾಡಿದೆ.

ಬೆಂಗಳೂರಿನಲ್ಲಿ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಅದಿತಿ ಅಶೋಕ್, ಟೋಕಿಯೊ ಒಲಿಂಪಿಕ್ಸ್‌ನಲ್ಲಿ 4ನೇ ಸ್ಥಾನದ ಪಡೆದಿದ್ದರು. ಅವರು ವಿಶ್ವ ಕ್ರಮಾಂಕದಲ್ಲಿ ಅಗ್ರ 50ರಲ್ಲಿ ಕಾಣಿಸಿಕೊಂಡ ಮೊದಲ ಭಾರತೀಯ ಗಾಲ್ಫ್ ಆಟಗಾರ್ತಿ. ಶಿವಮೊಗ್ಗದವರಾದ ನಿತಿನ್ ಕಾಮತ್ ಅವರು ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಎಂಜಿನಿಯರಿಂಗ್ ಪದವಿ ಪಡೆದವರು. ನಿತಿನ್ ಕಾಮತ್ ಅವರು 2010ರಲ್ಲಿ ತಮ್ಮ ಸಹೋದರ ನಿಖಿಲ್ ಕಾಮತ್ ಜೊತೆ ಸೇರಿ ಡಿಸ್ಕೌಂಟ್ ಬ್ರೋಕರೇಜ್ ಸಂಸ್ಥೆ ಝೀರೋಧ ಸ್ಥಾಪಿಸಿದರು. ಇಂದು ದೇಶದ ಅತಿದೊಡ್ಡ ಆನ್‌ಲೈನ್ ಬ್ರೋಕರೇಜ್ ಸಂಸ್ಥೆಗಳಲ್ಲಿ ಇದು ಒಂದಾಗಿದೆ.

'ಸೆಗಣಿ ತಿನ್ನೋರ, ಹಲ್ಕಟ್‌ಗಿರಿ'

ಕಾರ್ಯಕರ್ತರ ಸಭೆ: ಮುರುಗೇಶ ನಿರಾಣಿ, ಯತ್ನಾಳ ಪರೋಕ್ಷ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ/ವಿಜಯಪುರ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ 9ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಬಾಗಲಕೋಟೆ ಮತ್ತು ವಿಜಯಪುರದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಬಿಜೆಪಿ ಕಾರ್ಯಕರ್ತರ ಸಭೆಯು ಗದ್ದಲ, ಗಲಾಟೆ ಮತ್ತು ಮುಖಂಡರ ನಡುವಿನ ಆರೋಪ–ಪ್ರತ್ಯಾರೋಪಕ್ಕೆ ವೇದಿಕೆಯಾಯಿತು.

ಬಾಗಲಕೋಟೆಯಲ್ಲಿ ಮಾಜಿ ಸಚಿವ ಮುರುಗೇಶ ನಿರಾಣಿ ಮತ್ತು ಶಾಸಕ ಬಸನಗೌಡ ಯತ್ನಾಳ ಪರೋಕ್ಷವಾಗಿ ಪರಸ್ಪರ ವಾಗ್ದಾಳಿ ನಡೆಸಿದರು. ವಿಜಯಪುರದಲ್ಲಿ ಯತ್ನಾಳ ಬೆಂಬಲಿಗರು ಸಭೆಗೆ ಅಡ್ಡಿ ಪಡಿಸಿ, ಗದ್ದಲ ಎಬ್ಬಿಸಿದರು.

ಎರಡೂ ಸಭೆಗಳಲ್ಲೂ ಪರಿಸ್ಥಿತಿ ನಿಯಂತ್ರಿಸಲು ಸಾಧ್ಯವಾಗದೆ ಶಾಸಕ ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಗೋವಿಂದ ಕಾರಜೋಳ, ಸಂಸದರಾದ ರಮೇಶ ಜಿಗಜಿಣಗಿ, ಪಿ.ಸಿ. ಗದ್ದಿಗೌಡರ ಸೇರಿ ಹಲವು ನಾಯಕರು ಮೌನ ವಹಿಸಿದ್ದರು. ಪರಿಸ್ಥಿತಿ ವಿಕೋಪಕ್ಕೆ ತಿರುಗಿ, ಕೆಲ ಹೊತ್ತು ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ವಿಜಯಪುರದಲ್ಲಿ ಬಸವರಾಜ ಬೊಮ್ಮಾಯಿ ಹಾಗೂ ಇತರೆ ಬಿಜೆಪಿ ನಾಯಕರು ಸಭೆ ಉದ್ಘಾಟಿಸಲು ಮುಂದಾದಾಗ, 'ಶಾಸಕ ಯತ್ನಾಳ ವೇದಿಕೆಗೆ ಬರುವವರೆಗೂ ಕಾರ್ಯಕ್ರಮ ಉದ್ಘಾಟಿಸಬಾರದು' ಎಂದು ಪಟ್ಟು ಹಿಡಿದರು. ಶಾಸಕಿ ಶಶಿಕಲಾ ಜೊಲ್ಲೆ ಅವರು ಭಾಷಣದಲ್ಲಿ, 'ಮುಂದಿನ ಲೋಕಸಭಾ ಚುನಾವಣೆಗೆ ವಿಜಯಪುರ ಕ್ಷೇತ್ರದ ಅಭ್ಯರ್ಥಿ ರಮೇಶ ಜಿಗಜಿಣಗಿ' ಎನ್ನುತ್ತಲೇ ಯತ್ನಾಳ ಬೆಂಬಲಿಗರು ಆಕ್ಷೇಪ ವ್ಯಕ್ತಪಡಿಸಿದರು. ಇದರಿಂದ ಬೇಸರಗೊಂಡ ರಮೇಶ ಜಿಗಜಿಣಗಿ, ಮುರುಗೇಶ ನಿರಾಣಿ, ಮಾಜಿ ಶಾಸಕ ಎ.ಎಸ್.ಪಾಟೀಲ ನಡಹಳ್ಳಿ, ವಿಧಾನ ಪರಿಷತ್ ಸದಸ್ಯ ಹನುಮಂತ ನಿರಾಣಿ, ಮುಖಂಡ ವಿಜುಗೌಡ ಪಾಟೀಲ ಅವರು ಸಭೆಯಿಂದ ಹೊರನಡೆದರು.

ಸುದ್ದಿಗಾರರ ಜೊತೆ ಮುರುಗೇಶ ನಿರಾಣಿ ಮಾತನಾಡಿ, 'ಚುನಾವಣೆಯಲ್ಲಿ ಜಿಲ್ಲೆಯಲ್ಲಿ ತಾವೊಬ್ಬರೇ ಗೆದ್ದಿರುವುದಾಗಿ ಯತ್ನಾಳಗೆ ಕೋಡು, ಸೊಕ್ಕು, ದಿಮಾಕು ಬಂದಿದೆ. 2018ರಲ್ಲಿ ನಾಗಠಾಣ ಕ್ಷೇತ್ರದಿಂದ ಸ್ಪರ್ಧಿಸಿದ್ದ ಗೋವಿಂದ ಕಾರಜೋಳ ಮಗನನ್ನು ಸೋಲಿಸಿದವರು ಯಾರು? ಬಬಲೇಶ್ವರದಲ್ಲಿ ಮೂರು ಚುನಾವಣೆಯಲ್ಲಿ ವಿಜುಗೌಡರನ್ನು ಸೋಲಿಸಿದ್ದು ಯಾರು? ಎಂದು ಪ್ರಶ್ನಿಸಿದರು.

ಯಾರು ಏನೆಂದರು?

ಬಸನಗೌಡ ಪಾಟೀಲ

'ಬಾಗಲಕೋಟೆ ಜಿಲ್ಲೆಯಲ್ಲಿ ಏನಾಗಿದೆ ನಿಮಗೆಲ್ಲ ಗೊತ್ತಿದೆ. ರಾಡಿಯಲ್ಲಿ ಕಲ್ಲು ಒಗೆಯುವುದು ಬೇಡ. ವಿಜಯಪುರದಲ್ಲಿ ನನಗೂ ಬಾಳ ಮಂದಿ ವಿರೋಧ ಮಾಡ್ತಾರ. ನನ್ನನ್ನ ಸೋಲಿಸಲಿಕ್ಕೆ ರೊಕ್ಕ ಕೊಟ್ಟು ಕಳಿಸಿದ್ರು. ಏನೋನೋ ಅಪಪ್ರಚಾರ ಮಾಡಿದರು. ಗೌಡ್ರನ್ನ ಕೆಡವೇ ಕೆಡತಿವಿ. ಮುಗಿಸೇ ಬಿಡ್ತೀವಿ ಅಂದ್ರು. ಎಲ್ಲ ಹಲ್ಕಟ್‌ಗಿರಿ ಮಾಡಿದರು. ಅವರು ಏನಾದ್ರೂ ನಿಮಗೆ ಗೊತ್ತಿದೆ.

'ಯಡಿಯೂರಪ್ಪ, ಅನಂತಕುಮಾರ ನಂತರ ನಾನೇ ನಾಲ್ಕನೇ ಲೀಡರ್ ಆಗಿದ್ದವ. ಆಗಲೇ ಸಚಿವನಾಗಿದ್ದೆ. ಮುಂದೆ ಆಗಲಿಲ್ಲ ಏನು ಮಾಡೋದು? ಯಡಿಯೂರಪ್ಪ ಅವರು ಸಚಿವರನ್ನಾಗಿ ಮಾಡಲಿಲ್ಲ. ಬೊಮ್ಮಾಯಿ ಅವರು ಮುಂದಾದರೂ ಅನುಮತಿ ನೀಡಲಿಲ್ಲ. ನನ್ನನ್ನ ಸಚಿವರನ್ನಾಗಿ ಮಾಡಬೇಡಿ ಎಂದು ಬಹಳ ಮಂದಿ ಒತ್ತಡ ತಂದರು'.

ಮುರುಗೇಶ ನಿರಾಣಿ

'35 ವರ್ಷಗಳಿಂದ ಬಿಜೆಪಿಯಲ್ಲೇ ಇದ್ದೇನೆ. ಪಕ್ಷ ನನ್ನ ತಾಯಿ, ಇಲ್ಲಿಯೇ ಇದ್ದೇನೆ. ಮುಂದೆಯೂ ಇರುತ್ತೇನೆ. ಮತ್ತೊಬ್ಬರ ತರಹ ನಾಟಕ ಆಡಿ ಈ ಕಡೆ, ಆ ಕಡೆ ಹೋಗುವುದಿಲ್ಲ. ತಲೆ ಮೇಲೆ ಟೋಪಿ ಹಾಕಿಕೊಂಡು ನಮಾಜ್ ಮಾಡಿಲ್ಲ. ಬಾಳ ಕೆದಕಲಿಕ್ಕೆ ಹೋದರೆ, ಎಲ್ಲರೂ ಸೆಗಣಿ ತಿನ್ನೋರ ಅದಾರ.

'ನಾಟಕ ಮಾಡ್ತೀರಿ. ಯಾರನ್ನೋ ಸೋಲಿಸಲು ಹೋಗಿ ಡುಮಕ್ ಅಂದ್ರಂತೆ. ನೀವು ವಿಧಾನಸಭೆ, ಲೋಕಸಭೆ ಚುನಾವಣೆಯಲ್ಲಿ ಡುಮುಕ್ ಆಗಿದ್ರಲ್ಲ. ಅದನ್ನು ಮರೆತೀರಿ. ಯಾರು, ಯಾರು ಒಳಗೆ ಒಪ್ಪಂದ ಮಾಡಿಕೊಂಡಿಲ್ಲ? ವಿಜಯಪುರದಲ್ಲಿ ಮಂತ್ರಿಗೆ ಚೇಲಾ ಆಗಿದ್ದೀರಿ. ಮತ್ತೊಬ್ಬರಿಗೆ ಬೆರಳು ಮಾಡಿ ತೋರಿಸ್ತಾರೆ. ಟಂಗಲ್ ಮಾಡಿದರೆ ಗ್ರೇಟ್ ಅನ್ನು ಕೊಳ್ಳುವುದನ್ನು ಬಿಡಿ'.

ಗೃಹ ಸಚಿವರ ಸೂಚನೆ ಮೇರೆಗೆ ಕ್ರಮ

ಬಿಟ್ ಕಾಯಿನ್: ಸಿಐಡಿ ಡಿಜಿಪಿಗೆ ಕಮಿಷನರ್ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಹುಕೋಟಿ ಅಕ್ರಮ ವ್ಯವಹಾರ ನಡೆದಿದೆ' ಎನ್ನಲಾದ ಬಿಟ್ ಕಾಯಿನ್ (ಬಿಟಿಸಿ) ಪ್ರಕರಣದ ಬಗ್ಗೆ ಹೆಚ್ಚಿನ ತನಿಖೆ ನಡೆಸುವಂತೆ ಕೋರಿ ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಅವರು ಸಿಐಡಿ ಡಿಜಿಪಿ ಎಂ.ಎ. ಸಲೀಂ ಅವರಿಗೆ ಪತ್ರ ಬರೆದಿದ್ದಾರೆ.

ಕಾಟನ್‌ಪೇಟೆ ಠಾಣೆಯಲ್ಲಿ 2020ರಲ್ಲಿ ದಾಖಲಾಗಿದ್ದ 'ಬಿಟ್ ಕಾಯಿನ್' ಪ್ರಕರಣದ ಸಂಗತಿಗಳನ್ನು ಪತ್ರದಲ್ಲಿ ಉಲ್ಲೇಖಿಸಿರುವ ದಯಾನಂದ್, 'ಪ್ರಕರಣದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಅನುಮಾನವಿದೆ. ವಿಶೇಷ ತಂಡ ರಚಿಸಿ ಹೆಚ್ಚಿನ ತನಿಖೆ ನಡೆಸಲು ಕ್ರಮ ಕೈಗೊಳ್ಳಿ' ಎಂದು ಕೋರಿದ್ದಾರೆ.

ಪ್ರಕರಣದ ಪ್ರಮುಖ ಆರೋಪಿಯಾದ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26) ಬಂಧಿಸಿದ್ದ ಸಿಸಿಬಿ ಪೊಲೀಸರು, ರಾಜ್ಯ ಸರ್ಕಾರದ ಇ–ಸಂಗ್ರಹಣಾ ಪೋರ್ಟಲ್ (https://eproc.karnataka.gov.in) ಜಾಲತಾಣ ಹ್ಯಾಕ್ ಮಾಡಿ ₹ 46 ಕೋಟಿ ದೋಚಿದ್ದ ಸಂಗತಿ ಪತ್ತೆ ಮಾಡಿದ್ದರು. ಜೊತೆಗೆ, ಶ್ರೀಕಿ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಸಿದ್ದ ಬಿಟ್ ಕಾಯಿನ್ ಪ್ರಕರಣಗಳು ಹೊರಬಂದಿದ್ದವು.

ಆದರೆ, ಪ್ರಕರಣದ ಬಗ್ಗೆ ಹೆಚ್ಚಿನ ತನಿಖೆ ನಡೆಸಿರಲಿಲ್ಲ. ಸಿಸಿಬಿ ಪೊಲೀಸರು ತರಾತುರಿಯಲ್ಲಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಈ ನಡೆ ಹಲವು ಅನುಮಾನಕ್ಕೆ ಕಾರಣವಾಗಿತ್ತು. ಇದೀಗ, ಪೊಲೀಸ್ ಕಮಿಷನರ್ ಅವರೇ ತನಿಖೆ ಮುಂದುವರಿಸಲು ಆಸಕ್ತಿ ತೋರಿಸಿದ್ದಾರೆ.

ಗೃಹ ಸಚಿವರ ಸೂಚನೆ: ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿರುವ 'ಬಿಟ್ ಕಾಯಿನ್ (ಬಿಟಿಸಿ)' ಪ್ರಕರಣದ ಬಗ್ಗೆ ಮರು ತನಿಖೆ ನಡೆಸುವುದಾಗಿ ಗೃಹ ಸಚಿವ ಜಿ. ಪರಮೇಶ್ವರ ಇತ್ತೀಚೆಗಷ್ಟೇ ತಿಳಿಸಿದ್ದರು. ಜೊತೆಗೆ, ಕಮಿಷನರ್ ಕಚೇರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲೂ ಪ್ರಕರಣದ ಬಗ್ಗೆ ಮಾಹಿತಿ ಪಡೆದುಕೊಂಡಿದ್ದರು.

ಇದರ ಬೆನ್ನಲ್ಲೇ ಕಮಿಷನರ್ ದಯಾನಂದ್ ಅವರು ಸಿಐಡಿ ಡಿಜಿಪಿ ಅವರಿಗೆ ಪತ್ರ ಬರೆದಿದ್ದು, ಸದ್ಯದಲ್ಲೇ ಪ್ರಕರಣದ ಮರು ತನಿಖೆ ಆರಂಭವಾಗುವ ಸಾಧ್ಯತೆ ಇದೆ.

ಪತ್ರದ ಬಗ್ಗೆ 'ಪ್ರಜಾವಾಣಿ' ಜೊತೆ ಮಾತನಾಡಿದ ಬಿ. ದಯಾನಂದ್, 'ಪ್ರಕರಣದಲ್ಲಿ ಸಾಕಷ್ಟು ಮಂದಿ ಭಾಗಿಯಾಗಿರುವ ಶಂಕೆ ಇದೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವ್ಯಕ್ತಿಗಳು ಶಾಮೀಲಾಗಿರುವ ಮಾಹಿತಿ ಇದೆ. ವಿಶೇಷ ತಂಡ ರಚಿಸಿ ಹೆಚ್ಚಿನ ತನಿಖೆ ನಡೆಸುವಂತೆ ಸಿಐಡಿ ಡಿಜಿಪಿಗೆ ಪತ್ರ ಬರೆಯಲಾಗಿದೆ' ಎಂದರು.

'ಕಾಟನ್‌ಪೇಟೆಯಲ್ಲಿ ದಾಖಲಾಗಿರುವ ಪ್ರಕರಣದ ಕೆಲ ಸಂಗತಿಗಳನ್ನು ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಸಿಐಡಿಯಿಂದ ವಿಶೇಷ ತಂಡ ರಚನೆಯಾದ ನಂತರ, ಅವರ ತನಿಖೆಗೆ ಬೇಕಾದ ದಾಖಲೆಗಳನ್ನು ಒದಗಿಸಲಾಗುವುದು' ಎಂದು ಹೇಳಿದರು.

ಬಿಜೆಪಿ ಬೇಗುದಿ ಬೀದಿಗೆ

ಒಂದನೇ ಪುಟದಿಂದ

ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರೂ ಇದಕ್ಕೆ ಧ್ವನಿಗೂಡಿಸಿದ್ದರು. ಈ ಕಿಡಿ ರಾಜ್ಯದಾದ್ಯಂತ ಕಾಳ್ಗಿಚ್ಚಿನಂತೆ ಹಬ್ಬಲಾರಂಭಿದೆ. ಚಾಮರಾಜನಗರ, ಬೆಂಗಳೂರು, ಬಾಗಲಕೋಟೆ, ವಿಜಯಪುರದಲ್ಲಿ ಇದು ಹೊಗೆ ಎಬ್ಬಿಸಿದೆ.

ಭಾನುವಾರ ಬೆಳಗಾವಿಯಲ್ಲಿ ಮಾತನಾಡಿದ್ದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು, ವಿರೋಧಿಗಳನ್ನು ಮನೆಗೆ ಬಿಟ್ಟುಕೊಳ್ಳಬೇಡಿ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ಮಾತಿನ ಚಾಟಿ ಬೀಸಿದರೆ, ಮನೆಗೆ ಬರುವವರನ್ನು ಬರಬೇಡಿ ಎಂದು ಹೇಳುವುದು ಕನ್ನಡಿಗರ ಸೌಜನ್ಯವಲ್ಲ ಎಂದು ಬಸವರಾಜ ಬೊಮ್ಮಾಯಿ ತಿರುಗೇಟು ನೀಡಿದ್ದರು.

ಕೆಲವು ದಿನಗಳ ಹಿಂದೆ, ಸೋಲಿನ ಪರಾಮರ್ಶೆಗೆ ಚಾಮರಾಜನಗರದಲ್ಲಿ ನಡೆದ ಸಭೆಯಲ್ಲಿ ಪಕ್ಷದ ಕಾರ್ಯಕರ್ತರು ಆಕ್ರೋಶ ಹೊರ ಹಾಕಿ, 'ವಿ.ಸೋಮಣ್ಣ ಅವರು ಸೋತಿದ್ದು ಪಕ್ಷದ ನಾಯಕರಿಂದಲೇ ಹೊರತು ಕಾಂಗ್ರೆಸ್ ಗ್ಯಾರಂಟಿಗಳಿಂದ ಅಲ್ಲ' ಎಂದು ಹೇಳಿದ್ದರು.

'ಚಾಮರಾಜನಗರದಲ್ಲಿ ಬಿಜೆಪಿ ಗೆಲ್ಲುವ ಅವಕಾಶವಿದ್ದರೂ ಸತತ ಮೂರನೇ ಬಾರಿಗೆ ಸೋತಿದೆ. ಪ್ರತಿ ಬಾರಿ ಸೋತಾಗಲೂ ಪರಾಮರ್ಶೆ ಎನ್ನುತ್ತೀರಿ. ಆದರೆ, ಸೋಲಿಗೆ ಪಕ್ಷದ ನಾಯಕರೇ ಕಾರಣ ಎಂಬುದರ ಬಗ್ಗೆ ಪರಾಮರ್ಶೆ ನಡೆಯುತ್ತಿಲ್ಲ' ಎಂದು ಕಾರ್ಯಕರ್ತರು ಬೇಗುದಿ ಹೊರಹಾಕಿದ್ದರು.

ತಪ್ಪಾಗಿರುವುದು ನಿಜ: ಸಿ.ಟಿ.ರವಿ

'ಈಶ್ವರಪ್ಪ ಹೇಳಿರುವುದರ ಬಗ್ಗೆ ಸಾರ್ವಜನಿಕ ಚರ್ಚೆಗೆ ಹೋಗುವುದಿಲ್ಲ. ಎಲ್ಲವನ್ನೂ ಬಂದವರ ತಲೆಗೆ ಕಟ್ಟಲು ಇಷ್ಟಪಡುವುದಿಲ್ಲ. ಯಾರು ಸರಿ ಅಂತ ಹೇಳುವುದಿಲ್ಲ. ಏನೇ ಇದ್ದರೂ ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡುತ್ತೇನೆ. ನಮ್ಮಿಂದ ಏನೂ ತಪ್ಪಾಗಿಲ್ಲ ಎಂದು ಹೇಳಲು ಹೋಗಲ್ಲ. ಕೆಲವು ತಪ್ಪಾಗಿವೆ. ಮುಂದೆ ತಪ್ಪುಗಳು ಆಗದಂತೆ ಎಚ್ಚರಿಕೆ ವಹಿಸೋಣ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರು ಹೇಳಿದ್ದಾರೆ.

ರೈತ ಸಂಘ: ಪ್ರಧಾನ ಕಾರ್ಯದರ್ಶಿ ರಾಜೀನಾಮೆ

ಹೊಸಪೇಟೆ (ವಿಜಯನಗರ): ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಜೆ.ಕಾರ್ತಿಕ್ ಅವರು ಸೋಮವಾರ ರಾಜೀನಾಮೆ ನೀಡಿದ್ದಾರೆ.

'ಸಂಘದ ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಅವರ ಇಬ್ಬಗೆ ಮತ್ತು ಸರ್ವಾಧಿಕಾರಿ ನೀತಿಯಿಂದ ಬೇಸತ್ತು ರಾಜೀನಾಮೆ ನೀಡಿರುವೆ. 16 ವರ್ಷ ರೈತ ಸಂಘದಲ್ಲಿದ್ದು, ರೈತರಿಗಾಗಿ ಶ್ರಮಿಸಿದ ತೃಪ್ತಿ ಇದೆ' ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ತಿದ್ದುಪಡಿ

ವಿಜಯಪುರ ನಗರದಲ್ಲಿ ಜುಲೈ 29 ಮತ್ತು 30 ರಂದು ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ ನಡೆಯಲಿದೆ. 'ಪ್ರಜಾವಾಣಿ' ಸೋಮವಾರದ ಸಂಚಿಕೆಯಲ್ಲಿ ಸಮ್ಮೇಳನ ನಡೆಯುವ ದಿನಾಂಕ ತಪ್ಪಾಗಿತ್ತು.

ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ: ಪ್ರಿಯಾಂಕ್

'ಸಿಇಒಗಳೇ ತಾಲ್ಲೂಕುಗಳಿಗೆ ಹೊರಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ಗ್ರಾಮೀಣ ಪ್ರದೇಶಗಳಲ್ಲಿ ಪರಿಹಾರ ಕಾರ್ಯ ಕೈಗೊಳ್ಳಲು ತಕ್ಷಣ ತಾಲ್ಲೂಕು ಪ್ರವಾಸ ಕೈಗೊಳ್ಳಲು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ (ಸಿಇಒ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ನಿರ್ದೇಶನ ನೀಡಿದರು.

ರಾಜ್ಯದ ಎಲ್ಲ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜೊತೆ ಸೋಮವಾರ ವರ್ಚುವಲ್ ಸಭೆ ನಡೆಸಿ ಯಾವುದೇ ಕಾರಣಕ್ಕೂ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಅಂತರ್ಜಲ ಕುಸಿತದಿಂದ ಬಳಲುತ್ತಿರುವ ಜಿಲ್ಲೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ವಿಶೇಷ ಆದ್ಯತೆ ನೀಡಲು ಸೂಚಿಸಿದರು.

ಟ್ಯಾಂಕರ್ ಮೂಲಕ ನೀರು ಪೂರೈಸಲು ಹಣಕಾಸು ತೊಂದರೆ ಎದುರಾದರೆ, ಅವಶ್ಯವಿರುವ ಹೆಚ್ಚುವರಿ ಅನುದಾನಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಜಿಲ್ಲಾ ಪಂಚಾಯತಿಗಳಿಗೆ ಸೂಚಿಸಿದರು.

'ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ನೀರಿನ ಕೊರತೆ ಇದೆ. ಅಂತರ್ಜಲ ಮಟ್ಟ ಕುಸಿದಿರುವ ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನೀರಿನ ತೀವ್ರ ಕೊರತೆಯಿದೆ. ನಾಲ್ಕು ಜಿಲ್ಲೆಗಳಲ್ಲಿ ಪರಿಸ್ಥಿತಿ ಸುಧಾರಿಸಿದೆ' ಎಂದು ಗ್ರಾಮೀಣಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಸಚಿವರ ಗಮನಕ್ಕೆ ತಂದರು.

'ಸಾರ್ವಜನಿಕರು ಮತ್ತು ಗ್ರಾಮ ಪಂಚಾಯತಿ ಸದಸ್ಯರು ನೀಡುವ ದೂರುಗಳ ಪರಿಹಾರಕ್ಕೆ ಆದ್ಯತೆ ನೀಡಬೇಕು. ದೂರು ನಿರ್ವಹಣೆ ಕಾರ್ಯಕ್ಕೆ ತಾಲ್ಲೂಕು ಅಧಿಕಾರಿಗಳನ್ನು ಸಜ್ಜುಗೊಳಿಸಬೇಕು' ಎಂದೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಿದ ಪ್ರಿಯಾಂಕ್ ಖರ್ಗೆ, 'ಕಲುಷಿತ ನೀರು ಸರಬರಾಜು ಕುರಿತ ದೂರುಗಳಿಗೆ ಆದ್ಯತೆ ನೀಡಿ ಕ್ರಮ ಕೈಗೊಳ್ಳಬೇಕು' ಎಂದೂ ನಿರ್ದೇಶಿಸಿದರು.

ಕಳೆದ 50 ವರ್ಷಗಳಲ್ಲೇ ಅತೀ ಹೆಚ್ಚು ಮಳೆ ಕೊರತೆ ಈ ವರ್ಷ ಕಾಡುತ್ತಿದೆ. ಒಂದು ವಾರದಿಂದ ಬಹುತೇಕ ಜಿಲ್ಲೆಗಳಲ್ಲಿ ಮಳೆ ಸುರಿದಿದ್ದು ಪರಿಸ್ಥಿತಿ ಸುಧಾರಿಸುತ್ತಿದೆ ಎಂಬ ಅಂಶವನ್ನು ಅಧಿಕಾರಿಗಳು ಸಚಿವರ ಗಮನಕ್ಕೆ ತಂದರು.

ಅಂಕಿ ಅಂಶಗಳು

24 ಕುಡಿಯುವ ನೀರಿನ ಕೊರತೆ ಎದುರಿಸುವ ಜಿಲ್ಲೆಗಳು

424 ನೀರಿನ ತೀವ್ರ ಕೊರತೆಯಿರುವ ಗ್ರಾಮಗಳು

365 ನೀರು ಪೂರೈಸಲು ಬಳಸುವ ಟ್ಯಾಂಕರ್‌ಗಳ ಸಂಖ್ಯೆ

431 ಬಾಡಿಗೆಗೆ ಪಡೆದ ಖಾಸಗಿ ಕೊಳವೆಬಾವಿ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ–590018, ಕರ್ನಾಟಕ, ಭಾರತ
ಕ್ರಮ ಸಂಖ್ಯೆ: ವಿ.ತಾ.ವಿ./ಬೆ/ಸ್ಥಾ.ಅ./2023–24/ಐ.ಎಫ್.ಟಿ.ನಂ.12/1530 ದಿನಾಂಕ: 23 JUN 2023
ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರಮೆಂಟ್ ಮೂಲಕ)
ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯುಮೆಂಟ್ಸ ಕೆ.ಡಬ್ಲ್ಯೂ.ರ ಪ್ರಕಾರ ಇ–ಪ್ರೊಕ್ಯೂರಮೆಂಟ್ ಮೂಲಕ ಟೆಂಡರಗಳನ್ನು ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರುಗಳು:–1)ವಿತಾವಿ ಪ್ರಾದೇಶಿಕ ಕೇಂದ್ರ, ಮೈಸೂರಿನ ಗ್ರಂಥಾಲಯ ಕಟ್ಟಡವನ್ನು ನವೀಕರಣಗೊಳಿಸುವ ಕಾಮಗಾರಿ–ಲೈಟ್ ರೂಫಿಂಗ್, ಸ್ಟ್ರೈಡರ್ ಗ್ಲೇಜಿಂಗ್, ಫಾಲ್ಸ್ ಸಿಲಿಂಗ್ ಇತ್ಯಾದಿ ಕೆಲಸಗಳನ್ನು ನಿರ್ಮಾಣ ಮಾಡುವ (2ನೇ ಕರೆ) ಕೆಲಸದ ಮೊತ್ತ ರೂ.58,81,892/– (ದ್ವಿಲಕೋಟಿ ಪದ್ಧತಿಯಲ್ಲಿ) ಮತ್ತು 2)ವಿತಾವಿ ಪ್ರಾದೇಶಿಕ ಕೇಂದ್ರ, ಕಲಬುರಗಿಯ ಇಲೆಕ್ಟ್ರೀಷಿಯನ್ ಗೆ ಕೊಠಡಿ ನಿರ್ಮಾಣ ಮಾಡುವುದು ಮತ್ತು ಸಬ್–ಸ್ಟೇಷನ್ ಬಳಿ ಡಿಜೇಲ್ ಜನ್‌ರೇಟರಿಗೆ ಶೆಡ್ ನಿರ್ಮಾಣ ಮಾಡುವ ಕಾಮಗಾರಿ ಮೊತ್ತ ರೂ.7,27,119/–. ಈ ಕಾಮಗಾರಿಗಳಿಗೆ ಇದೇ ತರನಾದ 50% ರಷ್ಟು ಕಾಮಗಾರಿಯನ್ನು ನಿರ್ವಹಿಸಿದ ಕುರಿತು ಪ್ರಮಾಣ ಪತ್ರ ಲಗತ್ತಿಸುವುದು. ಇತರೆ ಮಾಹಿತಿಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ:24.06.2023 ರಿಂದ ಪಡೆದುಕೊಳ್ಳಬಹುದು.
ಸಹಿ/–ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,ಬೆಳಗಾವಿ
DIPR/BGM/RO-NO-99/KSMCA/2023-24

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ
ಜಂಟಿ ನಿರ್ದೇಶಕರ ಕಛೇರಿ, 4ನೇ ಮೈನ್‌ರೋಡ್, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು–560027
ಫೋನ್ & ಫ್ಯಾಕ್ಸ್: 080–22240448, ಇ–ಮೇಲ್: dswourban@gmail.com
ಸಂಖ್ಯೆ: ಜನಿ.ಸ.ಕ.ಇ/ಬೆಂ(ನ)/ಲೆಕ್ಕ/ಸಿಆರ್–21/2023–24 ದಿನಾಂಕ: 26.06.2023
ಟೆಂಡರ್ ಅಧಿಸೂಚನೆ
2023–24ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ /ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಖಾಲಿ ಇರುವ ಅಡುಗೆಯವರು, ಅಡುಗೆ ಸಹಾಯಕರು, ಮತ್ತು ರಾತ್ರಿ ಕಾವಲುಗಾರರು ಹಾಗೂ ಆಶ್ರಮ ಶಾಲೆಗಳು/ ವಸತಿ ಶಾಲೆಗಳಲ್ಲಿ/ ಕಛೇರಿಗಳಲ್ಲಿನ ಖಾಲಿ ಹುದ್ದೆಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಆಸಕ್ತಿಯುಳ್ಳ ಸರ್ಕಾರಿ/ಅರೆ ಸರ್ಕಾರಿ ಅಂಗೀಕೃತ ಟೆಂಡರ್‌ದಾರರು ಟೆಂಡರ್ ಬಿಡ್‌ಗಳನ್ನು E-portal ಮುಖಾಂತರ ಸಲ್ಲಿಸತಕ್ಕದ್ದು. E-portal ನಲ್ಲಿ ದಿನಾಂಕ: 28.06.2023 ರಿಂದ 19.07.2023 ರವರೆಗೆ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, 4ನೇ ಮೈನ್ ರೋಡ್, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು–560027, ದೂರವಾಣಿ: 080–22240449 ಹಾಗೂ ವೆಬ್‌ಸೈಟ್ : www.eproc.karnataka.gov.in ನ್ನು ಪರಾಮರ್ಶಿಸುವುದು.
ಸಹಿ/–
ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/374/2023–24

ಕರ್ನಾಟಕ ಸರ್ಕಾರ
ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ
ಮೈಸೂರು ಜಿಲ್ಲೆ, ಮೈಸೂರು
ಡಾ. ಬಾಬು ಜಗಜೀವನ್‌ರಾಮ್ ಭವನ ಕಟ್ಟಡ, ಆದಿಪಂಪ ರಸ್ತೆ
ನಾರಾಯಣಸ್ವಾಮಿ ಬ್ಲಾಕ್, ವಿನಾಯಕನಗರ, ಮೈಸೂರು
E-mail : dswomysore9@gmail.com Ph.: 0821-2344661
ಸಂಖ್ಯೆ:ನಿಪಕೇ.ಮೈ/ಆಡಳಿತ/ಸಿಆರ್–1/2023–24 ದಿನಾಂಕ : 26–06–2023
ಟೆಂಡರ್ ಅರ್ಜಿ ದಿನಾಂಕ ವಿಸ್ತರಿಸಿರುವ ಬಗ್ಗೆ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ನಿರಾಶ್ರಿತರ ಪರಿಹಾರ ಕೇಂದ್ರ, ಜ್ಯೋತಿನಗರ, ಮೈಸೂರು ಇಲ್ಲಿನ ನಿರಾಶ್ರಿತರುಗಳ ಊಟದ ನಿರ್ವಹಣೆಗಾಗಿ 2023–24ನೇ ಸಾಲಿಗೆ ಬೇಕಾಗಿರುವ ಆಹಾರ ಪದಾರ್ಥಗಳು ಮತ್ತು ಇತರೆ ಅಗತ್ಯ ವಸ್ತುಗಳ ಪೂರೈಕೆಗಾಗಿ ಟೆಂಡರ್ ಪ್ರಕಟಣೆ ಸಂಖ್ಯೆ : ನಿಪಕೇ.ಮೈ/ಆಡಳಿತ/ಸಿಆರ್–1/2023–24, ದಿನಾಂಕ : 30–05–2023 ರಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿತ್ತು. ಸದರಿ ಟೆಂಡರ್ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ : 28–06–2023ಕ್ಕೆ ನಿಗಧಿಪಡಿಸಲಾಗಿತ್ತು. ಕೆಲವು ತಾಂತ್ರಿಕ ಕಾರಣಾಂತರಗಳಿಂದ ಸದರಿ ಟೆಂಡರಿನ ಅರ್ಜಿ ಸಲ್ಲಿಸುವ ದಿನಾಂಕವನ್ನು 07–07–2023 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ htpp//.kpp.karnataka.gov.in ನಲ್ಲಿ ನೋಡಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು.
ಸಹಿ/– ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ ಹಾಗೂ
ಕಾರ್ಯದರ್ಶಿ, ನಿರಾಶ್ರಿತರ ಪರಿಹಾರ ಕೇಂದ್ರ, ಮೈಸೂರು

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಸಾರಿಗೆ ಸದನ, ಮುಖ್ಯ ರಸ್ತೆ, ಕಲಬುರಗಿ–585102, ದೂ. 08472–227687
ಸಂಖ್ಯೆ: ಕಕಸಾ/ಕೇಕ/ನೇಮಕ/ನೇ–34/ಕ–351/419/2022–23 ದಿನಾಂಕ : 24–06–2023
:: ಪ್ರಕಟಣೆ ::
ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ (ಈ ಹಿಂದಿನ ಈಕರಸಾ ಸಂಸ್ಥೆಯ) ನೇಮಕಾತಿ ಜಾಹೀರಾತು ಸಂಖ್ಯೆ: 01/2020 ದಿನಾಂಕ: 03–01–2020 ರಡಿ ಚಾಲಕ ಮತ್ತು ಚಾಲಕ–ಕಂ–ನಿರ್ವಾಹಕ ಹುದ್ದೆಗಳ ನೇರ ನೇಮಕಾತಿಗೆ ಅರ್ಜಿ ಸಲ್ಲಿಸಿ, ಮೂಲ ದಾಖಲಾತಿಗಳ ಪರಿಶೀಲನೆಯಲ್ಲಿ ಚಾಲನಾ ಪರೀಕ್ಷೆಗೆ ಅರ್ಹರಾಗಿರುವ ಅಭ್ಯರ್ಥಿಗಳಿಗೆ ಮಾತ್ರ ದಿನಾಂಕ : 03–07–2023 ರಿಂದ ಚಾಲನಾ ಪರೀಕ್ಷೆಯನ್ನು ಕಕರಸಾ ನಿಗಮದ "ಪ್ರಾದೇಶಿಕ ತರಬೇತಿ ಕೇಂದ್ರ – ಹುಮನಾಬಾದ" ನಲ್ಲಿ ಆರಂಭಿಸಲಾಗುತ್ತಿದೆ.
ಅರ್ಹ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ದಿನಾಂಕ 27–06–2023 ರಿಂದ ನಿಗಮದ ವೆಬ್ ವಿಳಾಸ : kkrtcjobs.karnataka.gov.in/drivingtest ಕ್ಕೆ ಭೇಟಿ ನೀಡಿ, ತಮ್ಮ ಕರಪತ್ರಗಳನ್ನು ಡೌನಲೋಡ್ ಮಾಡಿಕೊಂಡು, ಕರೆ ಪತ್ರದಲ್ಲಿ ನಮೂದಿಸಲಾದ ದಿನಾಂಕದಂದು ತಪ್ಪದೇ ಪರೀಕ್ಷಾ ಸ್ಥಳದಲ್ಲಿ ಹಾಜರಿರಲು ಸೂಚಿಸಲಾಗಿದೆ. ಅಲ್ಲದೆ ನಿಗಮದ ಸಹಾಯವಾಣಿ ಸಂಖ್ಯೆ 6366374977 / 08472–227687 ಗಳಿಗೂ ದಿನಾಂಕ 26–06–2023 ರಿಂದ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ.
ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ವಾ.ಸಾ.ಸಂ.ಇ/ಕಲಬುರಗಿ/76/ಕೆ.ಎಸ್.ಎಂ.ಸಿ.&ಎ/2023–24

ಜಿಲ್ಲಾ ಅಧಿಕಾರಿಗಳು
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಬೆಂಗಳೂರು ನಗರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿ.ವಿ ಗೋಪುರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು–560001, ದೂರವಾಣಿ: 080–22866718.
E-mail: dominority401@gmail.com Web:-www.gokdom.kar.nic.in
ಸಂಖ್ಯೆ: ಅಕಇ/ಬೆಂನ/ಹೊ.ಗು.ಟೆಂಡರ್/ಸಿಆರ್–16/2023–24 ದಿನಾಂಕ: 23/06/2023
ಟೆಂಡರ್ ಪ್ರಕಟಣೆ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆವತಿಯಿಂದ ನಿರ್ವಹಿಸಲಾಗುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದಲ್ಲಿ ಖಾಲಿ ಇರುವ ಗ್ರೂಪ್ "ಡಿ" ಹುದ್ದೆಗಳಾದ ಅಡುಗೆಯವರು, ಅಡುಗೆ ಸಹಾಯಕರು ರಾತ್ರಿಕಾವಲುಗಾರರು ಹಾಗೂ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕಛೇರಿಗೆ ಕಂಪ್ಯೂಟರ್ ಡಾಟಾ ಎಂಟ್ರಿ ಆಪರೇಟರ್‌ಗಳು, ಜವಾನರು, ಮತ್ತು ಮೌಲಾನ ಆಜಾದ್ ಆಂಗ್ಲ ಮಾದರಿ ಶಾಲೆಗೆ "ಗ್ರೂಪ್–ಡಿ" ಹುದ್ದೆಗಳನ್ನು ಹೊರ ಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯಲು ಟೆಂಡರ್‌ಅನ್ನು Online System (https://kppp.karnataka.gov.in) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ.
1. ಟೆಂಡರ್‌ಗೆ ಇಟ್ಟ ಮೊತ್ತ ರೂ. 215 ಲಕ್ಷ ಹಾಗೂ ಇ.ಎಂ.ಡಿ. ಮೊತ್ತ ರೂ. 3.23 ಲಕ್ಷಗಳು.
2. ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: 26/06/2023.
3. ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಹ ಅರ್ಜಿದಾರರು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 27/07/2023.
4. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 28/07/2023.
(ಸ್ಥಳ ಮತ್ತು ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ.)
ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು–01 (ದೂರವಾಣಿ ಸಂಖ್ಯೆ: 080–22866718) ಇವರನ್ನು ಸಂಪರ್ಕಿಸಬಹುದಾಗಿದೆ.
ಸಹಿ/–
ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಬೆಂಗಳೂರು ನಗರ ಜಿಲ್ಲೆ.
DIPR/CP/RO381/AAPL/2023-24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನಿಜವಾದ ಪ್ರೀತಿಯು ಒಡೆತನವನ್ನು ಪ್ರತಿಪಾದಿಸುವುದಿಲ್ಲ. ಬದಲಾಗಿ, ಸ್ವಾತಂತ್ರ್ಯವನ್ನು ನೀಡುತ್ತದೆ.
–ರವೀಂದ್ರನಾಥ ಟ್ಯಾಗೋರ್

ಲಿಂಗತ್ವ ಸಮಾನತೆ: ಆಶಾದಾಯಕ ಪ್ರಗತಿ, ಸಾಗಬೇಕಾದ ದಾರಿ ದೂರ

'ಲಿಂಗತ್ವ ಅಸಮಾನತೆ ಸೂಚ್ಯಂಕ ವರದಿ-2023' ಬಿಡುಗಡೆಯಾಗಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ಸಲ ಲಿಂಗತ್ವ ಅಸಮಾನತೆಯ ಕಂದರವನ್ನು ಕಡಿಮೆ ಮಾಡುವಲ್ಲಿ ಭಾರತ ಎಂಟು ಸ್ಥಾನಗಳಷ್ಟು ಮೇಲಕ್ಕೆ ಜಿಗಿದಿದೆ. ಒಟ್ಟು 146 ರಾಷ್ಟ್ರಗಳ ಈ ಪಟ್ಟಿಯಲ್ಲಿ 135ನೇ ಸ್ಥಾನದಿಂದ 127ನೇ ಸ್ಥಾನಕ್ಕೆ ಬಂದಿರುವ ಭಾರತ ಸಾಗಬೇಕಾದ ದಾರಿ ಇನ್ನೂ ದೂರವಿದೆಯಾದರೂ ಸುಧಾರಣೆಯತ್ತ ಹೆಜ್ಜೆ ಹಾಕಿರುವುದು ಸಮಾಧಾನ ತರುವಂತಹ ವಿದ್ಯಮಾನ. ಸಮಾಜದಲ್ಲಿ ಬೇರೂರಿರುವ ಪುರುಷಪ್ರಧಾನ ಮನಸ್ಥಿತಿಯನ್ನು ಹೋಗಲಾಡಿಸಿ ಲಿಂಗತ್ವ ಸಮಾನತೆಯನ್ನು ಸಾಧಿಸುವುದು ಸಂವಿಧಾನದ ಮೂಲ ಉದ್ದೇಶಗಳಲ್ಲಿ ಒಂದು. ಆದರೆ, ನಮ್ಮ ವ್ಯವಸ್ಥೆ ಮಹಿಳೆಯ ಮೇಲಿನ ದಬ್ಬಾಳಿಕೆಯನ್ನು ಉತ್ತೇಜಿಸುವ ಪುರುಷಪ್ರಧಾನ ಮನಸ್ಥಿತಿಯನ್ನೇ ಪ್ರದರ್ಶಿಸುತ್ತಿರುವುದು ಸುಳ್ಳಲ್ಲ. ಲಾಗಾಯ್ತಿನಿಂದಲೂ ಹೆಣ್ಣಿನ ಕುರಿತ ಪೂರ್ವಗ್ರಹಪೀಡಿತ ವಿಚಾರಗಳಿಗೆ ಮಣೆ ಹಾಕುತ್ತಾ ಬಂದುದೇ ಲಿಂಗತ್ವ ಅಸಮಾನತೆಯ ಇಂದಿನ ಮಟ್ಟ ತಲುಪಲು ಕಾರಣ. ತಾರತಮ್ಯಕ್ಕೆ ಕಾರಣವಾದಂತಹ ಪೂರ್ವಗ್ರಹಗಳಿಗೆ ಉತ್ತೇಜನ ನೀಡುವಂತಿದ್ದ ಹಲವು ಕಾನೂನುಗಳನ್ನು ಕೋರ್ಟ್‌ಗಳು ಅಸಿಂಧುಗೊಳಿಸಿವೆ. ಹೀಗಿದ್ದೂ, ಲಿಂಗ ತಾರತಮ್ಯಕ್ಕೆ ಕಾರಣವಾಗುವ ಸಂಗತಿಗಳು ಹಾಗೇ ಬೇರುಬಿಟ್ಟಿರುವುದು ಆಶ್ಚರ್ಯಕರ. ಅಸಮಾನತೆಯ ಕಂದರವನ್ನು ಶೇ 64.3ರಷ್ಟು ಹೋಗಲಾಡಿಸಲಾಗಿದೆ ಎಂದೇನೋ ವರದಿ ಹೇಳುತ್ತದೆ. ಆದರೆ, ನೆಲದ ವಾಸ್ತವ ಬೇರೆಯೇ ಇದೆ. ಆರ್ಥಿಕತೆಯ ಸಹಭಾಗಿತ್ವದಲ್ಲಾಗಲಿ, ಅವಕಾಶ ಸೃಷ್ಟಿಯಲ್ಲಾಗಲಿ, ಶೈಕ್ಷಣಿಕ ಸಾಧನೆಯಲ್ಲಾಗಲಿ, ಆರೋಗ್ಯ ಮತ್ತು ರಾಜಕೀಯ ಸಬಲೀಕರಣದಲ್ಲಾಗಲಿ ದೇಶದ ಲಿಂಗತ್ವ ಸಮಾನತೆಯ ಪ್ರಗತಿ ದುರ್ಬಲವಾಗಿದೆ. ಜಗತ್ತಿನ ಅತ್ಯಧಿಕ ಜನಸಂಖ್ಯೆಯ ದೇಶ ನಮ್ಮದು. ಈ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರನ್ನು ಹೊರಗಿಟ್ಟು ದೇಶ ಆರ್ಥಿಕವಾಗಿ ಮುಂದುವರಿಯುವುದು ಅಸಾಧ್ಯದ ಮಾತು. ರಾಜಕೀಯ ಮತ್ತು ಶಿಕ್ಷಣದಲ್ಲಿ ಹೆಣ್ಣು ಮಕ್ಕಳಿಗೆ ಒಂದಿಷ್ಟು ಅವಕಾಶಗಳು ಸಿಕ್ಕಿರುವುದನ್ನು ಅಲ್ಲಗಳೆಯುವಂತಿಲ್ಲ. ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳ ಬಳಿಕ ಪಂಚಾಯಿತಿ ಮಟ್ಟದಲ್ಲಿ ಮಹಿಳೆಯರಿಗೆ ರಾಜಕೀಯ ಅಧಿಕಾರ ದೊರೆತಿರುವುದೂ ನಿಜ. ಆದರೆ, ಸಂಸತ್ತಿನಲ್ಲಾಗಲಿ, ವಿಧಾನಸಭೆಗಳಲ್ಲಾಗಲಿ ದೇಶದ ಅರ್ಧದಷ್ಟು ಜನಸಂಖ್ಯೆಗೆ ಸೂಕ್ತ ಪ್ರಾತಿನಿಧ್ಯವೇ ಇಲ್ಲ. ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕಲ್ಪಿಸಲು 1996ರಷ್ಟು ಹಿಂದೆಯೇ ಮೊದಲ ಬಾರಿಗೆ ಮಸೂದೆ ಮಂಡನೆಯಾದರೂ ಇದುವರೆಗೆ ಅದು ಕಾರ್ಯರೂಪಕ್ಕೆ ಬಾರದಿರುವುದು ದೇಶದ ಪುರುಷಪ್ರಧಾನ ಮನಸ್ಥಿತಿಗೆ ದ್ಯೋತಕ. ರಾಜಕೀಯದಲ್ಲಿ ಮಹಿಳೆಯನ್ನು ಯಾವ ರೀತಿ ದೂರ ಇಡಲಾಗುತ್ತಾ ಬರಲಾಗಿದೆ ಎಂಬ ವಿಷಯವಾಗಿ ದೇಶದ ಉದ್ದಗಲಕ್ಕೂ ಉದಾಹರಣೆಗಳು ಸಿಕ್ಕುತ್ತವೆ. ನಾಗಾಲ್ಯಾಂಡ್ ರಾಜ್ಯ ಉದಯವಾಗಿ ಸರಿಯಾಗಿ ಅರವತ್ತು ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ (2023ರಲ್ಲಿ) ಅಲ್ಲಿನ ವಿಧಾನಸಭೆಗೆ ಇಬ್ಬರು ಮಹಿಳೆಯರು ಆಯ್ಕೆಯಾಗಿದ್ದಾರೆ ಎಂದರೆ, ತಾರತಮ್ಯ ಯಾವ ಮಟ್ಟದಲ್ಲಿದೆ ಎಂಬುದು ಅಂದಾಜಿಗೆ ನಿಲುಕೀತು.

ಮಹಿಳೆಯರ ಕುರಿತ ಪೂರ್ವಗ್ರಹಗಳನ್ನು ತೊಡೆದುಹಾಕಿ, ಅವರು ಘನತೆಯಿಂದ ಬದುಕುವ, ಕೆಲಸ ಮಾಡುವ ಹಕ್ಕನ್ನು ಎತ್ತಿ ಹಿಡಿಯುವ ಕೆಲಸ ಆಗಬೇಕಿದೆ

ಮಹಿಳಾ ಕಾರ್ಮಿಕರ ಕೆಲಸದ ವಾತಾವರಣವನ್ನೇ ನೋಡಿ. ಅವರಿಗೆ ಸಿಗಬೇಕಾದಷ್ಟು ಕನಿಷ್ಠ ವೇತನ ಸಿಗುವುದಿಲ್ಲ. ಕೆಲಸದ ಸಮಯ ದೀರ್ಘವಾಗಿರುತ್ತದೆ. ಸುರಕ್ಷತೆ ಇರುವುದಿಲ್ಲ. ಲೈಂಗಿಕ ಕಿರುಕುಳ ಪ್ರಕರಣಗಳು ಸಹ ನಡೆಯುತ್ತಲೇ ಇರುತ್ತವೆ. ಉನ್ನತ ಹುದ್ದೆಗಳ, ತಾಂತ್ರಿಕ ನೈಪುಣ್ಯ ಬಯಸುವ ಕೆಲಸಗಳಿಗೆ ಮಹಿಳೆಯರನ್ನು ಪರಿಗಣಿಸದಿರುವ ಪರಿಪಾಠಕ್ಕೂ ದೊಡ್ಡ ಇತಿಹಾಸವಿದೆ. ಘನತೆಯಿಂದ ಕೆಲಸ ಮಾಡುವ ಅವರ ಹಕ್ಕನ್ನು ದಶಕಗಳಿಂದಲೂ ಕಸಿಯುತ್ತಾ ಬರಲಾಗಿದೆ. ಆದ್ದರಿಂದ ಉದ್ಯೋಗದ ಕ್ಷೇತ್ರದಲ್ಲಿ ಶೇ 40ರಷ್ಟು ಮಾತ್ರ ಸಮಾನತೆ ಸಾಧಿಸಲು ಸಾಧ್ಯವಾಗಿದೆ. ಮಹಿಳೆಯರಿಗೆ ಆರೋಗ್ಯ ಸೌಕರ್ಯ ಕಲ್ಪಿಸುವ ವಿಷಯದಲ್ಲಿ ಒಂದಿಷ್ಟು ಸುಧಾರಣೆಗಳು ಆಗಿವೆ ಎಂದು ವರದಿಗಳು ಹೇಳುತ್ತವೆ. ಆದರೆ, ಅಪೌಷ್ಟಿಕತೆಯ ಸಮಸ್ಯೆ ಇನ್ನೂ ಹಾಗೇ ಇದೆ. ಹೆಣ್ಣುಮಕ್ಕಳ ಶಿಕ್ಷಣವನ್ನು ಉತ್ತೇಜಿಸಲು ತಡವಾಗಿಯಾದರೂ ಕೆಲವು ಸೌಲಭ್ಯಗಳನ್ನು ಒದಗಿಸಲಾಗಿದೆಯಾದರೂ ಓದಿದ ಪ್ರತಿ ಆಸಕ್ತ ಹೆಣ್ಣುಮಗಳು ಉದ್ಯೋಗ ಪಡೆಯುವಂತಹ ವಾತಾವರಣ ಸೃಷ್ಟಿಸುವ ಅಗತ್ಯವಿದೆ. ದೆಹಲಿಯಲ್ಲಿ ಸಾರ್ವಜನಿಕ ಸಾರಿಗೆಯಲ್ಲಿ ಉಚಿತ ಪ್ರಯಾಣದ ಯೋಜನೆ ಜಾರಿಗೆ ಬಂದ ಬಳಿಕ, ದುಡಿಮೆಯಲ್ಲಿ ಭಾಗವಹಿಸುವ ಮಹಿಳೆಯರ ಪ್ರಮಾಣ ಶೇ 3.5ರಷ್ಟು ಹೆಚ್ಚಾಗಿದೆ ಎಂದು ಅಲ್ಲಿನ ಅಧ್ಯಯನ ವರದಿಗಳು ಹೇಳುತ್ತವೆ. ರಾಜ್ಯದಲ್ಲಿ ಅದೇ ಮಾದರಿಯಲ್ಲಿ ಜಾರಿಗೆ ಬಂದಿರುವ 'ಶಕ್ತಿ' ಯೋಜನೆಯು ಎಷ್ಟರಮಟ್ಟಿಗೆ ಸಕಾರಾತ್ಮಕ ಬದಲಾವಣೆ ತರಬಹುದು ಎನ್ನುವುದು ಮುಂದಿನ ದಿನಗಳಲ್ಲಿ ಗೊತ್ತಾಗಲಿದೆ. ಮಹಿಳೆಯ ಕುರಿತು ಹಿಂದಿನಿಂದಲೂ ಬೆಳೆದುಬಂದಿರುವ ಪೂರ್ವಗ್ರಹಗಳನ್ನು ತೊಡೆದುಹಾಕಿ, ಅವರು ಘನತೆಯಿಂದ ಬದುಕುವ, ಕೆಲಸ ಮಾಡುವ ಹಕ್ಕನ್ನು ಎತ್ತಿ ಹಿಡಿಯುವ ಕೆಲಸವಂತೂ ಆಗಬೇಕಿದೆ. ಹೆಣ್ಣುಮಕ್ಕಳಿಗೆ ಸಮಾನ ಅವಕಾಶ ಒದಗಿಸಿ, ಆರ್ಥಿಕತೆಯ ಸಹಭಾಗಿತ್ವಕ್ಕೆ ಅನುವು ಮಾಡಿಕೊಟ್ಟಿದ್ದೇ ಆದರೆ ದೇಶದ ಪ್ರಗತಿಯ ವೇಗ ಹೊಸ ಮಜಲನ್ನು ತಲುಪಲಿದೆ. ಆಡಳಿತದ ಹೊಣೆ ಹೊತ್ತವರು, ನೀತಿ ನಿರೂಪಕರು ಈ ದಿಸೆಯಲ್ಲಿ ಗಂಭೀರವಾಗಿ ಆಲೋಚಿಸಬೇಕು. ಸಮಾನತೆಯನ್ನು ಸೃಷ್ಟಿಸುವ ಹಾದಿಯಲ್ಲಿ ಈಗ ಸಾಧ್ಯವಾಗಿರುವ ಅಲ್ಪಪ್ರಗತಿ ಇದೇ ಸ್ಫೂರ್ತಿಯಲ್ಲಿ ಮುಂದುವರಿದು, ತಾರತಮ್ಯವನ್ನು ಸಂಪೂರ್ಣವಾಗಿ ಹೋಗಲಾಡಿಸುವಂತೆ ಆಗಬೇಕು.

ದಿನದ ಟ್ವೀಟ್

ನಷ್ಟದ ಭೀತಿಯೇಕೆ?

ಬೆಂಗಳೂರಿನಲ್ಲಿ ನೆಲೆಸಿರುವ ಯಾರೇ ಆದರೂ ಈ ಮಾತನ್ನು ಕೇಳಿ ನಗುತ್ತಾರೆ. ಅವರು ಮೀಟರ್ ಪ್ರಕಾರ ಹಣ ಪಡೆಯುವುದಿಲ್ಲ, ಪ್ರಯಾಣಿಕರಿಗೆ ಬೇಕಿರುವಲ್ಲಿಗೆ ಬರಲು ಬಹುತೇಕ ಸಲ ನಿರಾಕರಿಸುತ್ತಾರೆ. ಆದರೆ, ಅಂಥವರಿಗೆ ಈಗ ಇದ್ದಕ್ಕಿದ್ದಂತೆ ವಹಿವಾಟು ನಷ್ಟವಾಗುವ ಬಗ್ಗೆ ಕಳವಳ ಮೂಡಿಬಿಟ್ಟಿದೆ.

(ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯದ 'ಶಕ್ತಿ' ಯೋಜನೆಯಿಂದ ತಮ್ಮ ವರಮಾನಕ್ಕೆ ಹೊಡೆತ ಬೀಳುತ್ತಿದೆ ಎಂಬ ಬೆಂಗಳೂರಿನ ಆಟೊ ಚಾಲಕರೊಬ್ಬರ ಹೇಳಿಕೆಗೆ ಪ್ರತಿಕ್ರಿಯೆ)

ಪ್ರಿಯಸ್ಮಿತಾ, ಉದ್ಯಮಿ

ಕಿಡಿನುಡಿ

ಬಹಳಷ್ಟು ನಿಧಾನವಾಗಿ ಸಾಗುವ ರೈಲುಗಳಿಗೂ 'ಎಕ್ಸ್‌ಪ್ರೆಸ್' ಎಂಬ ಹೆಸರಿದೆ. ಎಕ್ಸ್‌ಪ್ರೆಸ್ ಎನ್ನಲು ಯಾವ ವೇಗದ ಜೊತೆ ಹೋಲಿಸಲಾಗುತ್ತದೆ? ನಡಿಗೆಯ ವೇಗವನ್ನೇ?!

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

25 ವರ್ಷಗಳ ಹಿಂದೆ

ಶನಿವಾರ, 27-6-1998

● **ಕೆ.ಆರ್.ಎಸ್‌ನಲ್ಲಿ ಪ್ರತಿಭಟನೆ: ಗಲಭೆ ಅಗ್ನಿಸ್ಪರ್ಶ, ಗಾಳಿಯಲ್ಲಿ ಗುಂಡು**

ಮಂಡ್ಯ, ಜೂನ್ 26– ಮಂಡ್ಯ ಜಿಲ್ಲೆ ರೈತರು ವರುಣಾ ನಾಲೆ ಕಾಮಗಾರಿ ವಿರುದ್ಧ ಕೃಷ್ಣರಾಜ ಸಾಗರ ಅಣೆಕಟ್ಟು ಪ್ರದೇಶದಲ್ಲಿ ಇಂದು ಪ್ರತಿಭಟನೆ ನಡೆಸುತ್ತಿದ್ದಾಗ ಗಲಭೆ ಸಂಭವಿಸಿ 20ಕ್ಕೂ ಹೆಚ್ಚು ಜನ ಗಾಯಗೊಂಡರು. ಗಲಭೆ ನಿಯಂತ್ರಣಕ್ಕೆ ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದರು.

ಮೈಸೂರು ಜಿಲ್ಲೆಗೆ ನೀರೊದಗಿಸಲು ಎರಡನೇ ಹಂತದ ವರುಣಾ ನಾಲೆ ನಿರ್ಮಿಸುತ್ತಿರುವುದನ್ನು ಪ್ರತಿಭಟಿಸಿ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ 'ಕೆ.ಆರ್.ಎಸ್. ಚಲೋ' ಕಾರ್ಯಕ್ರಮ ಆಯೋಜಿಸಿತ್ತು.

● **'ಅದಕ್ಷ, ಭ್ರಷ್ಟ ಸಚಿವರನ್ನು ಸಂಪುಟದಿಂದ ಕೈಬಿಡಿ'**

ಬೆಂಗಳೂರು, ಜೂನ್ 26– 'ಅದಕ್ಷ ಮತ್ತು ಭ್ರಷ್ಟ ಸಚಿವರನ್ನು ಸಂಪುಟದಿಂದ ನಿರ್ದಾಕ್ಷಿಣ್ಯವಾಗಿ ಕೈಬಿಡಿ; ಉತ್ಸಾಹಿ ಮತ್ತು ಕ್ರಿಯಾಶೀಲ ವ್ಯಕ್ತಿಗಳಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ನೀಡಿ'.

ಪಕ್ಷದ ಸಂಘಟನೆ ಹಾಗೂ ಸಂಪುಟ ಪುನರ್ರಚನೆ ಸಂಬಂಧ ಜನತಾದಳದ ಹಿರಿಯ ಮುಖಂಡರು ನಡೆಸುತ್ತಿರುವ ಸಮಾಲೋಚನಾ ಸಭೆಯ ಅಂತಿಮ ದಿನವಾದ ಇಂದು, ಪಕ್ಷದ ಜಿಲ್ಲಾ ಮುಖಂಡರುಗಳಿಂದ ಪ್ರಮುಖವಾಗಿ ಕೇಳಿಬಂದ ಒತ್ತಾಯವಿದು.

50 ವರ್ಷಗಳ ಹಿಂದೆ

ಬುಧವಾರ, 27-6-1973

● **ರಾಷ್ಟ್ರೀಯ ಆಶೋತ್ತರಗಳನ್ನು ಈಡೇರಿಸುವ ವೈದ್ಯ ಶಿಕ್ಷಣ ರೂಪಿಸಲು ಗಿರಿ ಕರೆ**

ಬೆಂಗಳೂರು, ಜೂನ್ 26– ರಾಷ್ಟ್ರೀಯ ಗುರಿ ಮತ್ತು ಆಶೋತ್ತರಗಳನ್ನು ಈಡೇರಿಸಬಲ್ಲ ವೈದ್ಯ ಶಿಕ್ಷಣ ಮತ್ತು ವೈದ್ಯರನ್ನು ರೂಪಿಸಲು ರಾಷ್ಟ್ರಪತಿ ವಿ.ವಿ.ಗಿರಿ ಅವರು ಕರೆಯಿತ್ತರು.

ವಿಲ್ಸನ್ ಗಾರ್ಡನ್ ಬಳಿ ಹೊಸೂರು ರಸ್ತೆಯಲ್ಲಿ ನಿರ್ಮಾಣವಾಗಿರುವ 'ಕಿದ್ವಾಯ್ ಸ್ಮಾರಕ ಕ್ಯಾನ್ಸರ್ ಚಿಕಿತ್ಸೆ ಸಂಶೋಧನಾ ಮತ್ತು ಶಿಕ್ಷಣ ಸಂಸ್ಥೆ'ಯನ್ನು ಉದ್ಘಾಟಿಸಿದ ಅವರು, ಮಾರಕ ರೋಗವಾದ ಕ್ಯಾನ್ಸರ್ ವ್ಯಾಧಿಯನ್ನು ಸರ್ಕಾರವೊಂದೇ ಎದುರಿಸಲಾರದು. ಸಂಸ್ಥೆಯು ಈ ಸುಂದರ ನಗರದ ನಾಗರಿಕರಿಂದ ಅಗತ್ಯ ನೆರವನ್ನು ಪಡೆಯಬಹುದೆಂಬ ಭರವಸೆ ಇದೆ' ಎಂದರು.

ಸಂಸ್ಥೆಯ ಸ್ಥಾಪನೆಗೆ ಬೀಜಧನವು ಶ್ರೀ ಕಿದ್ವಾಯ್ ಅವರು ಕೇಂದ್ರ ಸಚಿವರಾಗಿದ್ದಾಗ ಆಹಾರಧಾನ್ಯದ ನ್ಯಾಯಬೆಲೆಯ ಅಂಗಡಿಗಳು ಗಳಿಸಿದ ಲಾಭದಿಂದ ಬಂದುದೆಂಬುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಸ್ಥೆಗೆ ಗೆಳೆಯ ಕಿದ್ವಾಯ್ ಅವರ ಹೆಸರಿಟ್ಟಿರುವುದು ಉಚಿತವಾಗಿದೆ ಎಂದು ಅವರು ಹೇಳಿದರು.

ನ್ಯಾಯಮೂರ್ತಿ ಖನ್ನಾ ಅವರ ನೇರವಂತಿಕೆಯ ಕಥೆಯನ್ನು ಎಲ್ಲರಿಗೂ ತಿಳಿಸಬೇಕು

ತುರ್ತುಪರಿಸ್ಥಿತಿ: ಸ್ಮರಿಸಬೇಕಾದ ಮಹನೀಯ

ಸೂರ್ಯ- ನಮಸ್ಕಾರ

ಎ. ಸೂರ್ಯ ಪ್ರಕಾಶ್

ಇಂದಿರಾ ಗಾಂಧಿ ಅವರು ಕರಾಳ ತುರ್ತು ಪರಿಸ್ಥಿತಿಯನ್ನು ಹೇರಿ ಜೂನ್ 25ಕ್ಕೆ ಇನ್ನೊಂದು ವರ್ಷ ಕಳೆಯಿತು. ಈ ಕ್ರಮದ ಮೂಲಕ ಇಂದಿರಾ ಅವರು ಶಕ್ತಿಶಾಲಿ ಪ್ರಜಾತಂತ್ರ ವ್ಯವಸ್ಥೆಯೊಂದನ್ನು ಸರ್ವಾಧಿಕಾರಿ ವ್ಯವಸ್ಥೆಯನ್ನಾಗಿಸಿದರು. ಜನರ ಮೂಲಭೂತ ಹಕ್ಕುಗಳನ್ನು ಅಮಾನತಿನಲ್ಲಿ ಇರಿಸಿದರು, ತಮ್ಮ ರಾಜಕೀಯ ವಿರೋಧಿಗಳನ್ನು ಬಹಳ ಕ್ರೂರವಾಗಿ ಹತ್ತಿಕ್ಕಿದರು, ಭಿನ್ನ ದನಿಗಳನ್ನು ಹೊಸಕಿಹಾಕಿದರು.

ಭಯ ಹುಟ್ಟಿಸುವ ಆ 19 ತಿಂಗಳ ಅವಧಿಯನ್ನು ಕಂಡ ಯಾರೂ ಆ ದುಃಸ್ವಪ್ನವನ್ನು ಮರೆಯಬಾರದು, ಅಂದಿನ ದೌರ್ಜನ್ಯಗಳಿಗೆ ಕಾರಣರಾದವರನ್ನು ಎಂದಿಗೂ ಕ್ಷಮಿಸಬಾರದು (ಈ ಲೇಖಕ ಆ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ವರದಿಗಾರ ಆಗಿದ್ದರು).

ತುರ್ತು ಪರಿಸ್ಥಿತಿಯ ವೇಳೆ ಜಾರಿಯಲ್ಲಿದ್ದ ಕರಾಳ ಕಾನೂನುಗಳು ಹಲವರನ್ನು ಭೀತಿಗೆ ನೂಕಿದವು. ಮೀಸಾ ಕಾಯ್ದೆ ಹಾಗೂ ಭಾರತದ ರಕ್ಷಣೆ ನಿಯಮಗಳ ಅಡಿಯಲ್ಲಿ ಬಂಧಿಸಲು ಆಗ ಅವಕಾಶ ಇತ್ತು. ಕೆಲವು ರಾಜಕಾರಣಿಗಳು, ಪತ್ರಕರ್ತರು ಹಾಗೂ ನ್ಯಾಯಮೂರ್ತಿಗಳು ಆಗ ಸರ್ಕಾರವು ಅಧಿಕಾರವನ್ನು ಎಣೆಯಿಲ್ಲದೆ ಬಳಸುತ್ತಿದ್ದ ಬಗೆಯನ್ನು ಧೈರ್ಯದಿಂದ ಎದುರಿಸಿದರು. ಇಂದಿರಾ ಗಾಂಧಿ ಅವರ ಆಡಳಿತಕ್ಕೆ ಎದುರಾಗಿ ನಿಂತವರ ಪೈಕಿ ನ್ಯಾಯಾಂಗದಲ್ಲಿ ಒಂದು ಹೆಸರು ಎದ್ದು ಕಾಣುತ್ತದೆ. ಅವರು ನ್ಯಾಯಮೂರ್ತಿ ಎಚ್.ಆರ್. ಖನ್ನಾ.

ಅದು ಎಡಿಎಂ ಜಬಲ್ಪುರ್ ಮತ್ತು ಶಿವಕಾಂತ್ ಶುಕ್ಲಾ ನಡುವಿನ ಪ್ರಕರಣ. ತುರ್ತು ಪರಿಸ್ಥಿತಿಯು ಜಾರಿಯಲ್ಲಿ ಇರುವ ಸಂದರ್ಭದಲ್ಲಿ, ದೇಶದ ಪ್ರಜೆಗಳು ಸಂವಿಧಾನದ 21ನೆಯ ವಿಧಿಯು ನೀಡಿರುವ ಜೀವಿಸುವ ಸ್ವಾತಂತ್ರ್ಯವನ್ನು ರಕ್ಷಿಸುವಂತೆ ಕೋರಿ ನ್ಯಾಯಾಲಯದ ಮೊರೆ ಹೋಗಬಹುದೇ ಎಂಬುದನ್ನು ಸುಪ್ರೀಂ ಕೋರ್ಟ್ ಈ ಪ್ರಕರಣದಲ್ಲಿ ತೀರ್ಮಾನಿಸಬೇಕಿತ್ತು. ನ್ಯಾಯಪೀಠದಲ್ಲಿ ಇದ್ದ ನಾಲ್ವರು ನ್ಯಾಯಮೂರ್ತಿಗಳು 'ಇಲ್ಲ' ಎಂದು ಹೇಳಿದರು. ಆದರೆ ನ್ಯಾಯಮೂರ್ತಿ ಖನ್ನಾ ಅವರು ಮಾತ್ರ, ಈ ಸ್ವಾತಂತ್ರ್ಯವನ್ನು 'ಕಾರ್ಯಾಂಗದ ಪ್ರಶ್ನಾತೀತ ಅಧಿಕಾರದ ಕೃಪೆಯಲ್ಲಿ' ಇರಿಸುವುದಕ್ಕೆ ದೇಶದ ಸಂವಿಧಾನ ಮತ್ತು ಕಾನೂನುಗಳು ಅವಕಾಶ ಕೊಡುವುದಿಲ್ಲ' ಎಂದು ಹೇಳಿದರು.

ಪ್ರಜೆಗಳ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಎಲ್ಲ ವಿಧಿಗಳು ಬಹುಮುಖ್ಯ. ಆದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ 21ನೆಯ ವಿಧಿಗೆ ಹೆಚ್ಚಿನ ಮಹತ್ವ ಇದೆ. ಇದನ್ನು ಅರ್ಥ ಮಾಡಿಕೊಂಡಾಗ, ನ್ಯಾಯಮೂರ್ತಿ ಖನ್ನಾ ಅವರು ನೀಡಿದ ಭಿನ್ನಮತದ ತೀರ್ಪಿನ ಮಹತ್ವ ಗೊತ್ತಾಗುತ್ತದೆ. 'ಕಾನೂನಿನ ಮೂಲಕ ವಿವರಿಸಲಾಗಿರುವ ಪ್ರಕ್ರಿಯೆ ಹೊರತುಪಡಿಸಿ, ಬೇರೆ ಯಾವ ರೀತಿಯಲ್ಲಿಯೂ ಯಾವುದೇ ವ್ಯಕ್ತಿಯ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವಂತಿಲ್ಲ' ಎಂದು ಈ ವಿಧಿಯು ಹೇಳಿದೆ. ಹೀಗಿದ್ದರೂ ಇಂದಿರಾ ಗಾಂಧಿ ಅವರು ತುರ್ತು ಪರಿಸ್ಥಿತಿಯನ್ನು ಹೇರಿದ ನಂತರದಲ್ಲಿ ಮಾಡಿದ ಮೊದಲ ಕೆಲಸ, ಜೀವಿಸುವ ಸ್ವಾತಂತ್ರ್ಯ, ಹಾಗೂ ವೈಯಕ್ತಿಕ ಸ್ವಾತಂತ್ರ್ಯ ಸೇರಿದಂತೆ ಪ್ರಜೆಗಳ ಎಲ್ಲ ಮೂಲಭೂತ ಹಕ್ಕುಗಳನ್ನು ಅಮಾನತಿನಲ್ಲಿ ಇರಿಸುವ ಆದೇಶಕ್ಕೆ ರಾಷ್ಟ್ರಪತಿಯವರು ಹಿಂದೆ-ಮುಂದೆ ನೋಡದೆ ಸಹಿ ಹಾಕುವಂತೆ ಮಾಡಿದ್ದು.

ಈ ಆದೇಶ ಬಂದ ನಂತರದಲ್ಲಿ ಸಹಸ್ರಾರು ಮಂದಿ ರಾಜಕೀಯ ಕಾರ್ಯಕರ್ತರು, ಪತ್ರಕರ್ತರು ಮತ್ತು ಸಾಮಾಜಿಕ ಕಾರ್ಯಕರ್ತರನ್ನು ಜೈಲಿಗೆ ತಳ್ಳಲಾಯಿತು. ಅವರು ವಿವಿಧ ಹೈಕೋರ್ಟ್‌ಗಳ ಮೊರೆ ಹೋದರು. ಅರ್ಜಿದಾರರ ಸಾಲಿನಲ್ಲಿ ರಾಜಕೀಯ ಪ್ರಮುಖರಾದ ಮಧು ದಂಡವತೆ, ಲಾಲ್ ಕೃಷ್ಣ ಅಡ್ವಾಣಿ ಅವರೂ ಇದ್ದರು. ಎಲ್ಲ ಪ್ರಕರಣಗಳನ್ನು ತನ್ನಲ್ಲಿಗೆ ವರ್ಗಾಯಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿತು. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎ.ಎನ್. ರೇ ಅವರು ತಮ್ಮನ್ನೂ ಒಳಗೊಂಡಂತೆ, ನ್ಯಾಯಮೂರ್ತಿಗಳಾದ ಖನ್ನಾ, ಎಚ್.ಎಂ. ಬೇಗ್, ವೈ.ವಿ. ಚಂದ್ರಚೂಡ್ ಮತ್ತು ಪಿ.ಎನ್. ಭಗವತಿ ಅವರಿದ್ದ ನ್ಯಾಯಪೀಠ ರಚಿಸಿದರು.

ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ಅಟಾರ್ನಿ ಜನರಲ್ ನಿರೇನ್ ಡೆ ಹಾಗೂ ನ್ಯಾಯಮೂರ್ತಿ ಖನ್ನಾ ಅವರ ನಡುವೆ ನಡೆದ ಮಾತುಕತೆಯ ಮೂಲಕ, ಅವರ ಭಿನ್ನಮತದ ತೀರ್ಪಿನ ಮಹತ್ವವನ್ನು ಅರ್ಥ ಮಾಡಿಕೊಳ್ಳಬಹುದು. ತುರ್ತು ಪರಿಸ್ಥಿತಿಯು ಜಾರಿಯಲ್ಲಿ ಇರುವವರೆಗೆ ವೈಯಕ್ತಿಕ ಸ್ವಾತಂತ್ರ್ಯ ಬೇಕು ಎಂದು ಯಾವ ಪ್ರಜೆಯೂ ಕೇಳುವಂತಿಲ್ಲ ಎಂದು ಡೆ ವಾದಿಸಿದರು. ಇದರ ಅರ್ಥ ಪರೋಕ್ಷವಾಗಿ ಪೊಲೀಸ್ ರಾಜ್ಯ ನಿರ್ಮಾಣವೇ ಆಗಿತ್ತು. ಏಕೆಂದರೆ, ಇದನ್ನು ಒಪ್ಪಿದರೆ ನ್ಯಾಯಾಲಯಗಳು ಪ್ರಜೆಗಳ ನಿಲುಕಿಗೆ ಹೊರತಾಗುತ್ತಿದ್ದವು.

'ನೈದರ್ ರೋಸಸ್ ನಾರ್ ಥಾರ್ನ್ಸ್' ಹೆಸರಿನ ತಮ್ಮ ಆತ್ಮಕಥೆಯಲ್ಲಿ ನ್ಯಾಯಮೂರ್ತಿ ಖನ್ನಾ ಅವರು, ಮಾನವ ಹಕ್ಕುಗಳು ಹಾಗೂ ನಾಗರಿಕರ ಸ್ವಾತಂತ್ರ್ಯದ ಬಗ್ಗೆ ಯಾವಾಗಲೂ ಮಾತನಾಡುತ್ತಿದ್ದ ತಮ್ಮ ಕೆಲವು ಸಹೋದ್ಯೋಗಿಗಳು ಮಾತನಾಡದೆ ಕುಳಿತಿದ್ದರು ಎಂದು ಹೇಳಿದ್ದಾರೆ. ಹೀಗಾಗಿ, ನ್ಯಾಯಮೂರ್ತಿ ಖನ್ನಾ ಅವರು ಅಟಾರ್ನಿ ಜನರಲ್ ಮಾತುಗಳಿಗೆ ಮರುಪ್ರಶ್ನೆ ಹಾಕಲು ನಿರ್ಧರಿಸಿದರು. ತಮ್ಮ ವಾದವನ್ನು ಪರಿಗಣಿಸುವುದಾದರೆ, 'ಪೊಲೀಸ್ ಅಧಿಕಾರಿಯೊಬ್ಬ ತನ್ನ ವೈಯಕ್ತಿಕ ದ್ವೇಷದಿಂದ ಇನ್ನೊಬ್ಬನನ್ನು ಕೊಂದರೆ ಪರಿಹಾರ ಮಾರ್ಗ ಇರುತ್ತದೆಯೇ' ಎಂದು ನ್ಯಾಯಮೂರ್ತಿ ಖನ್ನಾ ಅವರು ಅಟಾರ್ನಿ ಜನರಲ್‌ರನ್ನು ಪ್ರಶ್ನಿಸಿದರು. ನಿರೇನ್ ಡೆ ಉತ್ತರ ಬಹಳ ಸ್ಪಷ್ಟವಾಗಿತ್ತು. 'ತುರ್ತು ಪರಿಸ್ಥಿತಿ ಇರುವಷ್ಟು ಕಾಲ ಇಂತಹ ಸಂದರ್ಭಗಳಲ್ಲಿ ನ್ಯಾಯಾಂಗದ ಮೂಲಕ ಪರಿಹಾರ ಸಾಧ್ಯವಿಲ್ಲ' ಎಂದು ಉತ್ತರಿಸಿದರು. ಮುಂದುವರಿದು ನಿರೇನ್ ಡೆ ಅವರು, 'ಇದರಿಂದ ನಿಮ್ಮ ಆತ್ಮಸಾಕ್ಷಿಗೆ ಆಘಾತವಾಗಬಹುದು, ನನಗೂ ಹಾಗೇ ಆಗುತ್ತದೆ. ಆದರೆ ನನ್ನ ವಾದಕ್ಕೆ ಅನುಗುಣವಾಗಿ ಹೇಳುವುದಾದರೆ, ಆ ವಿಚಾರವಾಗಿ ನ್ಯಾಯಾಲಯದಲ್ಲಿ ಯಾವುದೇ ಪ್ರಕ್ರಿಯೆ ನಡೆಯಲು ಅವಕಾಶವಿಲ್ಲ' ಎಂದರು.

ಆದರೆ ಇದು ಬಹುತೇಕ ನ್ಯಾಯಮೂರ್ತಿಗಳ ಆತ್ಮಸಾಕ್ಷಿಯನ್ನು ಕಲಕಲಿಲ್ಲ. ಸಿಜೆಐ ರೇ, ನ್ಯಾಯಮೂರ್ತಿಗಳಾದ ಬೇಗ್, ಚಂದ್ರಚೂಡ್ ಮತ್ತು ಭಗವತಿ ಅವರು ಸರ್ಕಾರದ ವಾದವನ್ನು ಎತ್ತಿಹಿಡಿದರು. ನ್ಯಾಯಮೂರ್ತಿ ಖನ್ನಾ ಭಿನ್ನಮತವನ್ನು ದಾಖಲಿಸಿದರು. ಜೀವಿಸುವ ಹಾಗೂ ವೈಯಕ್ತಿಕ ಸ್ವಾತಂತ್ರ್ಯವನ್ನು ಕಸಿಯುವ ಹಕ್ಕು ತನಗೆ ಇದೆ ಎಂದು ಸರ್ಕಾರ ಹೇಳಿದ್ದನ್ನು ಒಪ್ಪಲಾಗದು ಎಂದು ನ್ಯಾಯಮೂರ್ತಿ ಖನ್ನಾ ಹೇಳಿದರು. ಹೀಗೆ ಹೇಳುವುದರ ಪರಿಣಾಮ ಅವರಿಗೆ ಗೊತ್ತಿತ್ತು. ಎಡಿಎಂ ಜಬಲ್ಪುರ್ ಪ್ರಕರಣವನ್ನು 1976ರಲ್ಲಿ ಇತ್ಯರ್ಥಗೊಳಿಸಲಾಯಿತು. ಒಂಬತ್ತು ತಿಂಗಳ ನಂತರ ಸಿಜೆಐ ಸ್ಥಾನದಿಂದ ರೇ ನಿವೃತ್ತರಾಗುವವರಿದ್ದರು. ಅತ್ಯಂತ ಹಿರಿಯ ನ್ಯಾಯಮೂರ್ತಿಯಾಗಿದ್ದ ಖನ್ನಾ ಸಿಜೆಐ ಆಗಬೇಕಿತ್ತು. ಸರ್ಕಾರಕ್ಕೆ ತನ್ನ ನಿಲುವುಗಳನ್ನು ಎತ್ತಿಹಿಡಿಯುವ ನ್ಯಾಯಮೂರ್ತಿಗಳು ಬೇಕು ಎಂಬುದು ಅವರಿಗೆ ತಿಳಿದಿತ್ತು. ಅದಕ್ಕಾಗಿಯೇ ನ್ಯಾಯಮೂರ್ತಿಗಳಾದ ಕೆ.ಎಸ್. ಹೆಗ್ಡೆ, ಜೆ.ಎಂ. ಶೆಲಾತ್, ಎ.ಎನ್. ಗ್ರೋವರ್ ಅವರ ಹಿರಿತನ ಕಡೆಗಣಿಸಲಾಗಿತ್ತು ಎಂಬುದು ಗೊತ್ತಿತ್ತು. ಕೇಂದ್ರವು, ನ್ಯಾಯಮೂರ್ತಿ ಖನ್ನಾ ಅವರ ಹಿರಿತನ ಕಡೆಗಣಿಸಿ 1977ರ ಜನವರಿಯಲ್ಲಿ ನ್ಯಾಯಮೂರ್ತಿ ಎಚ್.ಎಂ. ಬೇಗ್ ಅವರನ್ನು ಸಿಜೆಐ ಆಗಿಸಿತು.

ಸರ್ಕಾರದ ವಾದವನ್ನು ಒಪ್ಪಿದ ನ್ಯಾಯಮೂರ್ತಿಗಳಾದ ಚಂದ್ರಚೂಡ್ ಮತ್ತು ಭಗವತಿ ಅವರು ಕೂಡ ನಂತರದಲ್ಲಿ ಸಿಜೆಐ ಆದರು. ಇದು ಪ್ರಜಾತಂತ್ರ ಹಾಗೂ ಸಾಂವಿಧಾನಿಕ ಮೌಲ್ಯಗಳಿಗಾಗಿ ನ್ಯಾಯಮೂರ್ತಿ ಖನ್ನಾ ಮಾಡಿದ ತ್ಯಾಗ ಎಂಥದ್ದು ಎಂಬುದನ್ನು ತೋರಿಸುತ್ತದೆ. ಆದರೆ ಹಲವು ವರ್ಷಗಳ ನಂತರದಲ್ಲಿ ಸುಪ್ರೀಂ ಕೋರ್ಟ್‌ನ ವಿಸ್ತೃತ ಪೀಠವೊಂದು, ಆ ಪ್ರಕರಣದಲ್ಲಿ ಬಹುಮತದ ತೀರ್ಪಿನಲ್ಲಿದ್ದ ಅಭಿಪ್ರಾಯ ದೋಷಪೂರಿತವಾಗಿತ್ತು ಹಾಗೂ ನ್ಯಾಯಮೂರ್ತಿ ಖನ್ನಾ ಅವರು ಪ್ರಜೆಗಳ ಹಕ್ಕುಗಳನ್ನು ರಕ್ಷಿಸುವ ವಿಚಾರವಾಗಿ ಸರಿಯಾದ ನಿಲುವು ತಳೆದಿದ್ದರು ಎಂದು ಹೇಳಿತು. ನ್ಯಾಯಮೂರ್ತಿ ಖನ್ನಾ ಅವರ ನೇರವಂತಿಕೆ, ತ್ಯಾಗದ ಕಥೆಯನ್ನು ನಾವು ಎಲ್ಲರಿಗೂ ತಿಳಿಸಬೇಕು. ಅವರ ಗುಣಗಳು ಪ್ರಜಾತಂತ್ರದ ರಕ್ಷಣೆಗೆ ಮುಂದಿನ ಪೀಳಿಗೆಯನ್ನು ಪ್ರೇರೇಪಿಸುತ್ತವೆ.

ಚುರುಮುರಿ

ನಿಂದಾಣಿಕೆ ದಗಾಯುದ್ಧ

● ಲಿಂಗರಾಜು ಡಿ.ಎಸ್.

ನಮ್ಮ ಮಾಜಿ ಶಾಸಕರಿಗೆ ಆರೋಗ್ಯ ಸರಿ ಇರಲಿಲ್ಲ. ತಿಂಗಳಿಂದಾ 'ಕಿತ್ತೋಗೀರಿ, ಪಟ್ಟು ಹಿಡೀರಿ, ಹೋರಾಟ ಮಾಡಬಕು, ಕಳಕೊಂಡಿದ್ದು ತಗೋಬೇಕು' ಅಂತ ಚಡಪಡಿಸ್ತಾ ಇದ್ದರು. ಇವರ ಸಂಕಟ ನೋಡನಾರದೇ ನಾನು, ತುರೇಮಣೆ ಡಾಕ್ಟರ್ ಹತ್ರ ಕರಕೋದೋ.

'ಡಾಕ್ರೇ ಎದೆನೋವು, ಹೊಟ್ಟೆಉರಿ, ಸಂಕಟ, ಕೈ ಕಡಿತವೆ, ಎಲ್ಲಾರಿಗೂ ಬೈಬೇಕು ಅನ್ನಿಸ್ತದೆ, ಗ್ಯಾಸ್ಟ್ರಿಕ್ ಜಾಸ್ತಿಯಾಗ್ಯದೆ. ಕಮಲದ ವಾಸನೆಗೆ ಅಲರ್ಜಿ ಆಯ್ತಾ ಅದೆ' ಅಂತ ವಿವರಿಸಿದರು.

'ಎಲ್ಲಾರೂ ನಿಮಗೆ ಅನ್ಯಾಯ ಮಾಡಿದರು, ಮುಗಿಸೋದಿಕ್ಕೆ ಸಂಚು ಮಾಡ್ತಾವ್ರೆ ಅನ್ನಿಸ್ತಿರ ಬೇಕು ಅಲ್ಲುವರಾ. ಇದುವರೆಗೂ ನೀವು ಅಧಿಕಾರ ನಡೆಸಿ ಈಗ ಸೋತು ಮನೇಲಿ ಕೂತಿದ್ದೀರಿ' ಅಂದ್ರು ಡಾಕ್ಟ್ರು.

'ಹೌದು ಸಾ! ಕರೆಕ್ಟಾಗೇಳಿದಿರಿ. ಕೆಲವರು ಹೊಂದಾಣಿಕೆ ಮಾಡಿಕ್ಯಂಡು ಪಕ್ಷಕ್ಕೆ ಚೂರಿ ಹಾಕಿದರು. ಹೋರಾಟ ಮಾಡಬಕು ಅಂತ ದೊಡ್ಡೋರೆಲ್ಲಾ ನಮ್ಮನ್ನ ಮುಂದಕ್ಕೆ ತಳ್ಳಿ ಹಿಂದುಕ್ಕೆ ಸರ್ಕತರೆ. ಈಗ ನಾನು ಏನು ಮಾಡನೆ?' ಮಾಜಿ ಶಾಸಕರು ಕೇಳಿದರು.

'ವಿರೋಧ ಪಕ್ಷದ ನಾಯಕನ್ನ ಆಯ್ಕೆ ಮಾಡಿಕ್ಯಳಕಾಗದೇ 'ನೀನು ಸರಿಲ್ಲ, ನೀನು ಸರಿಲ್ಲ' ಅಂತ ಪಕ್ಷದ ಬ್ಯಾಡ್ ಬಾಯ್‌ಗಳೆಲ್ಲಾ ನಿಂದಾಣಿಕೆ ದಗಾಯುದ್ಧ ಮಾಡಿಕ್ಯಂಡು ಕಾಲ ಕಳೀತಾವೆ. ಹಸ್ತದೋರೂ ದಗಾಯುದ್ಧಕ್ಕೆ ಫೇಮಸ್ಸು. ಈಗ ಅವರಿಗೆ ವಾಸಿಯಾಗ್ಯದೆ. ನೀವು ರೆಸ್ಟ್ ತಗಳಿ ಸರೋಯ್ತದೆ' ಡಾಕ್ಟ್ರು ಪರಿಹಾರ ಹೇಳಿ ಕಳಿಸಿಕೊಟ್ಟರು.

'ಅದ್ಯಾಕ್ಸಾ ಅವುನಿಗೇನು ತೊಂದರೆ?' ಯಂಟಪ್ಪಣ್ಣ ಕೇಳಿತು.

'ಅವರು ಹಿಂದೆ ಅಧಿಕಾರದೇಲಿದ್ದ ಪಕ್ಷದೇಲಿ ಶಾಸಕ ಆಗಿದ್ದರು. ಈಗ ಸೋತು ಮನೇಲಿ ಕೂತವ್ರೆ. ಅಧಿಕಾರ ಇಲ್ಲದ್ದುಕ್ಕೆ ಎದೆಉರಿ, ಚಡಪಡಿಕೆ, ಅಸಹನೆ, ಸಂಕಟ, ಶೋಕಾಚರಣೆ. ಇದು ಸೋತೋರಿಗೆ ಬರೋ ಪೊಲಿಟಿಕಲ್ ಅಬ್ಯೂಸಿಯಾ ಡಿಸ್‌ಪೆಪ್ಸಿಯಾ ಕಾಯಿಲೆ ಕನಣ್ಣ. ಈ ಕಾಯಿಲೆ ದಳದೋರಿಗೂ ಅಮರಿಕ್ಯಂಡದೆ. ಇದಕ್ಕೆ ಅಧಿಕಾರವೇ ಮದ್ದು!' ಅಂತ ತುರೇಮಣೆ ಟಾಂಗ್ ಕೊಟ್ಟರು.

ಸಂಗತ

ಬಾಲಸಾಕ್ಷ್ಯ ಮತ್ತು ಅನೈತಿಕ ಪೊಲೀಸ್‌ಗಿರಿ

ಬಾಲಸಾಕ್ಷ್ಯದ ಕುರಿತು ಜನಸಾಮಾನ್ಯರು ತಳೆದಿರುವ ಅಭಿಪ್ರಾಯ ಮತ್ತು ನ್ಯಾಯ ವಿತರಣಾ ವ್ಯವಸ್ಥೆಯು ಹೊಂದಿರುವ ನಿಲುವನ್ನು ಒರೆಗೆ ಹಚ್ಚಿ ನೋಡಬೇಕಾದ ಅನಿವಾರ್ಯ ಇದೆ

● ಕೆ.ಬಿ.ಕೆ.ಸ್ವಾಮಿ

ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಯಲ್ಲಿನ ಅಪಾರ್ಟ್‌ಮೆಂಟ್‌ವೊಂದರಲ್ಲಿ ಎಂಟು ವರ್ಷದ ಬಾಲಕಿಯೊಬ್ಬಳು ತನ್ನನ್ನು ಫುಡ್ ಡೆಲಿವರಿ ಬಾಯ್ ಅಪಹರಿಸಲು ಪ್ರಯತ್ನಿಸಿದನೆಂದು ಹೇಳಿದ್ದನ್ನು ನಿಜವೆಂದು ನಂಬಿದ ನಿವಾಸಿಗಳು, ಆ ಯುವಕನ ಮೇಲೆ ಹಲ್ಲೆ ನಡೆಸಿದ್ದು, ಉದ್ರಿಕ್ತ ಗುಂಪಿನ ನಡುವೆ ಸಿಕ್ಕಿಬಿದ್ದಿದ್ದ ಯುವಕನನ್ನು ಪೊಲೀಸರು ಕಾಪಾಡಿದ್ದು ವರದಿಯಾಯಿತು. ಕಟ್ಟಡದಲ್ಲಿನ ಸಿ.ಸಿ. ಟಿ.ವಿ. ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ, ಬಾಲಕಿಯ ಹೇಳಿಕೆ ಸಂಪೂರ್ಣವಾಗಿ ಸುಳ್ಳೆಂಬ ವಿಚಾರ ಹೊರಬಿತ್ತು.

ಬಹುತೇಕರು ಇದನ್ನು ಸಾಮಾನ್ಯ ವಿಚಾರ ಎಂದು ಭಾವಿಸಿ ಅಲಕ್ಷಿಸಿರಬಹುದು. ವಾಸ್ತವದಲ್ಲಿ ಇದು ಅತ್ಯಂತ ಗಂಭೀರವಾದ ಸಂಗತಿಯಾಗಿದೆ. ಹಲವಾರು ಸೂಕ್ಷ್ಮ ವಿಚಾರಗಳ ಕುರಿತು ನಮ್ಮ ವ್ಯವಸ್ಥೆ ಹೊಂದಿರುವ ನಿಲುವನ್ನು ಪ್ರಶ್ನಿಸುವಂತಿದೆ. ಮಕ್ಕಳು ದೈವ ಸಮಾನ, ಅವರು ಹುಸಿಯಾಡುವುದಿಲ್ಲ ಎಂಬ ಭಾವನೆಯ ಬಗ್ಗೆ ನಾವೆಷ್ಟು ಪೂರ್ವಗ್ರಹಪೀಡಿತರಾಗಿದ್ದೇವೆ ಎಂಬುದನ್ನು ಸಹ ಇದು ಸಾಬೀತು ಮಾಡಿದೆ.

ಸಾಮಾನ್ಯವಾಗಿ ಮಕ್ಕಳು ತಮಗೆ ಬಂದೊದಗಿದ ತುರ್ತು ಸಮಸ್ಯೆಯಿಂದ ಹೊರಬರಲು ಪರ್ಯಾಯ ಮಾರ್ಗ ಕಂಡುಕೊಳ್ಳುವ ತರಾತುರಿಯಲ್ಲಿ ಸುಳ್ಳಾಡುತ್ತಾರೆ. ಹಾಗೆಯೇ ಹೊಸತನದ ಹುಡುಕಾಟದಲ್ಲಿರುವ ಮಕ್ಕಳು, ದಿಢೀರನೆ ಎದುರಾಗುವ ಸವಾಲುಗಳನ್ನು ತೊಡೆದುಹಾಕಲು ಸುಳ್ಳಿನ ಮೊರೆ ಹೋಗುತ್ತಾರೆ ಎಂಬ ಅಂಶವನ್ನು ಮನಃಶಾಸ್ತ್ರಜ್ಞರು ಅಧ್ಯಯನದಿಂದ ಕಂಡುಕೊಂಡಿದ್ದಾರೆ. ಹೀಗಾಗಿ, ಬಾಲಸಾಕ್ಷ್ಯದ ಕುರಿತಾಗಿ ಜನಸಾಮಾನ್ಯರು ತಳೆದಿರುವ ಅಭಿಪ್ರಾಯ ಮತ್ತು ನ್ಯಾಯ ವಿತರಣಾ ವ್ಯವಸ್ಥೆಯು ಹೊಂದಿರುವ ನಿಲುವನ್ನು ಒರೆಗೆ ಹಚ್ಚಿ ನೋಡಬೇಕಾದ ಅನಿವಾರ್ಯ ಇರುವುದನ್ನು ಸಹ ಈ ಅಧ್ಯಯನಗಳು ರುಜುವಾತುಪಡಿಸಿವೆ.

ಕ್ರಿಮಿನಲ್ ಪ್ರಕರಣಗಳಲ್ಲಿ ತನಿಖಾ ಸಂಸ್ಥೆಗಳು ಜನಾಭಿಪ್ರಾಯಕ್ಕೆ ಹಾಗೂ ಮಾಧ್ಯಮಗಳು ತಳೆಯುವ ನಿಲುವಿಗೆ ಮನ್ನಣೆ ನೀಡುವ ಪರಿಪಾಟವಿದೆ. ಸಾಮಾನ್ಯವಾಗಿ ಮಕ್ಕಳು ಅಥವಾ ಯುವತಿಯರ ಅಪಹರಣ, ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಎಷ್ಟೋ ಬಾರಿ ಆರೋಪಿಯ ಪಾತ್ರ ಮೇಲ್ನೋಟಕ್ಕೆ ಕಾಣದೇ ಹೋದರೂ ಬರೀ ಮೌಖಿಕ ಹೇಳಿಕೆಯನ್ನು ಆಧರಿಸಿ ಆತನನ್ನು ಬಂಧಿಸಿ, ಸಾರ್ವಜನಿಕವಾಗಿ ಅವಮಾನಿಸುವುದು ಖಂಡನಾರ್ಹ ಸಂಗತಿ.

ಅಂತರ್ಜಾತಿ ಮದುವೆ, ಒಂಟಿ ಮಹಿಳೆ, ವಿಧವೆ, ವಿಚ್ಛೇದಿತ ಅಥವಾ ವಿವಾಹೇತರ ಒಪ್ಪಿತ ಲೈಂಗಿಕ ಸಂಪರ್ಕದ ವಿಚಾರಗಳಲ್ಲೂ ಅನೈತಿಕ ಪೊಲೀಸ್‌ಗಿರಿ ನಡೆಸಿ, ಸಾರ್ವಜನಿಕವಾಗಿ ಅವಮಾನಿಸುವ ಹತ್ತಾರು ನಿದರ್ಶನಗಳಿವೆ. ಮಗುವಿನ ಹೇಳಿಕೆಯನ್ನಷ್ಟೇ ನಂಬಿ, ಅಮಾಯಕನ ಮೇಲೆ ಹಲ್ಲೆ ನಡೆಸಿದ ಮೇಲಿನ ಪ್ರಕರಣದಲ್ಲಿ, ಅನೈತಿಕ ಪೊಲೀಸ್‌ಗಿರಿ ನಡೆಸಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳದೇ ಬಿಟ್ಟಿರುವ ಪೊಲೀಸರ ನಡೆಯು ಒದೆ ತಿಂದ ಅಮಾಯಕನಿಗೆ ಗಾಯದ ಮೇಲೆ ಉಪ್ಪು ಸವರಿದಂತಿದೆ. ಗುಂಪು ಹಲ್ಲೆ, ಅನೈತಿಕ ಪೊಲೀಸ್‌ಗಿರಿ, ದೊಂಬಿಯಂತಹ ಪ್ರಕರಣಗಳಲ್ಲಿ ಪೊಲೀಸ್ ವ್ಯವಸ್ಥೆಯು ನಿರ್ದಾಕ್ಷಿಣ್ಯವಾಗಿ ಹಲ್ಲೆಕೋರರನ್ನು ಕಾನೂನಿನ ಅಡಿಯಲ್ಲಿ ಶಿಕ್ಷಿಸಬೇಕೆಂದು ತೆಹಸಿನ್ ಪೂನಾವಾಲಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತಾಕೀತು ಮಾಡಿದೆ.

ಬಹುಶಃ ನಮ್ಮನ್ನು ಕಾಪಾಡಲು ಮೇಲೊಬ್ಬ ಇದ್ದಾನೆ ಎಂಬ ನಂಬಿಕೆಯನ್ನು ಜೀವಂತವಾಗಿ ಇರಿಸಿದ್ದು, ಎತ್ತರದಲ್ಲಿನ ಸಿ.ಸಿ. ಟಿ.ವಿ. ಕ್ಯಾಮೆರಾ ಮತ್ತು ಅದರಲ್ಲಿನ ದೃಶ್ಯಾವಳಿಗಳನ್ನು ಶೀಘ್ರವಾಗಿ ಪರಿಶೀಲಿಸಿದ ಪೊಲೀಸ್ ಸಿಬ್ಬಂದಿಯ ಸಮಯಪ್ರಜ್ಞೆ! ಹಲ್ಲೆಕೋರರಿಂದ ಬದುಕುಳಿದು, ಪೊಲೀಸರು, ಕೋರ್ಟ್ ಕೇಸ್‌ನಿಂದ ಪಾರಾದೆನೆಂದು ನಿಟ್ಟುಸಿರು ಬಿಟ್ಟದ್ದಷ್ಟೇ ಫುಡ್ ಡೆಲಿವರಿ ಬಾಯ್ ಪಾಲಿಗೆ ಸಿಕ್ಕ ನ್ಯಾಯ! ಉಳಿದಂತೆ ಸಂವಿಧಾನದ ವಿಧಿ 21ರಲ್ಲಿ ಹೇಳಲಾದ 'ರೈಟ್ ಟು ಲಿವ್ ವಿತ್ ಹ್ಯೂಮನ್ ಡಿಗ್ನಿಟಿ' ಎಂಬುದು ಈ ಪ್ರಕರಣದಲ್ಲಿ ಬರೀ ಉಪನ್ಯಾಸದ ಸರಕೆನಿಸಿದೆ. ಆದರೆ ಅಮಾಯಕನೊಬ್ಬನಿಗೆ ಒದಗಬಹುದಾಗಿದ್ದ ದೀರ್ಘಕಾಲದ ಕಾನೂನು ಪ್ರಕ್ರಿಯೆಯ ಸಂಕೋಲೆಯನ್ನು ವಸ್ತುನಿಷ್ಠ ಪ್ರಾಥಮಿಕ ತನಿಖೆಯಿಂದ ಹಠಾತ್ತನೆ ತೊಡೆದುಹಾಕಿ, ಆತನ ಸ್ವಾತಂತ್ರ್ಯವನ್ನು ಕಾಪಾಡಿದ್ದು ದೊಡ್ಡ ಸಮಾಧಾನದ ಸಂಗತಿ.

ಆಧುನಿಕ ತಂತ್ರಜ್ಞಾನವು ನ್ಯಾಯ ವಿತರಣಾ ವ್ಯವಸ್ಥೆಯ ರೂಢಿಗತ ಪರಿಪಾಟಗಳನ್ನು ಬದಲಾಯಿಸಿದೆ. ಶಂಕಿತರು, ಬಾಧಿತರು ಮತ್ತು ಅವರ ಸಹವರ್ತಿಗಳ ಮೊಬೈಲ್ ಫೋನ್ ಕರೆಗಳು, ಸಿ.ಸಿ. ಟಿ.ವಿ. ಕ್ಯಾಮೆರಾ ದೃಶ್ಯಾವಳಿ, ಗೂಗಲ್ ಲೊಕೇಷನ್ ವಿವರಗಳ ಶೀಘ್ರ ಪರಿಶೀಲನೆಯು ಅಮಾಯಕರ ನೆರವಿಗೆ ಬಂದು, ಕೋರ್ಟ್ ಕಲಾಪಗಳ ಹೊರೆಯನ್ನು ಕೊಂಚ ಮಟ್ಟಿಗಾದರೂ ತಗ್ಗಿಸಿವೆ.

ನಾಗರಿಕರು ಕಾನೂನನ್ನು ಉಲ್ಲಂಘಿಸಿ ಶಂಕಿತರನ್ನು ಸಾರ್ವಜನಿಕವಾಗಿ ಅವಮಾನಿಸಿ, ಹಲ್ಲೆ ನಡೆಸುವ ಪ್ರಕರಣಗಳು ಅನಾಗರಿಕ ಸಮಾಜದ ಲಕ್ಷಣ. ಇದು ವಾಸ್ತವವಾಗಿ ಕಾನೂನು ಮತ್ತು ಸುವ್ಯವಸ್ಥೆಯ ಮೇಲೆ ನಿಗಾ ಇಡುವ ಸರ್ಕಾರದ ಅಸ್ತಿತ್ವವನ್ನೇ ಪ್ರಶ್ನಿಸುವಂತಿದೆ.

ಕ್ರಿಮಿನಲ್ ಪ್ರಕರಣಗಳಲ್ಲಿ ಆತುರಾತುರವಾಗಿ ಆರೋಪಿಯ ಅಥವಾ ಬಾಧಿತರ ಪರವಾಗಿ ತೀಕ್ಷ್ಣ ಪ್ರತಿಕ್ರಿಯೆಗಳನ್ನು ನೀಡುವುದು, ಈ ಮೂಲಕ ಸಾರ್ವಜನಿಕ ಅಭಿಪ್ರಾಯ ರೂಪಿಸಿ ನ್ಯಾಯಾಲಯ ಮತ್ತು ತನಿಖಾ ಸಂಸ್ಥೆಗಳ ಮೇಲೆ ಒತ್ತಡ ಉಂಟುಮಾಡುವುದು ನಿಜಕ್ಕೂ ಆತಂಕಪಡುವ ವಿಚಾರ. ವಸ್ತುನಿಷ್ಠತೆ, ತಾರ್ಕಿಕ ಮನೋಭಾವ ಮತ್ತು ಪೂರ್ವ ನಿದರ್ಶನಗಳನ್ನು ಅಧ್ಯಯನ ಮಾಡಿ, ಸೂಕ್ತ ವಿಚಾರಣೆಯ ನಂತರ ನ್ಯಾಯಾಲಯ ನೀಡುವ ತೀರ್ಪಿಗಾಗಿ ಕಾಯದೇ ಹತಾಶೆಯಲ್ಲಿ, ಆತುರದಲ್ಲಿ ಕಾನೂನನ್ನು ಕೈಗೆತ್ತಿಕೊಳ್ಳುವುದು ದೊಡ್ಡ ಅಪರಾಧ.

ವಾಚಕರ ವಾಣಿ

ವಂದೇ ಭಾರತ್: ಕಲಬುರಗಿಗೂ ವಿಸ್ತರಿಸಲಿ

ಬೆಂಗಳೂರು- ಧಾರವಾಡದ ನಡುವೆ ವಂದೇ ಭಾರತ್ ರೈಲು ಸಂಚಾರಕ್ಕೆ ಆಸ್ಪದ ಆಗಿರುವುದೇನೋ ಸರಿ. ಆದರೆ ಕೇಂದ್ರದ ಎಲ್ಲಾ ಯೋಜನೆಗಳು ಮೊದಲಿಗೆ ಬೆಂಗಳೂರು, ಮೈಸೂರು, ಹುಬ್ಬಳ್ಳಿ- ಧಾರವಾಡದ ನಂತರ ಅವಕಾಶ ಇದ್ದರೆ ಮಾತ್ರ ಕಲ್ಯಾಣ ಕರ್ನಾಟಕಕ್ಕೆ ಅದೂ ಹೋರಾಟದ ಬಳಿಕ ಲಭಿಸುತ್ತವೆ. ಇದು ಹೊಸದೇನಲ್ಲ. ಇಲ್ಲಿನ ರಾಜಕಾರಣದಲ್ಲಿ ಜಿಗುಟು ಕಮ್ಮಿ. ನಮ್ಮ ಸಂಕಟ ಏನೆಂದರೆ, ಮುಂಬೈ- ಸೋಲಾಪುರ ವಂದೇ ಭಾರತ್ ರೈಲಿನಲ್ಲಿ ಶೇ 50ರಷ್ಟು ಸೀಟುಗಳು ಖಾಲಿ ಇರುತ್ತವೆ. ಇದನ್ನು ಕಲಬುರಗಿಯವರೆಗೆ ವಿಸ್ತರಣೆ ಮಾಡಿದರೆ ಶೇ 100ರಷ್ಟು ಸೀಟುಗಳು ಭರ್ತಿಯಾಗುತ್ತವೆ. ಕೇಂದ್ರ ರೈಲ್ವೆ ಸಚಿವರು ಈ ಬಗ್ಗೆ ಗಮನಹರಿಸಬೇಕು.

ವೆಂಕಟೇಶ ಮುದಗಲ್, ಕಲಬುರಗಿ

ಅದಲುಬದಲಾಗಿದ್ದರೆ...

ಕೇಂದ್ರಕ್ಕೆ ಕರ್ನಾಟಕ ಅಷ್ಟೇ ಮುಖ್ಯವಲ್ಲ
ಎಂದಿದ್ದಾರೆ ನಳಿನ್ ಕುಮಾರ್ ಕಟೀಲ್,
ಅವರ ಈ ಹೇಳಿಕೆಯಲ್ಲಿ ಏನೂ ತಪ್ಪಿಲ್ಲ
ಆದರೆ, ಸರ್ಕಾರಗಳಲ್ಲಿ ಪಕ್ಷಗಳು
ಅದಲುಬದಲಾಗಿದ್ದರೆ
ಹೀಗವರು ಅನ್ನುತ್ತಿರಲಿಲ್ಲ!

ಆನಂದ ರಾಮತೀರ್ಥ, ಜಮಖಂಡಿ

ಬಸ್ಸನ್ನು ಕಸದ ತೊಟ್ಟಿ ಮಾಡಬೇಡಿ

ಮಡಿಕೇರಿಯಿಂದ ಮೈಸೂರಿಗೆ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದೆ. ಕುಶಾಲನಗರ ಬಸ್‌ಸ್ಟ್ಯಾಂಡಿನಲ್ಲಿ ಜನರನ್ನು ಇಳಿಸಲು, ಹತ್ತಿಸಲು ಬಸ್ಸು ನಿಂತಿತು. ನೆಲಗಡಲೆ ಮಾರುವವರು 'ಗರಂ, ಗರಂ ಕಡ್ಲೇಕಾಯಿ' ಎನ್ನುತ್ತಾ ಬಸ್ಸಿಗೆ ಮುತ್ತಿಗೆ ಹಾಕಿದರು. ಹಲವರು ಕಡಲೆಕಾಯಿ ಕೊಂಡರು. ಮೈಸೂರು ತಲುಪುವಾಗ ಎಲ್ಲಾ ಸೀಟಿನಡಿಯಲ್ಲೂ ಕಡಲೆ ಸಿಪ್ಪೆ. ನಾನು ಗಮನಿಸಿದ ಹಾಗೆ ಇದರಲ್ಲಿ ಬಹುಪಾಲು ಕಾಣಿಕೆ ಹೆಂಗಸರದೇ.

ಮಹಿಳೆಯರು, ಪುರುಷರು ಯಾರೇ ಇರಲಿ, ದಯವಿಟ್ಟು ಬಸ್ಸಿನಲ್ಲಿ ಕಸ ಚೆಲ್ಲಬೇಡಿ. ನೀವು ಬಸ್ಸಲ್ಲಿ ಕುಳಿತು ಏನು ಬೇಕಾದರೂ ತಿನ್ನಿ. ತಿಂದ ತ್ಯಾಜ್ಯವನ್ನು ನಿಮ್ಮ ಬ್ಯಾಗಿನಲ್ಲಿ ಇಟ್ಟುಕೊಳ್ಳಿ. ದಾರಿಯಲ್ಲಿ ಕಸದ ಡಬ್ಬಿ ಸಿಕ್ಕಿದರೆ ಅಲ್ಲಿ ಚೆಲ್ಲಿ ಅಥವಾ ಮನೆಗೆ ತೆಗೆದುಕೊಂಡು ಹೋಗಿ ವಿಲೇವಾರಿ ಮಾಡಿ. ಬಸ್ಸನ್ನು ಕಸದ ತೊಟ್ಟಿಯನ್ನಾಗಿ ಮಾಡಬೇಡಿ.

ಸಹನಾ ಕಾಂತಬೈಲು, ಮಡಿಕೇರಿ

ಗೊಡ್ಡು ಸಂಪ್ರದಾಯಕ್ಕೆ ಸಡ್ಡು: ಅನುಕರಣೀಯ ನಡೆ

'ವಾಸ್ತು ಸರಿಯಿಲ್ಲ' ಎಂಬ ಕಾರಣಕ್ಕಾಗಿ ಐದು ವರ್ಷಗಳಿಂದ ಬಂದ್ ಮಾಡಲಾಗಿದ್ದ ವಿಧಾನಸೌಧದ ಮುಖ್ಯಮಂತ್ರಿ ಕಚೇರಿಯ ದಕ್ಷಿಣ ದ್ವಾರವನ್ನು ಶನಿವಾರ ತೆರೆಸಿ ಅದರ ಮೂಲಕವೇ ಕಚೇರಿಯನ್ನು ಪ್ರವೇಶಿಸುವ ಮೂಲಕ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೌಢ್ಯಕ್ಕೆ ತೆರೆ ಎಳೆಯಲು ಮುಂದಾಗಿರುವುದು ಅಭಿನಂದನಾರ್ಹ. ಸ್ವಚ್ಛ ಮನಸ್ಸು, ಜನಪರ ಕಾಳಜಿ, ಉತ್ತಮ ಗಾಳಿ, ಬೆಳಕು ಇದ್ದರೆ ಕೆಲಸ ಮಾಡಲು ಅದೇ ಒಳ್ಳೆಯ ಜಾಗ ಎಂದು ಹೇಳಿರುವ ಮುಖ್ಯಮಂತ್ರಿ, ಈ ಮೂಲಕ ವೈಚಾರಿಕ ನಡೆ- ನುಡಿಯನ್ನು ಅನುಸರಣೆ ಮಾಡಿ ನಾಡಿನ ಜನತೆಗೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ.

ಈಗಿನ ರಾಜಕಾರಣಿಗಳು ದಿನಬೆಳಗಾದರೆ ವಾಸ್ತು, ಕಾಲ, ಗಳಿಗೆ, ನಕ್ಷತ್ರ, ಸಂಪ್ರದಾಯವೆಂದು ಜ್ಯೋತಿಷಿಗಳನ್ನು ಎಡತಾಕುತ್ತಿದ್ದಾರೆ. ವಿಧಾನಸೌಧದ ನಿರ್ಮಾತೃ ಕೆಂಗಲ್ ಹನುಮಂತಯ್ಯ ಅವರು 'ಸರ್ಕಾರದ ಕೆಲಸ ದೇವರ ಕೆಲಸ' ಎಂದು ವಿಧಾನಸೌಧದ ಪ್ರವೇಶ ದ್ವಾರದಲ್ಲಿ ಕೆತ್ತಿಸುವ ಮುಖೇನ ಜನಪರ ಕಾಳಜಿ, ಕಳಕಳಿ, ದೂರದೃಷ್ಟಿಯ ನಡೆಯನ್ನು ಪ್ರತಿಪಾದಿಸಿದ್ದರು.

ಈ ಆಧುನಿಕ ಕಾಲಘಟ್ಟದಲ್ಲಿ ಮೌಢ್ಯ, ಗೊಡ್ಡು ಸಂಪ್ರದಾಯ ಕೂಡ ಅಷ್ಟೇ ವ್ಯಾಪಕವಾಗಿವೆ. ಇಂತಹ ಸನ್ನಿವೇಶದಲ್ಲಿ, ಇತರರು ಅನುಕರಣೆ ಮಾಡುವಂತಹ ಕೆಲಸವನ್ನು ಮುಖ್ಯಮಂತ್ರಿ ಮಾಡಿರುವುದು ಪ್ರಶಂಸನೀಯ.

ಶ್ರೀಧರ್ ಡಿ. ರಾಮಚಂದ್ರಪ್ಪ, ತುರುವನೂರು, ಚಿತ್ರದುರ್ಗ

ಪತನದ ಜಪ ಮಾಡುವುದೇಕೆ?

ರಾಜ್ಯ ಸರ್ಕಾರ ಪತನವಾಗಲಿದೆ ಎಂದು ವಿರೋಧ ಪಕ್ಷಗಳ ಕೆಲವು ಮುಖಂಡರು ಪದೇ ಪದೇ ನೀಡುತ್ತಿರುವ ಹೇಳಿಕೆಗಳು ಅವರ ಅಸಹನೆ ಮತ್ತು ಅಧಿಕಾರದಾಹವನ್ನು ಎತ್ತಿ ತೋರಿಸುವಂತಿವೆ. ರಾಜ್ಯದ ಮತದಾರರು ಒಂದು ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡಿದ್ದಾರೆ. ಅವರಿಗೆ ಆಡಳಿತ ನಡೆಸಲು ಬಿಡಿ. ಸರ್ಕಾರ ಒಂದೊಮ್ಮೆ ಜನವಿರೋಧಿ ನಿಲುವು ತಳೆದರೆ, ಅದನ್ನು ವಿರೋಧಿಸಲು ಬೇರೆ ಬೇರೆ ಮಾರ್ಗಗಳಿವೆ, ವ್ಯವಸ್ಥೆಗಳಿವೆ. ಅದನ್ನು ಬಿಟ್ಟು, ಸೂಕ್ತ ಕಾರಣಗಳೇ ಇಲ್ಲದೆ ಸರ್ಕಾರವು ಪತನಗೊಳ್ಳಲಿದೆ ಎಂದು ಹೇಳಿಕೆಗಳನ್ನು ನೀಡುತ್ತಿರುವುದು ಬಾಲಿಶತನದ ದ್ಯೋತಕ.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವುದೇ ಪಕ್ಷದ ನೇತೃತ್ವದ ಸರ್ಕಾರವನ್ನು ಅಧಿಕಾರದಿಂದ ಕೆಳಗೆ ಇಳಿಸುವ ಅಧಿಕಾರ ಇರುವುದು ಜನರಿಗೆ ಮಾತ್ರ. ಅದು ಚುನಾವಣೆಯ ಮೂಲಕ ಆಗುವಂತಹುದು. ವಿರೋಧ ಪಕ್ಷಗಳು ಅಲ್ಲಿಯವರೆಗೂ ಕಾಯುವಂತಹ ಸಂಯಮ ರೂಢಿಸಿಕೊಳ್ಳಬೇಕು ಮತ್ತು ವಿರೋಧ ಪಕ್ಷವಾಗಿ ತಮ್ಮ ಜವಾಬ್ದಾರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕು.

ಪ್ರಸಾದ್ ಜಿ.ಎಂ., ಮೈಸೂರು

ಬಿತ್ತನೆಬೀಜ, ಗೊಬ್ಬರ ಪೂರೈಕೆಯಲ್ಲಿ ವ್ಯತ್ಯಯ ಆಗದಿರಲಿ

ರಾಜ್ಯದಲ್ಲಿ ಈ ಮುಂಗಾರು ಹಂಗಾಮಿನಲ್ಲಿ ರೈತರಿಗೆ ಬೇಕಾಗುವ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕ ಕೊರತೆಯಾಗದಂತೆ ಕೃಷಿ ಇಲಾಖೆಯು ನೋಡಿಕೊಳ್ಳಬೇಕು. ಬೀಜ ಮತ್ತು ರಸಗೊಬ್ಬರ ಮಾರಾಟಗಾರರು ಅಂಗಡಿಯ ಮುಂದೆ ರೈತರಿಗೆ ಕಾಣುವಂತೆ ದರಪಟ್ಟಿ ಮತ್ತು ದಾಸ್ತಾನಿನ ಬಗ್ಗೆ ಮಾಹಿತಿ ಫಲಕ ಕಡ್ಡಾಯವಾಗಿ ಹಾಕುವಂತೆ ತಾಕೀತು ಮಾಡಬೇಕು. ಇದರೊಂದಿಗೆ ಸೂಕ್ತ ಪರಿಶೀಲನಾ ವ್ಯವಸ್ಥೆಯೂ ಇರಬೇಕು. ಬೀಜ, ಗೊಬ್ಬರ ಖರೀದಿಸಿದವರಿಗೆ ನಿಗದಿತ ನಮೂನೆಯಲ್ಲಿ ರಸೀದಿ ನೀಡುವುದನ್ನು ಕಡ್ಡಾಯಗೊಳಿಸಬೇಕು.

ಆರ್.ಬಿ.ಜಿ.ಘಂಟಿ, ಅಮೀನಗಡ, ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಆನ್‌ಲೈನ್ ಗೇಮ್ ಅನುಮತಿ, ನಿರ್ಬಂಧದ ಸುತ್ತ

ಪ್ರಜಾವಾಣಿ ವಾರ್ತೆ



ಜನರು ಆನ್‌ಲೈನ್ ಗೇಮಿಂಗ್‌ಗಳತ್ತ ಹೆಚ್ಚು ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಈ ಕುರಿತು ಪರ ವಿರೋಧ ಚರ್ಚೆಗಳು ಇವೆ. ಆನ್‌ಲೈನ್ ಗೇಮಿಂಗ್ ಎಂಬುದು ಜೂಜಾಟ ಎಂಬುದು ಒಂದು ವಾದ. ಇದರಿಂದಾಗಿ ಜನರು ಹಲವು ಸಂಕಷ್ಟಗಳಿಗೆ ಒಳಗಾಗಿದ್ದಾರೆ, ಹಾಗಾಗಿ ಇಂತಹ ಆಟಗಳಿಗೆ ನಿಯಂತ್ರಣ ಇರಬೇಕು ಎಂದು ಹಲವರು ಪ್ರತಿಪಾದಿಸುತ್ತಿದ್ದಾರೆ. ಇದು ಬುದ್ಧಿಶಕ್ತಿ ಉಪಯೋಗಿಸಿ ಆಡುವ ಆಟವಾದ್ದರಿಂದ ಜೂಜಾಟ ಅಲ್ಲ ಎನ್ನುವವರೂ ಇದ್ದಾರೆ. ಆನ್‌ಲೈನ್ ಗೇಮಿಂಗ್‌ಗೆ ಇತ್ತೀಚಿನವರೆಗೆ ಸರ್ಕಾರದ ನಿಯಂತ್ರಣ ಇರಲಿಲ್ಲ. ಆದರೆ, ಕೇಂದ್ರ ವಿದ್ಯುನ್ಮಾನ ಹಾಗೂ ಮಾಹಿತಿ ಸಚಿವಾಲಯವು ಇಂತಹ ಗೇಮ್‌ಗಳಿಗೆ ಈಗ ಮೂಗುದಾರ ಹಾಕಿದೆ. ಆನ್‌ಲೈನ್ ಗೇಮ್‌ಗಳನ್ನು ನಿಯಂತ್ರಿಸಲು ನಿಯಮಗಳನ್ನು ಪ್ರಕಟಿಸಿದೆ.

ಹಣವನ್ನು ಪಣಕ್ಕಿಟ್ಟು ಆಡುವ ಆನ್‌ಲೈನ್ ಗೇಮ್‌ಗಳಿಗೆ ಅವಕಾಶವಿಲ್ಲ ಎಂದು ಹೊಸ ನಿಯಮಗಳು ಹೇಳುತ್ತವೆ. ಜೂಜಾಟ ಉದ್ದೇಶದಿಂದ ನಡೆಯುತ್ತಿರುವ ರಿಯಲ್ ಮನಿ ಗೇಮ್‌ಗಳಿಗೆ (ಆರ್‌ಎಂಜಿ) ದೇಶದಲ್ಲಿ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಆದರೆ, ಯಾವ ಯಾವ ಗೇಮ್‌ಗಳು ನಿಷೇಧಿತ ಗೇಮ್‌ಗಳ ವ್ಯಾಪ್ತಿಯಲ್ಲಿ ಬರುತ್ತವೆ ಎಂದು ಸಚಿವಾಲಯ ಪ್ರಕಟಿಸಿಲ್ಲ. ಬದಲಾಗಿ, ಯಾವ ಸ್ವರೂಪದ ಆನ್‌ಲೈನ್ ಗೇಮ್‌ಗಳಿಗೆ ಭಾರತದಲ್ಲಿ ಅವಕಾಶವಿದೆ ಹಾಗೂ ಯಾವ ಸ್ವರೂಪದ ಆನ್‌ಲೈನ್ ಗೇಮ್‌ಗಳಿಗೆ ನಿಷೇಧವಿದೆ ಎಂಬುದನ್ನು ನಿರ್ಧರಿಸಲು ಒಂದು ಪ್ರತ್ಯೇಕ ಘಟಕವನ್ನು ರಚಿಸಲಾಗುತ್ತದೆ. ಈ ಹೊಸ ವ್ಯವಸ್ಥೆಯ ರೂಪುರೇಷೆಗಳನ್ನು ಹೊಸ ನಿಯಮಗಳಲ್ಲಿ ಪ್ರಸ್ತಾಪಿಸಲಾಗಿದೆ.

ಸ್ವಯಂ ನಿಯಂತ್ರಣ ಸಂಸ್ಥೆ (ಎಸ್‌ಆರ್‌ಒ) ಎಂದು ಕರೆಯಲಾಗುವ ಮೂರು ಘಟಕಗಳನ್ನು ರಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಯಾವ ಸ್ವರೂಪದ ಆನ್‌ಲೈನ್ ಗೇಮ್ ನಿಷೇಧಿಸಬೇಕು ಹಾಗೂ ಯಾವ ಸ್ವರೂಪದ ಆನ್‌ಲೈನ್ ಗೇಮ್ ಬಳಕೆಗೆ ಅಡ್ಡಿಯಿಲ್ಲ ಎಂಬುದನ್ನು ಎಸ್‌ಆರ್‌ಒ ತಜ್ಞರು ನಿರ್ಣಯಿಸುತ್ತಾರೆ.

ಆಟಗಳನ್ನು ಕೌಶಲ ಆಧಾರಿತ ಆಟ (ಸ್ಕಿಲ್ ಬೇಸ್ಡ್) ಮತ್ತು ಅದೃಷ್ಟ ಆಧಾರಿತ ಆಟ (ಚಾನ್ಸ್ ಬೇಸ್ಡ್) ಎಂಬುದಾಗಿ ಪ್ರತ್ಯೇಕಿಸುವ ಗೋಜಿಗೆ ಸರ್ಕಾರ ಹೋಗಿಲ್ಲ ಎಂಬುದು ಇಲ್ಲಿ ಗಮನಾರ್ಹ. ಸಾಮಾನ್ಯವಾಗಿ ಆನ್‌ಲೈನ್ ಗೇಮ್‌ಗಳನ್ನು ಕೌಶಲ ಆಧಾರಿತ ಹಾಗೂ ಅದೃಷ್ಟ ಆಧಾರಿತ ಎಂದು ವಿಭಾಗಿಸಲಾಗುತ್ತದೆ. ತಮ್ಮ ವ್ಯಾಪ್ತಿಯಲ್ಲಿ ಆನ್‌ಲೈನ್ ಗೇಮ್‌ಗಳನ್ನು ಈಗಾಗಲೇ ನಿಷೇಧ ಮಾಡಿರುವ ಕೆಲವು ರಾಜ್ಯ ಸರ್ಕಾರಗಳು ಇದೇ ಮಾನದಂಡ ಅನುಸರಿಸಿವೆ.

ಕೌಶಲ ಆಧಾರಿತ ಆಟಗಳಲ್ಲಿ, ಆಟಗಾರರಿಗೆ ಆಟದ ಬಗ್ಗೆ ಜ್ಞಾನ, ತರಬೇತಿ ಹಾಗೂ ಅನುಭವ ಇರಬೇಕಾಗುತ್ತದೆ. ಆದರೆ ಅದೃಷ್ಟ ಆಧಾರಿತ ಆಟಗಳಿಗೆ ಯಾವುದೇ ಕೌಶಲದ ಅಗತ್ಯವಿರುವುದಿಲ್ಲ. ಇವು ಬಹುತೇಕ ಜೂಜು ಎಂದೇ ಪರಿಗಣಿತವಾಗಿವೆ. ಇಂತಹ ಆಟಗಳಿಗೆ ಕೆಲವು ರಾಜ್ಯ ಸರ್ಕಾರಗಳು ನಿಷೇಧ ವಿಧಿಸಿವೆ. ಕೇಂದ್ರ ಸರ್ಕಾರವು ಇದೀಗ ಪ್ರಕಟಿಸಿರುವ ನಿಯಮಗಳಲ್ಲಿ ಕೌಶಲ ಆಧಾರಿತ ಅಥವಾ ಅದೃಷ್ಟ ಆಧಾರಿತ ಆನ್‌ಲೈನ್ ಆಟ ಯಾವುವು ಎಂಬುದಕ್ಕೆ ವ್ಯಾಖ್ಯಾನ ಇಲ್ಲ. ಈ ನಡೆಯು, ಜನರ ಜೀವಕ್ಕೆ ಅಪಾಯ ಉಂಟಾಗಬಹುದಾದ ಆನ್‌ಲೈನ್ ಗೇಮ್‌ಗಳನ್ನು ನಿಷೇಧಿಸುವ ಬೇಡಿಕೆಯನ್ನು ಎಷ್ಟರ ಮಟ್ಟಿಗೆ ಈಡೇರಿಸುತ್ತದೆ ಎಂಬುದು ಪ್ರಶ್ನೆಯಾಗಿದೆ.

ಭವಿಷ್ಯ ನಿರ್ಧರಿಸಲು ಎಸ್‌ಆರ್‌ಒ

ಆನ್‌ಲೈನ್ ಗೇಮ್‌ಗಳು ದೇಶದಲ್ಲಿ ಕಾರ್ಯಾಚರಣೆ ನಡೆಸಬೇಕಾದರೆ, ಎಸ್‌ಆರ್‌ಒಗಳ ಅನುಮತಿ ಕಡ್ಡಾಯ. ಅನುಮತಿ ಕೋರಿರುವ ಆನ್‌ಲೈನ್ ಗೇಮ್, ಸರ್ಕಾರ ನಿಗದಿಪಡಿಸಿರುವ ಮಾನದಂಡಗಳಿಗೆ ಪೂರಕವಾಗಿದೆಯೇ, ಇಲ್ಲವೇ ಎಂಬುದನ್ನು ಎಸ್‌ಆರ್‌ಒ ನಿರ್ಧರಿಸುತ್ತದೆ. ಯಾವ ಯಾವ ಗೇಮ್‌ಗೆ ಅನುಮತಿ ನೀಡಲಾಗಿದೆ ಎಂಬ ಪಟ್ಟಿಯನ್ನು ಎಸ್‌ಆರ್‌ಒಗಳು ತಮ್ಮ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಿವೆ. ನೀಡಲಾಗಿದ್ದ ಅನುಮತಿಯನ್ನು ಯಾವ ಕಾರಣಕ್ಕೆ ಹಿಂಪಡೆಯಲಾಗಿದೆ ಎಂಬ ಮಾಹಿತಿಯನ್ನೂ ಎಸ್‌ಆರ್‌ಒಗಳು ವೆಬ್‌ಸೈಟ್ ಅಥವಾ ಆ್ಯಪ್‌ನಲ್ಲಿ ಉಲ್ಲೇಖಿಸಬೇಕಿದೆ. ಅಗತ್ಯಬಿದ್ದರೆ, ಎಸ್‌ಆರ್‌ಒಗಳ ಸಂಖ್ಯೆಯನ್ನು ಕೇಂದ್ರ ಸರ್ಕಾರ ಕ್ರಮೇಣ ಹೆಚ್ಚಿಸಲಿದೆ.

ಇಂತಹ ಪ್ರತೀ ಎಸ್‌ಆರ್‌ಒಗಳಲ್ಲಿ ಗೇಮಿಂಗ್ ಉದ್ಯಮವೂ ಸೇರಿದಂತೆ ವಿವಿಧ ವಲಯಗಳ ತಜ್ಞರು ಇರಲಿದ್ದಾರೆ. ಗೇಮಿಂಗ್ ಉದ್ಯಮದವರು, ಶಿಕ್ಷಣ ತಜ್ಞರು, ಮನಃಶಾಸ್ತ್ರಜ್ಞರು, ಮಕ್ಕಳ ಹಕ್ಕುಗಳಿಗಾಗಿ ಕೆಲಸ ಮಾಡಿದವರು ಸೇರಿದಂತೆ ಸಮಾಜದ ವಿವಿಧ ವಲಯಗಳ ತಜ್ಞರನ್ನು ಎಸ್‌ಆರ್‌ಒ ಹೊಂದಿರುತ್ತದೆ. ಆನ್‌ಲೈನ್ ಆಟದಲ್ಲಿ ಫಲಿತಾಂಶದ ಮೇಲೆ ಬಾಜಿ ಕಟ್ಟುವುದಕ್ಕೆ ಸಂಬಂಧಿಸಿಲ್ಲ ಎಂಬುದು ಖಚಿತಪಟ್ಟರೆ ಮಾತ್ರ ತಜ್ಞರು ಅದರ ಬಳಕೆಯನ್ನು ಅನುಮೋದಿಸುತ್ತಾರೆ. ಬೆಟ್ಟಿಂಗ್ ಕಟ್ಟುವಂತೆ ಆಹ್ವಾನ ನೀಡುವ ಆಟಕ್ಕೆ ಅವಕಾಶವಿಲ್ಲ ಎಂದು ನಿಯಮಗಳು ಹೇಳುತ್ತವೆ.

ಸರ್ಕಾರ ಹೇಳುವುದೇನು?: ಬಾಜಿ ಉದ್ದೇಶ ಹೊಂದಿರುವ ರಿಯಲ್ ಮನಿ ಗೇಮ್‌ಗಳನ್ನು ನಿಯಂತ್ರಿಸುವುದಷ್ಟೇ ನಮ್ಮ ಉದ್ದೇಶ ಎಂದು ಕೇಂದ್ರ ಸಚಿವರು ಸ್ಪಷ್ಟಪಡಿಸಿದ್ದಾರೆ. ಆಟವೊಂದು ಅದರ ಫಲಿತಾಂಶದ ಆಧಾರದಲ್ಲಿ ಬಹುಮಾನದ ಹಣ ನೀಡುವಂತಿದ್ದರೆ ಅಂತಹ ಗೇಮ್‌ಗೆ ಅವಕಾಶವಿಲ್ಲ ಎಂದು ವಿದ್ಯುನ್ಮಾನ ಹಾಗೂ ಮಾಹಿತಿ ಇಲಾಖೆಯ ಸಚಿವ ರಾಜೀವ್ ಚಂದ್ರಶೇಖರ್ ಅವರು ಹೇಳಿದ್ದಾರೆ.

ಉದ್ಯಮದ ಪ್ರತಿಕ್ರಿಯೆ: ಕೇಂದ್ರ ಜಾರಿಗೊಳಿಸಿರುವ ನಿಯಮಗಳು ಮಹತ್ವದ ಮೈಲಿಗಲ್ಲು ಎಂದು ಭಾರತದ ಗೇಮಿಂಗ್ ಉದ್ಯಮ ಸ್ವಾಗತಿಸಿದೆ. ಜೂಜಾಟ ಹಾಗೂ ಆನ್‌ಲೈನ್ ಗೇಮಿಂಗ್ ಅನ್ನು ಪ್ರತ್ಯೇಕವಾಗಿ ಗುರುತಿಸಿದ್ದಕ್ಕಾಗಿ ಉದ್ಯಮ ಧನ್ಯವಾದ ಹೇಳಿದೆ. ಎಲ್ಲ ಆನ್‌ಲೈನ್ ಆಟಗಳನ್ನೂ ಜೂಜಾಟ ಎಂದು ಪರಿಗಣಿಸುವುದು ಇದರಿಂದ ತಪ್ಪಿದೆ. ದೇಶದಲ್ಲಿ ಗೇಮಿಂಗ್ ಉದ್ಯಮವು ದೊಡ್ಡ ಪ್ರಮಾಣದಲ್ಲಿ ಬೆಳೆಯಲು ಈ ನಿಯಮಗಳು ನೆರವಾಗಲಿವೆ ಎಂದು ಉದ್ಯಮ ವಲಯ ಪ್ರತಿಕ್ರಿಯಿಸಿದೆ.

ಕೆಲವು ರಾಜ್ಯಗಳಲ್ಲಿ ಆನ್‌ಲೈನ್ ಗೇಮ್ ಇಲ್ಲ

ಆನ್‌ಲೈನ್ ಗೇಮ್‌ಗಳನ್ನು ನಿಷೇಧಿಸುವುದು ಅಥವಾ ಅನುಮತಿ ನೀಡುವುದು ಆಯಾ ರಾಜ್ಯಗಳ ವ್ಯಾಪ್ತಿಗೆ ಒಳಪಟ್ಟಿದೆ. ಕರ್ನಾಟಕ, ತಮಿಳುನಾಡು, ತೆಲಂಗಾಣ, ಮಹಾರಾಷ್ಟ್ರ ರಾಜ್ಯಗಳು ಕೆಲವು ಸ್ವರೂಪದ ಆನ್‌ಲೈನ್ ಗೇಮ್‌ಗೆ ತಮ್ಮ ರಾಜ್ಯಗಳಲ್ಲಿ ನಿಷೇಧ ವಿಧಿಸಿವೆ. ಆಂಧ್ರ, ಅಸ್ಸಾಂ, ಒಡಿಶಾ ಮತ್ತು ತೆಲಂಗಾಣ ರಾಜ್ಯಗಳು ಕೌಶಲ ಆಧಾರಿತ ಮತ್ತು ಅದೃಷ್ಟ ಆಧಾರಿತ – ಹೀಗೆ ಎರಡೂ ಸ್ವರೂಪದ ಗೇಮ್‌ಗಳನ್ನು ನಿಷೇಧಿಸಿವೆ.

‘ಜೂಜು ಇರುವ ಆನ್‌ಲೈನ್ ಗೇಮ್‌ಗಳ ಹಾವಳಿಯಿಂದ ರಾಜ್ಯದಲ್ಲಿ ಹೆಚ್ಚಳವಾದ ಆತ್ಮಹತ್ಯೆ ಪ್ರಕರಣಗಳನ್ನು ನಿಯಂತ್ರಿಸುವ ಉದ್ದೇಶ’ದಿಂದ ತಮಿಳುನಾಡು ಸರ್ಕಾರವು ಮಸೂದೆಯನ್ನು ರಚಿಸಿತ್ತು. ಇದಕ್ಕೆ ಸಹಿ ಹಾಕಲು ರಾಜ್ಯಪಾಲರು ಆರಂಭದಲ್ಲಿ ವಿಳಂಬ ಧೋರಣೆ ಅನುಸರಿಸಿದ್ದರು ಎಂದು ಆಡಳಿತ ಪಕ್ಷ ಆರೋಪಿಸಿತ್ತು. ಕರ್ನಾಟಕದಲ್ಲಿ 2021ರಲ್ಲಿ ನಿಷೇಧ ಜಾರಿಯಾಯಿತು. ಆದರೆ ಅದಕ್ಕೆ ಹೈಕೋರ್ಟ್ ತಡೆ ನೀಡಿತ್ತು. ಹೈಕೋರ್ಟ್ ತಡೆ ಪ್ರಶ್ನಿಸಿ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು.

2017ರಲ್ಲಿ ತೆಲಂಗಾಣ ರಾಜ್ಯವು ದೇಶದಲ್ಲೇ ಮೊದಲ ಬಾರಿಗೆ ನಿಷೇಧ ಹೇರಿತ್ತು. 2020ರಲ್ಲಿ, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯ ಸರ್ಕಾರಗಳು ನಿಷೇಧ ವಿಧಿಸಿದವು. ಕೇಂದ್ರಾಡಳಿತ ಪ್ರದೇಶ ಪುದುಚೇರಿಯೂ ಇದೇ ಹಾದಿ ಅನುಸರಿಸಿತು. ಇತ್ತೀಚೆಗೆ ಛತ್ತೀಸಗಡ ಸರ್ಕಾರವು ಜೂಜು ತಡೆ ಕಾಯ್ದೆ–2023 ಜಾರಿಗೊಳಿಸಿದ್ದರೂ, ಕೌಶಲ ಆಧಾರಿತ ಆಟವನ್ನು ನಿಷೇಧದ ಪಟ್ಟಿಯಿಂದ ಹೊರಗಿಟ್ಟಿದೆ. ಗೋವಾ, ಸಿಕ್ಕಿಂ, ಮೇಘಾಲಯ, ನಾಗಾಲ್ಯಾಂಡ್ ರಾಜ್ಯಗಳು ಆನ್‌ಲೈನ್ ಗೇಮ್ ನಿಯಂತ್ರಿಸುವ ನಿಯಮಗಳನ್ನು ಸ್ಥಳೀಯವಾಗಿ ಜಾರಿಗೊಳಿಸಿವೆ. ನಿಷೇಧ ಅಥವಾ ಅನುಮತಿ ಗೊಂದಲದ ನಡುವೆ, ಆನ್‌ಲೈನ್ ಗೇಮ್, ಕುದುರೆ ರೇಸ್ ಹಾಗೂ ಕ್ಯಾಸಿನೊ ಆಟಗಳ ಮೇಲೆ ಶೇ 28ರವರೆಗೆ ಜಿಎಸ್‌ಟಿ ವಿಧಿಸುವ ಪ್ರಸ್ತಾಪವು ಕೇಂದ್ರ ಜಿಎಸ್‌ಟಿ ಮಂಡಳಿ ಮುಂದೆ ಇದೆ.

‘ಕಂಪ್ಯೂಟರ್ ಅಥವಾ ಮಧ್ಯವರ್ತಿಯ ಮೂಲಕ ಬಳಸಬಹುದಾದ ಇಂಟರ್‌ನೆಟ್ ಆಧಾರಿತ ಗೇಮ್ ಅನ್ನು ಆನ್‌ಲೈನ್ ಗೇಮ್’ ಎಂದು ವ್ಯಾಖ್ಯಾನಿಸಲಾಗಿದೆ

- ಯಾವ ಸ್ವರೂಪದ ಆನ್‌ಲೈನ್ ಗೇಮ್ ನಿಷಿದ್ಧ ಹಾಗೂ ಯಾವ ಸ್ವರೂಪದ ಗೇಮ್ ಬಳಕೆಗೆ ಸೂಕ್ತ ಎಂಬುದನ್ನು ನಿರ್ಣಯಿಸಲು ಎಸ್‌ಆರ್‌ಒ ಪದ್ಧತಿ ಜಾರಿಗೆ ನಿರ್ಧಾರ
- ಎಸ್‌ಆರ್‌ಒ ಅಡಿಯಲ್ಲಿ ನೋಂದಾಯಿತಗೊಂಡ ಆನ್‌ಲೈನ್ ಗೇಮಿಂಗ್ ಕಂಪನಿಯು ತನ್ನ ನೋಂದಣಿ ಸಂಖ್ಯೆ, ಖಾಸಗೀತನ ನೀತಿಗಳು, ನಿಯಮಗಳು ಹಾಗೂ ಸೇವೆಗಳು, ಬಳಕೆದಾರರ ಒಪ್ಪಂದದ ಮಾಹಿತಿಯನ್ನು ತನ್ನ ವೆಬ್‌ಸೈಟ್ ಅಥವಾ ಮೊಬೈಲ್ ಗೇಮಿಂಗ್ ಆ್ಯಪ್‌ನಲ್ಲಿ ಉಲ್ಲೇಖಿಸಬೇಕು
- ಎಸ್‌ಆರ್‌ಒ ಅಡಿ ಮಾಡಲಾದ ನೋಂದಣಿ ಸಂಖ್ಯೆ ಹಾಗೂ ಯಾವ ಉದ್ದೇಶಕ್ಕೆ ನೋಂದಣಿ ಮಾಡಿಸಲಾಗಿದೆ ಎಂಬ ಮಾಹಿತಿ ಹಂಚಿಕೊಳ್ಳಬೇಕು
- ಆನ್‌ಲೈನ್ ಗೇಮ್ ಮಧ್ಯವರ್ತಿಯು ಭಾರತದಲ್ಲಿ ತನ್ನ ಭೌತಿಕ ವಿಳಾಸವನ್ನು ವೆಬ್‌ಸೈಟ್‌ನಲ್ಲಿ ನಮೂದಿಸಬೇಕು
- ನಿಯಮ ಉಲ್ಲಂಘನೆ ಕುರಿತಂತೆ ಬಳಕೆದಾರರು ದೂರು ನೀಡುವ ವ್ಯವಸ್ಥೆಯನ್ನು ಜಾರಿಗೆ ತರಬೇಕು
- ಕುಂದುಕೊರತೆ ಅಧಿಕಾರಿಯು ಭಾರತದಲ್ಲಿ ನೆಲೆಸಿರಬೇಕು
- ಬಳಕೆದಾರರ ಕುಂದುಕೊರತೆಗಳನ್ನು ಕಾಲಮಿತಿಯಲ್ಲಿ ಬಗೆಹರಿಸಬೇಕು
- ಸರ್ಕಾರದ ಕಾನೂನು ಜಾರಿ ವಿಭಾಗದ ಜೊತೆ ದಿನದ 24 ಗಂಟೆಯೂ ಸಂಪರ್ಕಕ್ಕೆ ಸಿಗುವಂತಹ ನೋಡಲ್ ಸಂಪರ್ಕ ಅಧಿಕಾರಿಗಳನ್ನು ಕಂಪನಿಗಳು ನೇಮಿಸಬೇಕು

ಆಧಾರ: ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯ ರೂಪಿಸಿರುವ ಹೊಸ ನಿಯಮಗಳು, ಪಿಟಿಐ

ಸಿನಿ ಬಿಟ್ಸ್

ಕ್ರಿಕೆಟಿಗ ರಾಹುಲ್ ಕಥೆ ತೆರೆಗೆ?

ಬೆಂಗಳೂರು: ಕ್ರಿಕೆಟ್ ಜೊತೆಗೆ ಹೊಂಬಾಳೆ ಫಿಲ್ಮ್ಸ್ ನಂಟು ಹೊಸತೇನಲ್ಲ. ಈ ಹಿಂದೆ ಆರ್‌ಸಿಬಿ ಜೊತೆ ಕೈಜೋಡಿಸಿದ್ದ ಹೊಂಬಾಳೆ, ತಂಡದ ಡಿಜಿಟಲ್ ಪಾಲುದಾರನಾಗಿತ್ತು. ಇದೀಗ ಮತ್ತೊಂದು ಹೆಜ್ಜೆ ಮುಂದಿಟ್ಟಿದ್ದು, ತನ್ನದೇ ಕೆಆರ್‌ಜಿ ಸ್ಟುಡಿಯೋಸ್ ಮೂಲಕ ‘ಕಿರಿಕ್–ಎಟ್ 11’ ಎಂಬ ಶೀರ್ಷಿಕೆಯುಳ್ಳ ಸಿನಿಮಾ ಘೋಷಿಸಿದೆ.

ನಟರಾದ ದಾನೀಶ್ ಸೇಠ್ ಹಾಗೂ ನವೀನ್ ಶಂಕರ್ ಮುಖ್ಯ ಭೂಮಿಕೆಯಲ್ಲಿರುವ ಚಿತ್ರ ಕನ್ನಡಿಗ, ಕ್ರಿಕೆಟಿಗ ಕೆ.ಎಲ್.ರಾಹುಲ್ ಬದುಕಿನ ಕಥೆಯನ್ನು ಹೇಳಲಿದೆ ಎನ್ನುತ್ತಿವೆ ಮೂಲಗಳು. ಈ ಕುರಿತು ಒಂದಷ್ಟು ಪೋಸ್ಟ್‌ಗಳನ್ನು ಪ್ರಚಾರದ ಉದ್ದೇಶದಿಂದ ಸಾಮಾಜಿಕ ಜಾಲತಾಣಗಳಲ್ಲಿಯೂ ಹರಿಬಿಡಲಾಗಿದೆ. ಆದರೆ ಚಿತ್ರ ನಿರ್ಮಾಣ ಸಂಸ್ಥೆ ಈ ಬಗ್ಗೆ ಹೆಚ್ಚಿನ ಮಾಹಿತಿ ಬಿಟ್ಟುಕೊಟ್ಟಿಲ್ಲ.

‘ದಿ ಫ್ಯಾಮಿಲಿ ಮ್ಯಾನ್’, ‘ಫರ್ಜಿ’ಯಂತಹ ಸೂಪರ್ ಹಿಟ್ ವೆಬ್ ಸರಣಿಗಳ ಬರಹಗಾರ ಸುಮನ್ ಕುಮಾರ್ ಈ ಚಿತ್ರದ ನಿರ್ದೇಶಕರು. ಸ್ಟ್ಯಾಂಡಪ್ ಕಾಮಿಡಿಯನ್ ಆಗಿರುವ ಸುಮನ್ ಮೂಲತಃ ಬೆಂಗಳೂರಿನವರು. ‘ಫ್ಯಾಮಿಲಿ ಮ್ಯಾನ್‌ನ’ ಮತ್ತೋರ್ವ ಬರಹಗಾರ ಮನೋಜ್‌ಕುಮಾರ್ ಕಲೈವಣ್ಣನ್ ಈ ಚಿತ್ರದ ಬರಹಗಾರರು.

ಕ್ರಿಕೆಟ್ ಆಟದ ಜೊತೆಗೆ ಹಾಸ್ಯ ಲೇಪನ ಹೊಂದಿರುವ ಕಥೆಯಲ್ಲಿ ಕೆ.ಎಲ್. ರಾಹುಲ್ ಅವರ ಕ್ರಿಕೆಟ್ ಬದುಕಿನ ಅಂಶಗಳು ಬರಲಿವೆ ಎನ್ನುತ್ತಿವೆ ಮೂಲಗಳು.

ಭಯ ಮೂಡಿಸುವ ‘ಆತ್ಮ’

ದೆವ್ವ, ಭೂತ, ಪಿಶಾಚಿ, ಆತ್ಮದ ಕಥೆಗಳನ್ನು ಹೊಂದಿರುವ ಭಯ ಮೂಡಿಸುವ ಕಥೆಯ ಚಿತ್ರಗಳು ನಮ್ಮಲ್ಲಿ ಆಗಾಗ ಬರುತ್ತಿರುತ್ತವೆ. ಇದೀಗ ‘ಆತ್ಮ’ ಎಂಬ ಶೀರ್ಷಿಕೆಯನ್ನೇ ಹೊಂದಿರುವ ಚಿತ್ರವೊಂದು ಸೆಟ್ಟೇರಿದೆ. ಈ ಹಿಂದೆ ‘ಅಚಲ’, ‘ಅಸ್ಥಿರ’ ಚಿತ್ರಗಳಿಗೆ ಆಕ್ಷನ್ ಕಟ್ ಹೇಳಿದ್ದ ಎಸ್.ಆರ್.ಪ್ರಮೋದ್ ಈ ಚಿತ್ರದ ನಿರ್ದೇಶಕರು.

ರೆಕಾರ್ಡಿಂಗ್ ಸ್ಟುಡಿಯೋವೊಂದರ ಮಾಲೀಕ ಅನಿಲ್.ಸಿ.ಆರ್ ಚಿತ್ರದ ನಿರ್ಮಾಪಕ ಕಂ ನಾಯಕ. ಜೊತೆಗೆ ಕಥೆಯೂ ಇವರದ್ದೇ. ಇತ್ತೀಚೆಗಷ್ಟೇ ಚಿತ್ರದ ಮುಹೂರ್ತ ಸಮಾರಂಭ ನಡೆಯಿತು.

‘ಇದೊಂದು ಭಯ ಬೀಳಿಸುವ ಕಥೆ. ಆರು ಸ್ನೇಹಿತರು ವೀಕೆಂಡ್ ಪಾರ್ಟಿಗೆಂದು ಒಂದು ಸ್ಥಳಕ್ಕೆ ಹೋಗುತ್ತಾರೆ. ಅಲ್ಲಿ ನಡೆಯುವ ನಿಗೂಢ ಘಟನೆಗಳನ್ನು ಆಧರಿಸಿ ಕಥೆ ಸಾಗುತ್ತದೆ. ತಂಡ ಹೇಗೆ ಅಲ್ಲಿಂದ ವಾಪಸ್ ಬರುತ್ತದೆ ಎಂಬ ಕುತೂಹಲ ಕೊನೆತನಕ ಇರುತ್ತದೆ’ ಎಂದರು ನಿರ್ದೇಶಕರು.

ಹೊಸ ಪ್ರತಿಭೆ ಕಾವ್ಯ ಚಿತ್ರದ ನಾಯಕಿ. ನಿತಿನ್‌ರಾಜ್ ಸಂಗೀತ ಸಂಯೋಜಿಸುತ್ತಿದ್ದಾರೆ. ಛಾಯಾಗ್ರಹಣ ರಣಧೀರ್ ನಾಯಕ್, ಸಂಕಲನ ಆಯುರ್‌ಸ್ವಾಮಿ ಅವರದ್ದು. ಮೈಸೂರು, ಉಡುಪಿ ಸುತ್ತಲೂ ಚಿತ್ರೀಕರಣವನ್ನು ಒಂದೇ ಹಂತದಲ್ಲಿ ಮುಗಿಸಿ, ನವೆಂಬರ್ ವೇಳೆಗೆ ಚಿತ್ರ ತೆರೆಗೆ ತರಲು ತಂಡ ಯೋಜನೆ ರೂಪಿಸಿಕೊಂಡಿದೆ.

ಕಾವ್ಯ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ ‘ತಮಿಳುನಾಡಿನ ಕೊಯಮತ್ತೂರು ಹಾಗೂ ಕೇರಳದ ತ್ರಿಶ್ಶೂರ್ ಅನ್ನು ಸಂಪರ್ಕಿಸುವ ಹೆದ್ದಾರಿಯಲ್ಲಿ ಸುರಂಗ ಮಾರ್ಗ ನಿರ್ಮಿಸಲಾಗಿದೆ. ಕೊಯಮತ್ತೂರಿನಿಂದ ತ್ರಿಶ್ಶೂರ್ ತಲುಪಲು ಎರಡು ತಾಸುಬೇಕಾಗುತ್ತದೆ. ಆದರೆ, ಈ ಸುರಂಗ ಮಾರ್ಗದಿಂದ 10 ನಿಮಿಷದಲ್ಲಿ ತಲುಪಬಹುದು. ಇಂಥ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಿದ್ದಕ್ಕಾಗಿ ಭಾರತ ಸರ್ಕಾರಕ್ಕೆ ವಂದನೆಗಳು. ಇಂಥ ವಿಷಯಗಳು ಮಾಧ್ಯಮಗಳಲ್ಲಿ ಬರುವುದಿಲ್ಲ’ ಎಂಬ ವಿವರವುಳ್ಳ ಪೋಸ್ಟ್ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಬಿಜೆಪಿಯ ಗುಜರಾತ್ ಘಟಕದ ಪ್ರಧಾನ ಕಾರ್ಯದರ್ಶಿ ರತ್ನಾಕರ್ ಅವರೂ ಈ ಪೋಸ್ಟ್ ಅನ್ನು 2021ರಲ್ಲಿಯೇ ಹಂಚಿಕೊಂಡಿದ್ದಾರೆ. ಸಾವಿರಾರು ಸಂಖ್ಯೆಯಲ್ಲಿ ಈ ಪೋಸ್ಟ್ ಹಂಚಿಕೆಯಾಗಿದೆ. ಇದೇ ರೀತಿಯ ಪೋಸ್ಟ್‌ಗಳು ಎರಡು ವರ್ಷಗಳ ನಂತರವೂ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. ಆದರೆ, ಇದು ತಪ್ಪು ಮಾಹಿತಿ ಇರುವ ಪೋಸ್ಟ್ ಆಗಿದೆ.

✓ ಕೊಯಮತ್ತೂರು ಹಾಗೂ ತ್ರಿಶ್ಶೂರ್ ಮಧ್ಯೆ 113.2 ಕಿ.ಮೀ (2 ಗಂಟೆ 26 ನಿಮಿಷ, ಗೂಗಲ್ ಮ್ಯಾಪ್ ಅನುಗುಣ) ಇದೆ. ತ್ರಿಶ್ಶೂರ್ ಹಾಗೂ ಪಾಲಕ್ಕಾಡ್ ಜಿಲ್ಲೆಗಳ ಮಧ್ಯದಲ್ಲಿ (ಎನ್‌ಎಚ್ 544) ಈ ಸುರಂಗ ಮಾರ್ಗವನ್ನು ನಿರ್ಮಿಸಲಾಗಿದೆ. ಇದಕ್ಕೆ ಕುದಿಯರನ್ ಸುರಂಗ ಮಾರ್ಗ ಎಂದು ಹೆಸರಿಡಲಾಗಿದೆ. ಈ ಮಾರ್ಗವು 2021ರ ಜುಲೈನಲ್ಲಿ ಸಂಚಾರಕ್ಕೆ ಮುಕ್ತವಾಗಿದೆ. ಈ ಮಾರ್ಗದ ಉದ್ದ 950 ಮೀ ಎಂದು ಸುರಂಗ ಮಾರ್ಗದ ಡಿಪಿಆರ್‌ನಲ್ಲಿ ಹೇಳಲಾಗಿದೆ. ಈ ಸುರಂಗ ಮಾರ್ಗದಿಂದಾಗಿ ಶೇ 30ರಷ್ಟು ಪ್ರಯಾಣ ಸಮಯವನ್ನು ಉಳಿಸಬಹುದು ಎಂದಷ್ಟೇ ಡಿಪಿಆರ್‌ನಲ್ಲಿ ಹೇಳಲಾಗಿದೆ. ಆದ್ದರಿಂದ, ಕೊಯಮತ್ತೂರುನಿಂದ ತ್ರಿಶ್ಶೂರ್‌ಗೆ 10 ನಿಮಿಷದಲ್ಲಿ ಪ್ರಯಾಣಿಸಬಹುದು ಎಂಬುದು ಸುಳ್ಳು ಸುದ್ದಿ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಮಹಾಸಮುದ್ರದ ಒಂದು ತೆರೆ

ತೆರೆಯಾಗು ವಿಶ್ವಜೀವನದ ದಿವ್ಯಾಬ್ಧಿಯಲಿ |
ಕರಗಿಸದರಲಿ ನಿನ್ನ ಬೇರೆತನದರಿವ ||
ಮರುತನುರುಬನು ತಾಳುತೇಳುತೋಲಾಡುತ್ತ |
ವಿರಮಿಸಾ ಲೀಲೆಯಲಿ - ಮಂಕುತಿಮ್ಮ || 914 ||

ಪದ-ಅರ್ಥ: ದಿವ್ಯಾಬ್ಧಿಯಲಿ = ದಿವ್ಯ + ಅಬ್ಧಿಯಲಿ-(ಸಮುದ್ರದಲ್ಲಿ), ಕರಗಿಸದರಲಿ = ಕರಗಿಸು + ಅದರಲಿ, ಬೇರತನದರಿವ = ಬೇರೆತನದ + ಅರಿವ, ಮರುತನುರುಬನು = ಮರುತನ(ಗಾಳಿಯ) + ಉರುಬನು(ರಭಸವನ್ನು, ವೇಗವನ್ನು), ತಾಳುತೇಳುತೋಲಾಡುತ್ತ = ತಾಳುತ + ಏಳುತ + ಓಲಾಡುತ್ತ, ವಿರಮಿಸಾ = ವಿರಮಿಸು + ಆ.

ವಾಚ್ಯಾರ್ಥ: ವಿಶ್ವಜೀವನವೆಂಬ ಮಹಾನ್ ಸಮುದ್ರದಲ್ಲಿ ನೀನೂ ತೆರೆಯಾಗು, ನಾನು ಬೇರೆ, ವಿಶೇಷ ಎಂಬ ತಿಳಿವನ್ನು ಅದರಲ್ಲಿ ಕರಗಿಸು. ಗಾಳಿಯ ರಭಸವನ್ನು ತಾಳುತ್ತ, ಮತ್ತೆ ಮೇಲೇಳುತ್ತ, ಓಲಾಡುತ್ತ ಆ ಲೀಲೆಯಲ್ಲಿ ವಿರಮಿಸು.

ವಿವರಣೆ: ಜೀವನ್ಮುಕ್ತ ಹೇಗಿರಬೇಕು ಎಂಬುದನ್ನು ಈ ಕಗ್ಗ ಹೇಳುತ್ತದೆ. ಬ್ರಹ್ಮಸತ್ವವೆಂಬುದು ಒಂದು ಮಹಾಸಮುದ್ರ. ಅದರಲ್ಲಿ ಹುಟ್ಟಿ, ಹರಡುವ ಕೊಟ್ಯಾಂತರ ತೆರೆಗಳಲ್ಲಿ ಮನುಷ್ಯನೊಬ್ಬ. ಇದೆಂತಹ ಸುಂದರವಾದ ಸೂಕ್ಷ್ಮ ಸಂಬಂಧ!

ತೆರೆಗಳಿಲ್ಲದೆ ಸಮುದ್ರವಿಲ್ಲ, ಸಮುದ್ರವಿಲ್ಲದೆ ತೆರೆಗಳಿಲ್ಲ. ಸಮುದ್ರದ ಚಲಿಸುವ ರೂಪ ತೆರೆ, ನಿಶ್ಚಲವಾದ ತೆರೆಗಳೇ ಸಮುದ್ರ. ಹಾಗೆಂದರೆ ತೆರೆ, ಸಮುದ್ರಗಳು ಬೇರೆಯಲ್ಲ. ಅವು ಒಂದೇ ವಸ್ತುವಿನ ಎರಡು ರೂಪಗಳು. ಅಂತೆಯೇ ವಿಶ್ವಜೀವನದ ಸಮುದ್ರದಲ್ಲಿ ತೆರೆಯಾಗಿ ಚಲಿಸುತ್ತಿರುವ ವ್ಯಕ್ತಿ ಬೇರೆಯಲ್ಲ, ಸಮುದ್ರವೆಂಬ ಬ್ರಹ್ಮಸತ್ವ ಬೇರೆಯಲ್ಲ. ಅದಕ್ಕೇ ಕಗ್ಗ ಗಟ್ಟಿಯಾಗಿ ಹೇಳುತ್ತದೆ, ಕರಗಿಸು ಆ ಮಹಾಸಮುದ್ರದಲ್ಲಿ ನಾನು ಬೇರೆ ಎಂಬ ಅಹಂಕಾರವನ್ನು. ನಾನೊಬ್ಬ ಬೇರೆಯವ, ವಿಶೇಷ ವ್ಯಕ್ತಿ ಎನ್ನುವುದನ್ನು ಬ್ರಹ್ಮಸತ್ವದ ಸಮುದ್ರದಲ್ಲಿ ಕರಗಿಸಿಬಿಡು ಎನ್ನುತ್ತದೆ. ತೆರೆಗೆ ಸಮುದ್ರದ ಭಯವಿಲ್ಲ. ಅದೆಷ್ಟೇ ಬಿರುಗಾಳಿ ಬೀಸಿದರೂ ಅದಕ್ಕೆ ಚಿಂತೆಯಿಲ್ಲ. ಬದಲಾಗಿ ಅದಕ್ಕೆ ಮತ್ತಷ್ಟು ಆನಂದ, ಉತ್ಸಾಹ. ಆ ಬೀಸುಗಾಳಿಯ ವೇಗಕ್ಕೆ ತೆರೆ ಮೇಲೇಳುತ್ತ, ಅದನ್ನು ತಾಳಿಕೊಳ್ಳುತ್ತ, ಓಲಾಡುತ್ತದೆ. ಯಾಕೆಂದರೆ ತಾನೇ ಸಮುದ್ರ ಎಂಬುದು ಅದಕ್ಕೆ ತಿಳಿದಿದೆ. ಒಂದು ಬಾರಿ ಜೀವಭಾವದ ಅಹಂಕಾರ ಕರಗಿಬಿಟ್ಟರೆ ಜೀವನ್ಮುಕ್ತಿ. ಜೀವಭಾವದ ಕರಗುವಿಕೆಯೇ ನೈಜವಾದ ಆನಂದದ ಮೂಲ. ನಾಣ್ಯಭಾವ ಹೋಗಿ ಧಾತು ಉಳಿಯುವಂತೆ, ಆಭರಣ ಭಾವ ಹೋಗಿ ಬಂಗಾರ ಉಳಿಯುವಂತೆ. ಮೇಜು, ಕುರ್ಚಿಯ ಭಾವ ಹೋಗಿ ಮರ ಮಾತ್ರ ಉಳಿಯುವಂತೆ, ಜೀವಭಾವ ಅಳಿದಾಗ ಆತ್ಮಭಾವ ಉಳಿಯುತ್ತದೆ. ಹೀಗೆ ಜೀವನ್ಮುಕ್ತನಾದವನು ಎಲ್ಲರಂತೆ ಈ ಪ್ರಪಂಚದಲ್ಲೇ ಇರುತ್ತಾನೆ, ಆದರೆ ಅವನಲ್ಲಿ ಪ್ರಪಂಚವಿಲ್ಲ. ಹೊರಗೆ ಸಾಕಾರ ಸಕಲ ಸುಂದರ ಜಗತ್ತು, ಒಳಗೆ ನಿರಾಕಾರ, ನಿರ್ವಯಲು. ಕಗ್ಗ ಹೇಳುತ್ತದೆ, ನಾವು ಜೀವನದಲ್ಲಿ ತೆರೆಯಂತೆ ಏರಿ, ಇಳಿದು, ಹೊಯ್ದಾಡಬೇಕು. ಆದರೆ ಅದು ಭಯದಿಂದ, ಆತಂಕದಿಂದಲ್ಲ. ಅದು ವಿರಾಮದ ಲೀಲೆಯಾಗಬೇಕು. ಇದು ಸಾಧ್ಯವಾಗುವುದು, ತಾನೂ ಬ್ರಹ್ಮಸತ್ವವೆಂಬ ಸಮುದ್ರದ ಒಂದು ತೆರೆ ಎಂಬ ಅರಿವಾದಾಗ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಮಂಗಳವಾರ ಜೂನ್ 27, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಶುದ್ಧ ನವಮಿ ಗಂ. 27-06 ನಕ್ಷತ್ರ: ಹಸ್ತ ಗಂ. 14-43 ಯೋಗ: ವರಿಯಾನ್ ಗಂ. 06-23 ಕರಣ: ಬಾಲವ ಗಂ. 14-41, ಮಿಥುನ ಮಾಸದ 11 ನೇ ದಿನ, ಮಳೆನಕ್ಷತ್ರ: ಆರ್ದ್ರಾ 2.
ರಾಹುಕಾಲ : ಸಾಯಂಕಾಲ 03-00 - 04-30,
ಸೂರ್ಯೋದಯ : 06-10 ಸೂರ್ಯಾಸ್ತ : 06-57,
ಮುಸ್ಲಿಂ ದಿನಾಂಕ : 08 ಜುಲ್‌ಹಿಜಾ, ದಿನ ಭವಿಷ್ಯ : ಮೇಳ ಷರೀಕ್ ಭಗವತಿ (ಕಾಶ್ಮೀರ)
ಅದೃಷ್ಟ ಸಂಖ್ಯೆ : 3, 9

ಮೇಷ: ಮೀನುಗಾರರು ಉದ್ಯೋಗ ನಿಮಿತ್ತ ಸಮುದ್ರಯಾನ ಮಾಡುವಾಗ ಜಾಗರೂಕತೆ ವಹಿಸಬೇಕಾಗುತ್ತದೆ. ತರಕಾರಿ, ಸೊಪ್ಪು ಬೆಳೆಗಾರರಿಗೆ ಅಧಿಕ ಲಾಭ. ಎಂತಹ ದುಃಸ್ಥಿತಿಯಿಂದಲೂ ಹೊರ ಬರುವ ಸಾಮರ್ಥ್ಯ ನಿಮ್ಮಲ್ಲಿದೆ.

ವೃಷಭ: ಬಹಳ ಬೇಗ ಗುರಿ ತಲುಪಬೇಕು ಎಂಬ ಇಚ್ಛೆಯು ನಿಮ್ಮ ಫಲಿತಾಂಶಕ್ಕೆ ಅಡ್ಡಿ ಮಾಡುವ ಸಾಧ್ಯತೆಯಿದೆ. ಸಂಶೋಧನಾ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಮುನ್ನಡೆ ಕಂಡು ಬರುತ್ತದೆ. ಆರ್ಥಿಕ ಭದ್ರತೆ ಬಗ್ಗೆ ತಯಾರಿ ನಡೆಸಿಕೊಳ್ಳಿ.

ಮಿಥುನ: ದುಡುಕು ನಿರ್ಧಾರಗಳಿಂದ ಇತರರಿಗೆ ನೋವು ಉಂಟಾಗುವ ಲಕ್ಷಣಗಳಿವೆ. ಉನ್ನತ ವ್ಯಾಸಂಗಕ್ಕೆ ವಿದೇಶಯಾನ ಮಾಡುವ ಅವಕಾಶ ಒದಗಿಬರುವುದು. ವಸ್ತ್ರ ವಿನ್ಯಾಸದಲ್ಲಿ ವಿಶೇಷ ಪರಿಣತಿ ಪಡೆದುಕೊಳ್ಳುವಿರಿ.

ಕರ್ಕಾಟಕ: ಧ್ಯಾನ ಹಾಗೂ ಕ್ರೀಡೆಯಂತಹ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿ ಹೊಂದುವಿರಿ. ನಿಮ್ಮ ಸುತ್ತಮುತ್ತಲಿನವರ ಜೊತೆಯಲ್ಲಿ ಸಂಬಂಧಗಳು ಕೆಡಲು ಆಸ್ಪದಕೊಡದಿರಿ. ತಾಯಿಯ ಆರೋಗ್ಯ ಸುಧಾರಣೆ ಹಂತ ತಲುಪುವುದು.

ಸಿಂಹ: ಕೃಷಿಯಲ್ಲಿ ಜೀವನಕ್ಕೆ ಸಾಕಾಗುವಷ್ಟು ಜೊತೆಗೆ ಸಣ್ಣ ಉಳಿತಾಯ ಮಾಡುವಿರಿ. ವಾಹನ ಚಾಲನೆಯಲ್ಲಿ ಅಥವಾ ಹಣ್ಣಿನ ವ್ಯಾಪಾರಿಗಳಿಗೆ ಲಾಭದ ದಿನ. ಕೈಗಾರಿಕೋದ್ಯಮಿಗಳಿಗೆ ಲ್ಲಿ ವಿಶೇಷ ಗೌರವ ದೊರೆಯಲಿದೆ.

ಕನ್ಯಾ: ರಾಜಕಾರಣಿಗಳು ಅಥವಾ ರಾಜಕೀಯಕ್ಕೆ ಸಂಬಂಧಿಸಿದ ವ್ಯಕ್ತಿಗಳು ನಿಮ್ಮ ಕೆಲಸಗಳಲ್ಲಿ ಯಶಸ್ವಿ ಆಗುತ್ತೀರಿ. ಹಣಕಾಸಿನಲ್ಲಿ ದಾಕ್ಷಿಣ್ಯದಿಂದ ನಷ್ಟ ಸಂಭವಿಸಬಹುದು. ಸರಕು ಸಾಗಣಿಕೆದಾರರಿಗೆ ಹೆಚ್ಚಿನ ಕೆಲಸ ಇರಲಿದೆ.

ತುಲಾ: ಕುಟುಂಬದಲ್ಲಿ ಇರುವಂಥ ಎಲ್ಲರ ಅಭಿಪ್ರಾಯ ಕೇಳಿ ತೀರ್ಮಾನಿಸುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಿ. ವಿವಾಹದ ವಿಷಯದಲ್ಲಿ ಮೌನ ಮುರಿಯುವುದು ಅನಿವಾರ್ಯ ವಿಷಯವಾಗಿ ಪರಿಣಮಿಸುವುದು.

ವೃಶ್ಚಿಕ: ಮನೆಯಲ್ಲಿರುವ ಆಂತರಿಕ ಸಮಸ್ಯೆಗಳನ್ನು ಶೀಘ್ರ ಬಗೆ ಹರಿಸಿಕೊಳ್ಳಲು ಪ್ರಯತ್ನಿಸಿ. ಸಾಮಾಜಿಕ ಬದುಕಿನಲ್ಲಿ ಹೊಸ ಹುರುಪು ಕಾಣಲಿದ್ದೀರಿ. ಔಷಧಿ ವಸ್ತುಗಳ ಮಾರಾಟದಿಂದ ಹೇರಳ ಲಾಭ ಪಡೆಯುವಿರಿ.

ಧನು: ಜೀವನ ರೂಪಿಸಿಕೊಳ್ಳಲು ನಿರ್ಧರಿಸಿದ ಪ್ರೇಮಿಗಳಿಗೆ ತಮ್ಮ ಸಹೋದರರಿಂದ ಅಥವಾ ಕುಟುಂಬ ವರ್ಗದವರಿಂದ ಸ್ಪಂದನೆ ಸಿಗುವ ಅವಕಾಶಗಳಿವೆ. ಪತ್ರಿಕೋದ್ಯಮಿಗಳಿಗೆ ಕ್ರಿಯಾತ್ಮಕ ಬರವಣಿಗೆಯಿಂದ ಏಳಿಗೆ ದೊರಕುವುದು.

ಮಕರ: ಯಾರಲ್ಲಿಯೂ ಅದರಲ್ಲೂ ಮುಖ್ಯವಾಗಿ ಬಂಧುಗಳಲ್ಲಿ ಆರ್ಥಿಕ ಸಹಾಯ ಕೇಳಬೇಡಿ. ಬಹಳ ದಿನಗಳ ನಂತರ ಒಂದು ದೃಢ ನಿರ್ಣಯ ಕೈಗೊಂಡಿರುವ ಶುಭವಾಗುವುದು. ಮನೆಯ ಖರ್ಚಿನಲ್ಲಿ ಹಿಡಿತವಿರಲಿ.

ಕುಂಭ: ಕೃಷಿ ಹಾಗೂ ಹೈನು ವ್ಯಾಪಾರಗಳಿಂದ ಈ ದಿನ ಅಧಿಕ ಲಾಭ. ಮಕ್ಕಳ ಓದಿನ ವಿಷಯವಾಗಿ ಹೆಚ್ಚು ಗಮನವಹಿಸುವಿರಿ. ಮಲ್ಲಿಕಾರ್ಜುನನ ಸೇವೆಯಿಂದ ಆರೋಗ್ಯ ಭಾಗ್ಯ ಮತ್ತು ನೆಮ್ಮದಿ ದೊರೆಯುವುದು.

ಮೀನ: ಯೋಜನೆಗಳನ್ನು ಕಾರ್ಯಗತಗೊಳಿಸಲು ಸಿಬ್ಬಂದಿ ವರ್ಗದವರು ಸಹಕರಿಸಲಿದ್ದಾರೆ. ಆರಂಭಿಸಿದ ವೈಯಕ್ತಿಕ ಕಾರ್ಯ ಆರ್ಥಿಕ ಸಮಸ್ಯೆಗಳಿಂದ ಸ್ಥಗಿತಗೊಳ್ಳುವ ಸಾಧ್ಯತೆಗಳಿದೆ. ಶಸ್ತ್ರ ವೃತ್ತಿಯವರಿಗೆ ಸೌಲಭ್ಯಗಳು ಹೆಚ್ಚಲಿದೆ.

ಪದಬಂಧ 5362

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನೇರವಾಗಿರುವ ಗುಣ (3)
4.ಸಮಯ ಸೂಚಕ ಯಂತ್ರ (4)
6.ನಗಿಸಲೆಂದೇ ಬಂದವನಿವನು (4)
8.ನೀರಾಗಿ ಕಲೆಸಿದ ಮಣ್ಣು (3)
11.ಜಿಪುಣ ಇಲ್ಲಿದ್ದಾನೆ (3)
13.ಶ್ರೇಷ್ಠವಾದ ನೆಲೆ (4)
17.ತಟದಲ್ಲಿ ಮಾಡಿರುವ ಮೋಸ (4)
18.ಹೊಟ್ಟೆಯೊಳಗೆ ಸುರುಳಿಯಂತಿರುವ ಪಚನಾಂಗ (3)

ಮೇಲಿಂದ ಕೆಳಕ್ಕೆ
1.ಯಜ್ಞ ಪುರೋಹಿತನನ್ನು ಹೀಗೂ ಕರೆವರು (3)
2.ಹೊಗಳಿಕೆಯ ವಿರುದ್ಧ ಪದ (4)
3.ಚಿನ್ನ ಬೆಳ್ಳಿಗಳನ್ನು ಪರೀಕ್ಷಿಸುವ ಕಲ್ಲು (3)
5.ವಿರಮಿಸುತ್ತಿದ್ದಾಗ ಕಾಣಿಸಿದ ಸೂರ್ಯ (2)
7.ದೇವರ ಮುಂದೆ ಉರಿಸುವ ಸುಗಂಧ ದ್ರವ್ಯ (3)
9.ಮಾಲು ತರಲು ಹೋದಾಗ ತಲೆಗೆ ಸುತ್ತಿಕೊಂಡ ಬಟ್ಟೆ (3)
10.ತಾಪವಿರುವಾಗ ತೊಡಿಕೊಂಡ ಬೇಗುದಿ (3)
12.ಕನ್ನಡಿಗರ ಹೆಮ್ಮೆಯ ನಾಡು (4)
14.ಒಂದು ಬಗೆಯ ಅಲೋಹ ಮೂಲಧಾತು (3)
15.ಮಡಿವಂತ ನೀಡಿರುವ ಓಟು (2)
16.ಮರದ ಹತ್ತಿರವಿರುವ ಉಸುಕು (3)



5361ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಾರ್ಗದರ್ಶಕ
4.ಸಶಸ್ತ್ರ 5.ಮಾತುಲ
6.ಗಮಾರ 8.ಭದ್ರ
9.ಮಿತಿ 11.ಪಾನಕ
14.ಕಮ್ಮಾರ 15.ಸೈಂಧವ
16.ಗರಡಿಮನೆ

ಮೇಲಿಂದ ಕೆಳಕ್ಕೆ:
1.ಮಾಶಾಸನ 2.ದಟ್ಟದರಿದ್ರ
3.ಕಮಾನು 4.ಸಲಗ 7.ಮಾಹಿತಿ
8.ಭವನ 9.ಮಿಟಕಲಾಡಿ
10.ಸೆರೆಮನೆ 12.ಕಕವ
13.ಉರಗ

ಸುಡೊಕು 5748

9		3		6				2
							5	
	1	2		5		6		4
	8			1		4		
3		4	2		7		8	
	9		4		3			6
6		5				8		
				7				1
1		8	9		6		4	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5747 ಸುಡೊಕು

7	8	4	2	5	3	9	6	1
1	9	2	6	8	4	5	7	3
6	5	3	1	7	9	8	2	4
5	3	8	9	2	7	4	1	6
9	1	6	4	3	8	7	5	2
4	2	7	5	1	6	3	8	9
2	4	5	7	9	1	6	3	8
8	6	1	3	4	5	2	9	7
3	7	9	8	6	2	1	4	5

ಕಾರ್ಮಿಕರ ಕಾಲಿಗೆ ಸರಪಳಿ ಕಟ್ಟಿ ಹಿಂಸೆ: ಸರ್ಕಾರಕ್ಕೆ ನೋಟಿಸ್

ನವದೆಹಲಿ(ಪಿಟಿಐ): ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆಯಲ್ಲಿ ಗುತ್ತಿಗೆದಾರರೊಬ್ಬರು ಬಾವಿಯನ್ನು ಕೊರೆಯಲು 11 ಮಂದಿ ಕಾರ್ಮಿಕರನ್ನು ಕಾಲಿಗೆ ಸರಪಳಿ ಕಟ್ಟಿ ತಪ್ಪಿಸಿಕೊಂಡು ಹೋಗದಂತೆ ಇರಿಸಿಕೊಂಡಿದ್ದಾರೆ ಎನ್ನುವ ಆರೋಪದ ಮೇಲೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು (ಎನ್‌ಎಚ್‌ಆರ್‌ಸಿ) ಮಹಾರಾಷ್ಟ್ರ ಸರ್ಕಾರ ಮತ್ತು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ನೋಟಿಸ್ ನೀಡಿದೆ. ಘಟನೆ ಬಗ್ಗೆ ನಾಲ್ಕು ವಾರಗಳಲ್ಲಿ ವರದಿ ನೀಡಲು ಸೂಚಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವರದಿಯೊಂದರ ಪ್ರಕಾರ 2 ರಿಂದ 3 ತಿಂಗಳಿಗೆ ಖಮಾಸ್ವಾಡಿ ಮತ್ತು ವಾಖರ್ವಾಡಿ ಪ್ರದೇಶಗಳಲ್ಲಿ ಬಾವಿ ಕೊರೆಯಲು ನಿಯೋಜನೆಗೊಂಡ ಕಾರ್ಮಿಕರು ಗುತ್ತಿಗೆದಾರರಿಂದ ಚಿತ್ರಹಿಂಸೆ ಅನುಭವಿಸುತ್ತಿದ್ದಾರೆ. ಕಾರ್ಮಿಕರು ದಿನಕ್ಕೆ 12 ಗಂಟೆಗಳ ಕಾಲ ಬಾವಿಯನ್ನು ಕೊರೆಯಬೇಕು, ಒಂದು ಹೊತ್ತಿಗೆ ಮಾತ್ರ ಆಹಾರ ನೀಡಲಾಗುತ್ತಿತ್ತು , ಅಲ್ಲದೆ ಅವರಿಗೆ ಮಲ ಮೂತ್ರ ವಿಸರ್ಜನೆಯನ್ನೂ ಅಲ್ಲಿಯೇ ಮಾಡಿಕೊಳ್ಳುವಂತೆ ಒತ್ತಾಯ ಮಾಡಲಾಗುತ್ತಿತ್ತು.

ಕಾರ್ಮಿಕರಲ್ಲಿ ಒಬ್ಬರು ಅಲ್ಲಿಂದ ತಪ್ಪಿಸಿಕೊಂಡು, ತಮ್ಮ ಗ್ರಾಮಕ್ಕೆ ತಲುಪಿ ಚಿತ್ರಹಿಂಸೆಯ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ ಎನ್ನಲಾಗಿದೆ.

ಪಾಕಿಸ್ತಾನ, ಚೀನಾಕ್ಕೆ ಸಂದೇಶ ರವಾನಿಸಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್

ಉಗ್ರರ ಬಗ್ಗು ಬಡಿಯಲು ಸಿದ್ಧ

ಜಮ್ಮು (ಪಿಟಿಐ): 'ದೇಶದ ಗಡಿ ಭಾಗದಲ್ಲಿ ಹುಟ್ಟಿಕೊಳ್ಳುವ ಉಗ್ರರ ಜಾಲಗಳನ್ನು ಬಗ್ಗು ಬಡಿಯಲು ಭಾರತವು ಶಕ್ತಿಯುತವಾಗಿದ್ದು, ಸಾರ್ವಭೌಮತ್ವಕ್ಕೆ ಧಕ್ಕೆಯಾದರೆ ಸಹಿಸಿಕೊಳ್ಳುವುದಿಲ್ಲ' ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ಇಲ್ಲಿನ ಜಮ್ಮು ವಿಶ್ವವಿದ್ಯಾಲಯದಲ್ಲಿ ಸೋಮವಾರ ನಡೆದ ರಾಷ್ಟ್ರೀಯ ಭದ್ರತಾ ಸಮಾವೇಶದಲ್ಲಿ ಮಾತನಾಡಿದ ಅವರು, 'ವಿಶ್ವದ ಮುಸ್ಲಿಂ ದೇಶಗಳು ಭಯೋತ್ಪಾದನೆ ವಿರುದ್ಧ ಒಗ್ಗೂಡುತ್ತಿವೆ. ಆರ್ಥಿಕ ಮುಗ್ಗಟ್ಟಿನಿಂದ ನಲುಗುತ್ತಿರುವ ಪಾಕಿಸ್ತಾನದ ಪಾಲಿಗೆ ಕಾಶ್ಮೀರವು ಪಂಜರ ದಲ್ಲಿರುವ ಗಿಳಿಯಷ್ಟೇ. ಇದರಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ' ಎಂದು ಚಾಟಿ ಬೀಸಿದರು.

ಭಯೋತ್ಪಾದಕರ ವಿರುದ್ಧ ರಕ್ಷಣಾ ಪಡೆಗಳು ತಟಸ್ಥವಾಗಿಲ್ಲ. ನಿರ್ನಾಮಕ್ಕೂ ಸಿದ್ಧವಾಗಿವೆ. ಭಯೋತ್ಪಾದನೆ ವಿರುದ್ಧ ಭಾರತ ಕೈಗೊಂಡಿರುವ ಕ್ರಮಗಳನ್ನು ಇಡೀ ವಿಶ್ವವೇ ಗಮನಿಸುತ್ತಿದೆ ಎಂದರು.

ಸರ್ಕಾರವು ಭಯೋತ್ಪಾದನೆ ವಿರುದ್ಧ ಕಠಿಣ ಕ್ರಮಕೈಗೊಂಡಿದೆ ಎಂದ ಅವರು, ಉಗ್ರರ ವಿರುದ್ಧ ಗಡಿ ನಿಯಂತ್ರಣ ರೇಖೆಯುದ್ದಕ್ಕೂ ಕೈಗೊಂಡಿರುವ ಸರ್ಜಿಕಲ್ ಸ್ಟ್ರೈಕ್ ಮತ್ತು ಬಾಲಾಕೋಟ್ ವೈಮಾನಿಕ ದಾಳಿಯನ್ನು ಅವರು ಉದಾಹರಿಸಿದರು.

ಯುಪಿಎ ಸರ್ಕಾರವು ಪಾಕ್ ಪ್ರಾಯೋಜಿತ ಭಯೋತ್ಪಾದನೆ ವಿರುದ್ಧ ಕಠಿಣ ಕ್ರಮಕ್ಕೆ ಮುಂದಾಗಲಿಲ್ಲ. ಆ ದೇಶದ ನೀಚತನದಿಂದ ಸಾವಿರಾರು ಮುಗ್ಧರು ಜೀವ ಕಳೆದುಕೊಳ್ಳುವಂತಾಯಿತು ಎಂದರು.

ಚೀನಾಕ್ಕೆ ಸಂದೇಶ ರವಾನೆ: ಭಾರತವು ಗಡಿಯಲ್ಲಿ ಶಾಂತಿ ಬಯಸುತ್ತದೆ. ಈ ನಿಟ್ಟಿನಲ್ಲಿ ಚೀನಾ ಜೊತೆ ರಾಜತಾಂತ್ರಿಕ ಮಾತುಕತೆಗಳ ನಡೆಯುತ್ತಿವೆ ಎಂದು ಹೇಳಿದರು. ಚೀನಾವು ಪೂರ್ವ ಲಡಾಕ್‌ನಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವುದನ್ನು ಏಕಪಕ್ಷೀಯವಾಗಿ ಉಲ್ಲಂಘಿಸಿದೆ. ಗಾಲ್ವನ್ ಕಣಿವೆ ಸಂಘರ್ಷ ಇದಕ್ಕೆ ನಿದರ್ಶನವಾಗಿದೆ. ಆದರೆ, ಭಾರತೀಯ ಯೋಧರು ಚೀನಾಕ್ಕೆ ತಕ್ಕ ಉತ್ತರ ನೀಡಿದ್ದಾರೆ ಎಂದರು.

'ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದಲ್ಲಿ ಉಗ್ರವಾದದ ಛಾಯೆ ಬದಲು ಶಾಶ್ವತವಾಗಿ ಶಾಂತಿ ಮತ್ತು ಸುರಕ್ಷತೆಯ ವಾತಾವರಣ ನೆಲೆಸಿದರೆ ಸಶಸ್ತ್ರ ಪಡೆಗಳ(ವಿಶೇಷ ಅಧಿಕಾರ) ಕಾಯ್ದೆಯನ್ನು (ಆಫ್‌ಸ್ಪ) ವಾಪಸ್ ಪಡೆಯಲಾಗುವುದು' ಎಂದು ರಾಜನಾಥ್ ಸಿಂಗ್ ಸ್ಪಷ್ಟಪಡಿಸಿದ್ದಾರೆ.

'ಭಾರತದ ಸಾರ್ವಭೌಮತ್ವದ ರಕ್ಷಣೆಗೆ ಸಂಬಂಧಿಸಿದಂತೆ ಯಾವುದೇ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ' ಎಂದು ಘೋಷಿಸಿದರು.

'ಡ್ರೋನ್ ಖರೀದಿ- ಮಾನದಂಡ ಉಲ್ಲಂಘಿಸಿಲ್ಲ:' 'ಅಮೆರಿಕದ ಜನರಲ್ ಅಟೊಮಿಕ್ ಸಂಸ್ಥೆಯಿಂದ ಶಸ್ತ್ರಸಜ್ಜಿತ 'ಎಂಕ್ಯೂ 9ಬಿ' ಡ್ರೋನ್‌ಗಳ ಖರೀದಿಯಲ್ಲಿ ಯಾವುದೇ ನಿಯಮಾವಳಿಗಳು ಉಲ್ಲಂಘನೆಯಾಗಿಲ್ಲ. ರಕ್ಷಣಾ ಸಾಮಗ್ರಿಗಳ ಖರೀದಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಎಲ್ಲಾ ಮಾನದಂಡಗಳನ್ನು ಪಾಲಿಸಲಾಗಿದೆ' ಎಂದು ರಾಜನಾಥ್ ಸಿಂಗ್ ಹೇಳಿದ್ದಾರೆ. ಡ್ರೋನ್ ಖರೀದಿಯ ವೆಚ್ಚ ಕುರಿತು ಸಾಮಾಜಿಕ ಜಾಲತಾಣಗಳಲ್ಲಿನ ಊಹಾಪೋಹದ ವರದಿಗಳನ್ನು ತಳ್ಳಿ ಹಾಕಿರುವ ಕೇಂದ್ರ ರಕ್ಷಣಾ ಸಚಿವಾಲಯವು ವೆಚ್ಚವನ್ನು ಅಂತಿಮಗೊಳಿಸಿರುವ ಬೆನ್ನಲ್ಲೇ ರಾಜನಾಥ್ ಈ ಸ್ಪಷ್ಟನೆ ನೀಡಿದ್ದಾರೆ.



ಜಮ್ಮುವಿನಲ್ಲಿ ಸೋಮವಾರ ನಡೆದ ರಾಷ್ಟ್ರೀಯ ಭದ್ರತಾ ಸಮಾವೇಶದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೇಂದ್ರ ಸಚಿವ ಜಿತೇಂದರ್ ಸಿಂಗ್, ಬಿಜೆಪಿ ಮುಖಂಡ ರವೀಂದರ್ ರೈನಾ ಹಾಗೂ ಇತರರು ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

ಒಬಾಮ ಹೇಳಿಕೆಗೆ ತಿರುಗೇಟು

ಶ್ರೀನಗರ: 'ಮುಸ್ಲಿಮರ ಹಕ್ಕುಗಳನ್ನು ಗೌರವಿಸದೆ ಇದ್ದರೆ ಭಾರತವು ಪ್ರತ್ಯೇಕವಾಗಿ ಉಳಿಯುವ ಅಪಾಯವಿದೆ' ಎಂಬ ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಅವರ ಹೇಳಿಕೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಸಚಿವ ರಾಜನಾಥ್ ಸಿಂಗ್, 'ನಿಮ್ಮ ಅಧಿಕಾರಾವಧಿಯಲ್ಲಿ ಎಷ್ಟು ಮುಸ್ಲಿಂ ರಾಷ್ಟ್ರಗಳ ಮೇಲೆ ಬಾಂಬ್ ದಾಳಿ ನಡೆಸಲಾಗಿದೆ ಎಂಬುದನ್ನು ಮೊದಲು ನೆನಪಿಸಿಕೊಳ್ಳಿ' ಎಂದಿದ್ದಾರೆ.

'ಭಾರತವು ವಸುದೈವ ಕುಟುಂಬ ತತ್ವದ ಮೇಲೆ ನಂಬಿಕೆ ಇಟ್ಟಿದೆ. ಇದನ್ನು ಒಬಾಮ ಮರೆತಿದ್ದಾರೆ. ನೀವು ನಡೆಸಿರುವ ದಾಳಿಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ' ಎಂದಿದ್ದಾರೆ. 'ಭಾರತದಲ್ಲಿ ಮುಸ್ಲಿಂ ಸಮುದಾಯಕ್ಕೆ ಸೇರಿದ ಎಲ್ಲಾ ಪಂಗಡಗಳು ಒಟ್ಟಾಗಿ ಬದುಕುತ್ತಿವೆ. ಇದನ್ನು ವಿಶ್ವದ ಬೇರೆ ಎಲ್ಲಿಯೂ ಕಾಣಲು ಸಾಧ್ಯವಿಲ್ಲ' ಎಂದರು.

ನಿರ್ಮಲಾ ಸೀತಾರಾಮನ್ ಚಾಟಿ: 'ಒಬಾಮ ತಮ್ಮ ಅಧಿಕಾರಾವಧಿಯಲ್ಲಿ ವಿಶ್ವದ ಪ್ರಮುಖ ಆರು ಮುಸ್ಲಿಂ ರಾಷ್ಟ್ರಗಳ ಮೇಲೆ ಬಾಂಬ್ ದಾಳಿ ನಡೆಸಿದ್ದಾರೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭಾನುವಾರ ಟೀಕಿಸಿದ್ದರು. ಪ್ರಧಾನಿ ಮೋದಿ ಅವರು 13 ದೇಶಗಳ ಅತ್ಯುನ್ನತ ನಾಗರಿಕ ಪ್ರಶಸ್ತಿ ಪಡೆದಿದ್ದಾರೆ. ಈ ಪೈಕಿ ಆರು ಮುಸ್ಲಿಂ ರಾಷ್ಟ್ರಗಳಾಗಿರುವುದು ಹೆಮ್ಮೆಯ ಸಂಗತಿ ಎಂದಿದ್ದರು.

ಸುದ್ದಿ 2 ನಿಮಿಷ

ಸಿಪಿಎಂ, ಕಾಂಗ್ರೆಸ್ ವಿರುದ್ಧ ಮಮತಾ ಬ್ಯಾನರ್ಜಿ ವಾಗ್ದಾಳಿ

ನವದೆಹಲಿ: ಬಿಜೆಪಿ ವಿರುದ್ಧ ಒಟ್ಟಾಗಿ ಹೋರಾಟ ನಡೆಸುವ ಪ್ರತಿಪಕ್ಷಗಳ ತೀರ್ಮಾನದ ಹಿಂದೆಯೇ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋಮವಾರ ಕಾಂಗ್ರೆಸ್ ಮತ್ತು ಸಿಪಿಎಂ ವಿರುದ್ಧ ಹರಿಹಾಯ್ದಿದ್ದಾರೆ.

ಕೂಚ್ ಬೆಹಾರ್‌ನ ಪಂಚಾಯಿತಿ ಚುನಾವಣಾ ರ‍್ಯಾಲಿಯಲ್ಲಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಮಮತಾ, 'ಈ ಎರಡೂ ಪಕ್ಷಗಳು ರಾಜ್ಯದಲ್ಲಿ ಬಿಜೆಪಿ ತಾಳಕ್ಕೆ ತಕ್ಕಂತೆ ಕುಣಿಯುತ್ತಿವೆ. ಈ ಅಪವಿತ್ರ ಸಖ್ಯವನ್ನು ನಾನು ಮುರಿಯುತ್ತೇನೆ' ಎಂದು ಆಕ್ರೋಶ ಹೊರಹಾಕಿದ್ದಾರೆ.

'ದೇಶದಲ್ಲಿ ಪ್ರಜಾಪ್ರಭುತ್ವವನ್ನು ಉಳಿಸುವ ಬಗ್ಗೆ ಮಾತನಾಡುವ ತೃಣಮೂಲ ಕಾಂಗ್ರೆಸ್, ಮಮತಾ ಆಳ್ವಿಕೆಯ ರಾಜ್ಯದಲ್ಲೇ ಅದರ ವಿರುದ್ಧವಾಗಿ ಕೆಲಸ ಮಾಡುತ್ತಿದೆ' ಎಂದು ಕಾಂಗ್ರೆಸ್ ಮತ್ತು ಸಿಪಿಎಂ ಟೀಕೆ ಮಾಡಿದ್ದವು.

ಮಮತಾ ಹೇಳಿಕೆ ಪ್ರತಿಕ್ರಿಯಿಸಿರುವ ಪಶ್ಚಿಮ ಬಂಗಾಳದ ಕಾಂಗ್ರೆಸ್ ಅಧ್ಯಕ್ಷ ಅಧೀರ್ ರಂಜನ್ ಚೌಧರಿ, 'ರಾಜ್ಯದಲ್ಲಿ ಟಿಎಂಸಿ ಪ್ರಜಾಸತ್ತೆ ಕಳೆದುಕೊಂಡಿದೆ. ಬಿಜೆಪಿ ವಿರುದ್ಧದ ಅದರ ಹೋರಾಟ ಪ್ರಶ್ನಾರ್ಹವಾಗಿದೆ' ಎಂದಿದ್ದಾರೆ.

ಈ ನಡುವೆ, ಬಂಗಾಳದ ಪಂಚಾಯಿತಿ ಚುನಾವಣಾ ಹಿಂಸಾಚಾರದಲ್ಲಿ ಟಿಎಂಸಿ ಪಾತ್ರ ಇದೆ ಎಂದು ಆರೋಪಿಸಿರುವ ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ ಯೆಚೂರಿ ಅವರು 'ಟಿಎಂಸಿ, ಬಿಜೆಪಿಯ ಹೆಜ್ಜೆಗಳನ್ನು ಅನುಸರಿಸಲು ಬಯಸಿದೆ. ಬಂಗಾಳದ ಸೇರಿ ದಂತೆ ಎಲ್ಲೇ ಆಗಲಿ ಪ್ರಜಾಪ್ರಭುತ್ವದ ದಮನ ನಡೆದರೆ, ಅಂಥವರ ವಿರುದ್ಧ ಪಕ್ಷವು ಹೋರಾಡುತ್ತದೆ' ಎಂದಿದ್ದಾರೆ.

ಗೋರಕ್ಷಕರಿಂದ ಥಳಿತ, ವ್ಯಕ್ತಿ ಸಾವು

ಮುಂಬೈ: ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಇಗಟ್‌ಪುರಿ ಪ್ರದೇಶದಲ್ಲಿ ಗೋರಕ್ಷಕರಿಂದ ಶುಕ್ರವಾರ ಮತ್ತೊಂದು ದಾಳಿ ನಡೆದಿದ್ದು, ದಾಳಿಯಲ್ಲಿ ವ್ಯಕ್ತಿಯೊಬ್ಬ ಮೃತಪಟ್ಟು, ಮತ್ತೊಬ್ಬ ವ್ಯಕ್ತಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಇದೇ ತಿಂಗಳ 10ರಂದು ಇಂಥದ್ದೇ ಘಟನೆ ಜಿಲ್ಲೆಯಲ್ಲಿ ನಡೆದಿತ್ತು.

ಅಫಾನ್ ಅಬ್ದುಲ್ ಮಾಜಿದ್ ಅನ್ಸಾರಿ ಮತ್ತು ನಾಸಿರ್ ಶೇಕ್ ಎಂಬುವವರು ಅಹಮದ್‌ನಗರ ಜಿಲ್ಲೆಯಿಂದ ಮುಂಬೈಗೆ ಮಾಂಸ ಸಾಗಣೆ ಮಾಡುತ್ತಿದ್ದರು. ಈ ವೇಳೆ ಇಗಟ್‌ಪುರಿಯ ಘೋಟಿ- ಸಿನ್ನಾರ್ ರಸ್ತೆಯಲ್ಲಿ ಗುಂಪೊಂದು ಅವರನ್ನು ಅಡ್ಡಗಟ್ಟಿ ಥಳಿಸಿದೆ. ಅನ್ಸಾರಿ ಸ್ಥಳದಲ್ಲೇ ಮೃತಪಟ್ಟರೆ, ಶೇಕ್ ಗಂಭೀರವಾಗಿ ಗಾಯಗೊಂಡರು. ಈ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು 11 ಜನರನ್ನು ಬಂಧಿಸಿದ್ದಾರೆ. ಜೂನ್ 10ರ ಘಟನೆಯಲ್ಲಿ ಗೋವು ಸಾಗಾಟ ಮಾಡುತ್ತಿದ್ದ ಮೂವರನ್ನು ಗುಂಪೊಂದು ಥಳಿಸಿತ್ತು.

ಪತಿ ಆಸ್ತಿಯಲ್ಲಿ ಪತ್ನಿಗೂ ಸಮಪಾಲು

ಒಂದನೇ ಪುಟದಿಂದ...

ಮದುವೆ ಬಳಿಕ ಹೆಂಡತಿಯೇ ಮಕ್ಕಳ ಪೋಷಣೆ ಮಾಡಬೇಕೆಂದು ಕುಟುಂಬದವರು ಅಪೇಕ್ಷಿಸುತ್ತಾರೆ. ಗಂಡನ ದುಡಿಮೆ ಹಿಂದೆ ಅವಳ ತ್ಯಾಗವೂ ಅಡಗಿದೆ. ಹಾಗಾಗಿ, ಆತನ ಆಸ್ತಿಯಲ್ಲಿ ಸಮಾನ ಪಾಲು ಪಡೆಯಲು ಅರ್ಹಳಾಗುತ್ತಾಳೆ ಎಂದು ಹೈಕೋರ್ಟ್ ಹೇಳಿದೆ.

ಆಕೆ ಸುಲಲಿತವಾಗಿ ಈ ಕಾರ್ಯಗಳನ್ನು ನಿಭಾಯಿಸುವುದರಿಂದಲೇ ಕುಟುಂಬದಲ್ಲಿ ನೆಮ್ಮದಿಯ ವಾತಾವರಣ ನೆಲೆಸುತ್ತದೆ. ಆಕೆಯ ಈ ಸೇವೆಯನ್ನು ಮೌಲ್ಯರಹಿತವೆಂದು ಹೇಳಲಾಗದು. ದಿನದ 24 ಗಂಟೆ ಕಾಲ ರಜೆಯೇ ಇಲ್ಲದೆ ದುಡಿಯುವ ಅವಳ ಸೇವೆಯು ಎಂಟು ಗಂಟೆ ಕಾಲ ದುಡಿಯುವ ಪತಿಯ ಕೆಲಸಕ್ಕಿಂತ ಕಡಿಮೆ ಅಲ್ಲ ಎಂದು ಹೇಳಿದೆ. ಗಂಡ ಮತ್ತು ಹೆಂಡತಿಯನ್ನು ಕೌಟುಂಬಿಕ ರಥದ ಎರಡು ಚಕ್ರಗಳಂತೆ ನೋಡಬೇಕು. ಕುಟುಂಬದ ಶ್ರೇಯೋಭಿವೃದ್ಧಿಯಲ್ಲಿ ಪತಿಯ ದುಡಿಮೆ ಮತ್ತು ಪತ್ನಿಯ ಸೇವೆಯನ್ನು ಪ್ರತ್ಯೇಕಿಸಬಾರದು. ಆಸ್ತಿಯನ್ನು ಗಂಡನ ಹೆಸರಿನಲ್ಲಿ ಖರೀದಿಸಲಾಗಿದೆಯೇ ಅಥವಾ ಹೆಂಡತಿಯ ಹೆಸರಿನಲ್ಲಿ ಖರೀದಿಸಲಾಗಿದೆಯೇ ಎಂಬುದು ಮುಖ್ಯವಲ್ಲ. ಆಸ್ತಿ ಖರೀದಿಗಾಗಿ ಹಣ ಉಳಿತಾಯ ಮಾಡಿದ್ದರಲ್ಲಿ ಇಬ್ಬರ ಶ್ರಮವೂ ಇದೆ. ಹಾಗಾಗಿ, ಆಸ್ತಿಯಲ್ಲಿ ಇಬ್ಬರಿಗೂ ಸಮಾನ ಪಾಲಿದೆ ಎಂದು ಹೇಳಿದೆ.

ಮಹಾರಾಷ್ಟ್ರದಲ್ಲಿ ಕೆಸಿಆರ್ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಮುಂಬೈ: ಮುಂಬರುವ ಲೋಕಸಭೆ ಚುನಾವಣೆಯಲ್ಲಿ ತಾಯ್ನೆಲದಾಚೆಗೂ ತಮ್ಮ ಪಕ್ಷದ ನೆಲೆ ವಿಸ್ತರಿಸುವ ಮಹಾತ್ವಾಕಾಂಕ್ಷೆ ಹೊಂದಿರುವ ತೆಲಂಗಾಣ ಮುಖ್ಯಮಂತ್ರಿ, ಬಿಆರ್‌ಎಸ್ ಸಂಸ್ಥಾಪಕ ಕೆ.ಸಿ. ಚಂದ್ರಶೇಖರ್ ರಾವ್ (ಕೆಸಿಆರ್) ಅವರು ಮಹಾರಾಷ್ಟ್ರದಲ್ಲಿ ಸೋಮವಾರ ಶಕ್ತಿ ಪ್ರದರ್ಶನ ನಡೆಸಿದರು.

ಪಂಡರಾಪುರ ಮತ್ತು ತುಳಜಾಪುರಕ್ಕೆ ಭೇಟಿ ನೀಡುವ ಸಲುವಾಗಿ ಅವರು ಮಹಾರಾಷ್ಟ್ರಕ್ಕೆ ಬಂದಿದ್ದು 600ಕ್ಕೂ ಹೆಚ್ಚು ಕಾರುಗಳು ಮತ್ತು ಎಸ್‌ಯುವಿಗಳು ಜತೆಗಿವೆ. ಕೆಸಿಆರ್ ಅವರು ಮಹಾರಾಷ್ಟ್ರಕ್ಕೆ ಈ ವರ್ಷ ಐದನೇ ಬಾರಿಗೆ ಭೇಟಿ ನೀಡಿದಂತಾಗಿದೆ.

ಬಸ್‌ನಲ್ಲಿ ಬಂದ ಅವರು ಸೊಲ್ಲಾಪುರ ಗಡಿ ಮಾರ್ಗವಾಗಿ ಮಹಾರಾಷ್ಟ್ರ ಪ್ರವೇಶಿಸಿದರು. ಕೆಸಿಆರ್ ಜೊತೆ ಸಂಪುಟದ ಸದಸ್ಯರು, ಪಕ್ಷದ ಸಂಸದರು, ಶಾಸಕರು ಇದ್ದರು. ಚುನಾವಣೆಯಲ್ಲಿ ಮಹಾರಾಷ್ಟ್ರದ ಎಲ್ಲಾ 48 ಕ್ಷೇತ್ರಗಳಲ್ಲಿ ಮತ್ತು ಅದೇ ವರ್ಷ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ ಎಲ್ಲಾ 288 ಕ್ಷೇತ್ರಗಳಲ್ಲೂ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಯೋಜನೆ ಅವರದ್ದು.

ಮತ್ತೊಂದು ಬೆಳವಣಿಗೆಯಲ್ಲಿ, ಎನ್‌ಸಿಪಿ ನಾಯಕ ಭಗೀರಥ್ ಭಾಲ್ಕೆ ಅವರು ಬಿಆರ್‌ಎಸ್‌ಗೆ ವಿಧ್ಯುಕ್ತವಾಗಿ ಸೇರ್ಪಡೆಯಾಗುವರು ಎನ್ನಲಾಗಿದೆ.

ಬಿಆರ್‌ಎಸ್‌ನ 35 ನಾಯಕರು ಕಾಂಗ್ರೆಸ್ ಸೇರ್ಪಡೆ

ನವದೆಹಲಿ (ಪಿಟಿಐ): ಮಾಜಿ ಸಂಸದ ಪಂಗುಲೇಟಿ ಶ್ರೀನಿವಾಸ್ ರೆಡ್ಡಿ, ತೆಲಂಗಾಣ ಸರ್ಕಾರದ ಮಾಜಿ ಸಚಿವ ಜುಪಲ್ಲಿ ಕೃಷ್ಣ ರಾವ್ ಸೇರಿದಂತೆ ಭಾರತ ರಾಷ್ಟ್ರ ಸಮಿತಿಯ (ಬಿಆರ್‌ಎಸ್) ಸುಮಾರು 35 ನಾಯಕರು ಸೋಮವಾರ ಕಾಂಗ್ರೆಸ್ ಪಕ್ಷ ಸೇರ್ಪಡೆಯಾದರು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮತ್ತು ತೆಲಂಗಾಣ ಕಾಂಗ್ರೆಸ್ ಅಧ್ಯಕ್ಷ ಎ.ರೇವಂತ್ ರೆಡ್ಡಿ ಸಮ್ಮುಖದಲ್ಲಿ ಔಪಚಾರಿಕವಾಗಿ ಪಕ್ಷಕ್ಕೆ ಸೇರಿದರು. ಬಳಿಕ ಸುದ್ದಿಗೋಷ್ಠಿ ಕರೆದು ಈ ವಿಷಯವನ್ನು ಪ್ರಕಟಿಸಿದರು.

ಚಂಡೀಗಢ– ಮನಾಲಿ ಹೆದ್ದಾರಿಯಲ್ಲಿ ವಾಹನ ಸಂಚಾರ ಸ್ಥಗಿತಗೊಂಡ ಕಾರಣ ರಸ್ತೆಯಲ್ಲೇ ಸಿಲುಕಿಕೊಂಡ ಪ್ರಯಾಣಿಕರು —ಪಿಟಿಐ ಚಿತ್ರ

ಹಿಮಾಚಲ: ಪ್ರಯಾಣಿಕರು ಅತಂತ್ರ

ಶಿಮ್ಲಾ/ಮಂಡಿ (ಪಿಟಿಐ): ದಿಢೀರ್ ಪ್ರವಾಹ ಹಾಗೂ ಭೂಕುಸಿತದ ಪರಿಣಾಮ ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯ ಔತ್ ಬಳಿ ಚಂಡೀಗಢ–ಮನಾಲಿ ಹೆದ್ದಾರಿಯಲ್ಲಿ ವಾಹನ ಸಂಚಾರ ಸ್ಥಗಿತಗೊಂಡು ನೂರಾರು ಪ್ರಯಾಣಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರಿ ಮಳೆಯಿಂದಾಗಿ ಔತ್ ಬಳಿಯ ಖೋಟಿ ನಾಲಾದಲ್ಲಿ ಪ್ರವಾಹ ಸ್ಥಿತಿ ನಿರ್ಮಾಣವಾಗಿದ್ದು, ಈ ಪ್ರದೇಶದ ರಸ್ತೆಯಲ್ಲಿ ಭಾನುವಾರ ಸಂಜೆಯಿಂದಲೇ ಪ್ರಯಾಣಿಕರು ಸಿಲುಕಿಕೊಂಡಿದ್ದಾರೆ ಎಂದೂ ವಿವರಿಸಿದ್ದಾರೆ.

ಭಾರಿ ಗಾತ್ರದ ಬಂಡೆಗಳು ರಸ್ತೆಗೆ ಉರುಳಿವೆ. ಬಂಡೆಗಳನ್ನು ಸ್ಫೋಟಕ ಬಳಸಿ ತೆರವು ಗೊಳಿಸಬೇಕಾದ ಅನಿವಾರ್ಯತೆ ಇದೆ ಎಂದಿದ್ದಾರೆ. ರಸ್ತೆಯಲ್ಲಿ ವಾಹನ ಸಂಚಾರವು ಪುನರಾರಂಭವಾಗುವವರೆಗೂ ಮಂಡಿ ಕಡೆಗೆ ತೆರಳಬೇಡಿ ಎಂದು ಪ್ರಯಾಣಿಕರಿಗೆ ಸೂಚನೆ ನೀಡಲಾಗಿದೆ.

'ಭಾನುವಾರ ಸಂಜೆಯಿಂದಲೇ ಸಿಲುಕಿಕೊಂಡಿದ್ದೇವೆ. ಹೆದ್ದಾರಿಯ ಇಕ್ಕೆಲಗಳಲ್ಲೂ ಹಲವು ಕಿ.ಮೀ. ದೂರದವರೆಗೂ ವಾಹನ ಸಿಲುಕಿಕೊಂಡಿವೆ' ಎಂದು ಪ್ರಯಾಣಿಕರೊಬ್ಬರು ವಿವರಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

‘ಪ್ರಧಾನಿ ಹುದ್ದೆ ಚರ್ಚೆ ನಡೆದಿಲ್ಲ’



ಶರದ್ ಪವಾರ್

ಪುಣೆ (ಪಿಟಿಐ): ಬಿಹಾರದ ಪಟ್ನಾ ದಲ್ಲಿ ನಡೆದ ವಿರೋಧ ಪಕ್ಷಗಳ ನಾಯಕರ ಸಭೆಯಲ್ಲಿ ಪ್ರಧಾನಿ ಹುದ್ದೆಯ ಬಗ್ಗೆ ಯಾವುದೇ ಚರ್ಚೆ ಯಾಗಿಲ್ಲ ಎಂದು ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಸೋಮವಾರ ಹೇಳಿದ್ದಾರೆ.

ಮಹಾರಾಷ್ಟ್ರದ ಬಾರಾಮತಿ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಪವಾರ್, 'ಹಣದುಬ್ಬರ, ನಿರುದ್ಯೋಗ ಮತ್ತು ಕೆಲವು ಕಡೆಗಳಲ್ಲಿ ಕೋಮು ಶಕ್ತಿಗಳನ್ನು ಪ್ರೋತ್ಸಾಹಿಸುವ ಉದ್ದೇಶಪೂರ್ವಕ ಪ್ರಯತ್ನಗಳು ನಡೆಯುತ್ತಿರುವ ಬಗ್ಗೆ ಚರ್ಚೆ ನಡೆಯಿತು' ಎಂದು ಹೇಳಿದರು.

ವಿರೋಧ ಪಕ್ಷಗಳ ಸಭೆಯ ಬಗ್ಗೆ ಟೀಕೆ ಮಾಡಿರುವ ಆಡಳಿತಾರೂಢ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಪವಾರ್, 'ಬಿಜೆಪಿಯವರು ಈ ಸಮಾವೇಶದ ಬಗ್ಗೆ ಏಕೆ ಚಿಂತಿತರಾಗಿದ್ದಾರೆ? ಇದು ಅವರ ರಾಜಕೀಯ ಪ್ರಬುದ್ಧತೆಯ ಕೊರತೆಯನ್ನು ತೋರಿಸಿದೆ' ಎಂದರು. 'ಬಿಜೆಪಿ ಅಧಿಕಾರದಲ್ಲಿರುವೆಡೆ ಯಾವ ರೀತಿ ಸಮುದಾಯಗಳ ನಡುವೆ ಬಿರುಕು ಮೂಡಿಸಲು ಪ್ರಯತ್ನಿಸುತ್ತಿದೆ ಎನ್ನುವ ಕುರಿತೂ ಚರ್ಚೆ ಆಯಿತು' ಎಂದರು. ಪ್ರಧಾನಿ ಹುದ್ದೆಯ 19 ಮಂದಿ ಆಕಾಂಕ್ಷಿಗಳು ಸಭೆಯಲ್ಲಿ ಒಗ್ಗೂಡಿದ್ದಾರೆ ಎಂಬ ಬಿಜೆಪಿಯ ಟೀಕೆ ಬಗ್ಗೆ ಕೇಳಿದ ಪ್ರಶ್ನೆಗೆ 'ಇದು ಬಾಲಿಶ ಹೇಳಿಕೆ' ಎಂದು ತಿರುಗೇಟು ನೀಡಿದರು.

‘ವ್ಯಾಗ್ನರ್ ಗುಂಪು ಮೋದಿ ಸರ್ಕಾರ ಕಿತ್ತೊಗೆಯಲಿದೆ’

ಮುಂಬೈ (ಪಿಟಿಐ): ಭಾರತದ 'ವ್ಯಾಗ್ನರ್ ಗುಂಪು' ಅಂದರೆ ವಿರೋಧ ಪಕ್ಷಗಳು ಅಹಿಂಸಾ ಮಾರ್ಗದಲ್ಲಿ ಮತಪೆಟ್ಟಿಗೆಯ ಮೂಲಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವನ್ನು ಕಿತ್ತೊಗೆಯಲಿವೆ ಎಂದು ಶಿವಸೇನಾದ ಉದ್ಧವ್ ಠಾಕ್ರೆ ಬಣ ಪ್ರತಿಪಾದಿಸಿದೆ.

ರಷ್ಯಾದ ಅಧ್ಯಕ್ಷ ಪುಟಿನ್ ವಿರುದ್ಧ ದಂಗೆ ಎದ್ದ ವ್ಯಾಗ್ನರ್ ಗುಂಪು ಹಾಗೂ ಕಳೆದ ವಾರ ಪಟ್ನಾದಲ್ಲಿ ನಡೆದ ವಿರೋಧಪಕ್ಷಗಳ ಸಭೆಯ ನಡುವಣ ಸಮಾನ ಅಂಶಗಳ ಬಗ್ಗೆ 'ಸಾಮ್ನಾ'ದ ಸಂಪಾದಕೀಯದಲ್ಲಿ ಗಮನ ಸೆಳೆಯಲಾಗಿದೆ. 'ಭಾರತದಲ್ಲಿರುವ ವಿರೋಧಪಕ್ಷಗಳ 'ವ್ಯಾಗ್ನರ್ ಗುಂಪು' ಸರ್ವಾಧಿಕಾರದ ಸವಾಲುಗಳನ್ನು ಎದುರಿಸಬಹುದು. ಅದು ಮೋದಿ ಆಗಿರಲಿ ಅಥವಾ ಪುಟಿನ್ ಆಗಿರಲಿ, ದಂಗೆಯನ್ನು ಎದುರಿಸಬೇಕಾಗುತ್ತದೆ. ಪುಟಿನ್ ಅವರಂತೆ ಮೋದಿಯೂ ಹೋಗಬೇಕು. ಆದರೆ, ಪ್ರಜಾಸತ್ತಾತ್ಮಕ ರೀತಿಯಲ್ಲಿ ಹೋಗಬೇಕು' ಎಂದು ಶಿವಸೇನಾ (ಯುಬಿಟಿ) ಹೇಳಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Teachers/ Professors

ಶ್ರೀ ವೇಣುಗೋಪಾಲಸ್ವಾಮಿ ವಿದ್ಯಾದತ್ತಿ(ರಿ)
(ಭಾರತೀಯ ವಿದ್ಯಾನಿಕೇತನ ಹಿರಿಯ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು, ದೇವಸಂದ್ರ, ಕೆ.ಆರ್.ಪುರ, ಬೆಂಗಳೂರು–36
ಬೇಕಾಗಿದ್ದಾರೆ
ಮೇಲ್ಕಂಡ ದತ್ತಿಯ ಆಶ್ರಯದಲ್ಲಿ ನಡೆಯುತ್ತಿರುವ ಭಾರತೀಯ ವಿದ್ಯಾನಿಕೇತನ ಹಿರಿಯ ಪ್ರಾಥಮಿಕ ಶಾಲೆಗೆ ಕೆಳಗೆ ಕಾಣಿಸಿರುವ ಹುದ್ದೆಗಳನ್ನು ತುಂಬಲು ಅರ್ಜಿಗಳನ್ನು ಕರೆಯಲಾಗಿದೆ.

ಕ್ರ ಸಂ.	ಹುದ್ದೆ	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ	ಮೀಸಲಾತಿ
1.	ಮುಖ್ಯ ಶಿಕ್ಷಕರು ಪ್ರಾಥಮಿಕ ಆಂಗ್ಲ ಮಾಧ್ಯಮ	1	ಪದವಿ ಜೊತೆ ಬಿ.ಎಡ್ (ಆಂಗ್ಲಮಾಧ್ಯಮ) ಜೊತೆಗೆ 5 ವರ್ಷದ ಅನುಭವ	ಸಾಮಾನ್ಯ (ಅನುದಾನ ರಹಿತ)
2.	ದೈಹಿಕ ಶಿಕ್ಷಕರು ಪ್ರಾಥಮಿಕ ಶಾಲೆ	1	ಡಿ.ಪಿ.ಎಡ್/ ಬಿ.ಪಿ.ಎಡ್.	ಸಾಮಾನ್ಯ (ಅನುದಾನಿತ)

ಅರ್ಹ ಅಭ್ಯರ್ಥಿಗಳು ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಯೊಂದಿಗೆ ಈ ಪ್ರಕಟಣೆಯ ದಿನಾಂಕದಿಂದ 21 ದಿನಗಳ ಒಳಗೆ ತಲುಪುವಂತೆ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕು. ದೈಹಿಕ ಶಿಕ್ಷಣ ಶಿಕ್ಷಕರು ಮಾತ್ರ ಹುದ್ದೆಗೆ ಅರ್ಜಿ ಸಲ್ಲಿಸುವವರು ಒಂದು ಪ್ರತಿಯನ್ನು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಕಲಾಸಿಪಾಳ್ಯಂ, ಬೆಂಗಳೂರು–2 ಇವರಿಗೆ ಸಲ್ಲಿಸಬೇಕು.
–ಕೆ.ಪೂರ್ಣಿಮ ಶ್ರೀನಿವಾಸ್, ಕಾರ್ಯದರ್ಶಿಗಳು

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಬಿಗ್ ಬಜಾರ್‌ಗಳಿಗೆ SSLC,PUC, Degree,ITI, Diplomaದವರು(ವಿದ್ಯಾರ್ಹತೆ ಯಿಲ್ಲದವರು) ಯುವಕ-ಯುವತಿಯರು, 18,600/- ವಸತಿಯೂಟವಿದೆ. 8105747339

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Wanted

ಎಂಎನ್ಸಿಗೆ &ಇತರೆ ಕಂಪನಿಗಳಿಗೆ ಡಿಪ್ಲೋಮಾ ಮೆಕ್ಯಾನಿಕಲ್ಸ್, ಎಲೆಕ್ಟ್ರಿಕಲ್ಸ್ /ಹೊರದೇಶದ ಕಂಪೆನಿಗಳಿಗೆ ಯುಕೆ ಯುಎಸ್‌ಎ ಕೆನಡಾ ಕೆಲಸಕ್ಕೆ ಬೇಕಾಗಿದ್ದಾರೆ: 8892501007/ 9606701007

ಸರ್ಕಾರಿ ಚಲನಚಿತ್ರ, ದೂರದರ್ಶನ ಸಂಸ್ಥೆ, ಅರೆಕಾಲಿಕ ಅಕುಶಲದಾಳು, 10000 ರಿಂದ 13000, 11 ತಿಂಗಳು ಮಾತ್ರ, 3 ದಿನದಲ್ಲಿ ಸಂಪರ್ಕಿಸಿ.

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು,ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- . ಬೆಂಗಳೂರು- 56.ಸಂಪರ್ಕಿಸಿ : 9606523337, 9606385001

ಪ್ರವಾಸ

Travel

30.6.2023 7ದಿನಗಳು ರಾಮೇಶ್ವರಂ ನವಗ್ರಹಸಹಿತ ತಮಿಳುನಾಡು. 2.9.2023, 22.9.2023 14ದಿನಗಳ ಚಾರ್ ಧಾಮ್`ಯಾತ್ರೆ. ಅಕ್ಟೋಬರ್ ಕಾಶಿ. ನವೆಂಬರ್ ಗುಜರಾತ್. 9448792891.

★13.07.2023 8/13ದಿನ★ ದೆಹಲಿ,ಆಗ್ರಾ,ಪ್ರಯಾಗ, ಗಯ,ಕಾಶಿ ಪ್ರವಾಸ., 15.08.2023 10ದಿನ ಗುಜರಾತ್,ಉಜ್ಜಯಿನಿ, ಓಂಕಾರೇಶ್ವರ.31.08.2023 16ದಿನ 95ದಿವ್ಯದೇಶ ಪ್ರವಾಸ, 29.07.2023 ತಮಿಳುನಾಡು 12ದಿನ 36ಸುಬ್ರಹ್ಮಣ್ಯ ಪ್ರವಾಸ. ಆರ್.ಗಾಂಧಿ ಟೂರ್ಸ್. 9902433500/ 9945445809

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭವಿಷ್ಯ

Astrology

'ವಶೀಕರಣ ಮಾಂತ್ರಿಕರು' ಪ್ರೇಮವಿಚಾರ, ಮದುವೆ, ಸಾಲಬಾಧೆ, ವ್ಯಾಪಾರ, ಮನೆಯಲ್ಲಿನ ಅಶಾಂತಿ, ಅನಾರೋಗ್ಯ, ಮಾನಸಿಕ ತೊಂದರೆಗಳಿಗೆ ದೈವಿಕ ಪೂಜಾ ಶಕ್ತಿಯಿಂದ ಫೋನಿನ ಮೂಲಕ ಪರಿಹಾರ.9964108888 (ವೀಡಿಯೋ ಕಾಲ್ ಗೆ ಲಭ್ಯವಿರುತ್ತಾರೆ).

ಪ್ರಜಾವಾಣಿ
ಹೆಸರು ಬದಲಾವಣೆಗಾಗಿ
BOOK YOUR NAME CHANGE AD IN PRAJAVANI ALL KARNATAKA ALL DAYS
CHANGE OF NAME @ 50/-* Per Word
*conditions apply
For More Details Contact:
9731810277 | 9901641752
9845114560 | 9886213331
080- 45557160 | 163 | 164

ಬಸ್ ಚಾಲಕಿಗೆ ಕಾರು ಉಡುಗೊರೆ ನೀಡಿದ ಕಮಲ್ ಹಾಸನ್

ಚೆನ್ನೈ (ಪಿಟಿಐ): ಡಿಎಂಕೆ ಸಂಸದೆ ಕನಿಮೊಳಿ ಪ್ರಯಾಣದ ವೇಳೆ ಟಿಕೆಟ್ ವಿಚಾರವಾಗಿ ಉಂಟಾದ ವಿವಾದದ ನಂತರ ಬಸ್ ಚಾಲಕ ವೃತ್ತಿಗೆ ರಾಜೀನಾಮೆ ನೀಡಿದ್ದ ಮಹಿಳೆಗೆ ನಟ, ರಾಜಕಾರಣಿ ಕಮಲ್ ಹಾಸನ್ ಸೋಮವಾರ ಕಾರನ್ನು ಉಡುಗೊರೆ ನೀಡಿದ್ದಾರೆ.

'ಕೊಯಮತ್ತೂರಿನ ಪ್ರಥಮ ಮಹಿಳಾ ಬಸ್ ಚಾಲಕಿ ಶರ್ಮಿಳಾ ಅವರಿಗೆ ಕಮಲ್ ಸಾಂಸ್ಕೃತಿಕ ಕೇಂದ್ರದ ವತಿಯಿಂದ ಉಡುಗೊರೆ ನೀಡಲಾಗಿದೆ' ಎಂದು ಅವರು ತಿಳಿಸಿದ್ದಾರೆ. 'ಶರ್ಮಿಳಾ ಈ ಕಾಲದ ಮಾದರಿ ಹೆಣ್ಣು. ಅವರಂಥ ಮತ್ತಷ್ಟು ಮಹಿಳೆಯರು ಮುನ್ನೆಲೆಗೆ ಬರಬೇಕು' ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಬ್ರಿಜ್ ಭೂಷಣ್: ಆರೋಪಪಟ್ಟಿ ಪ್ರತಿಗಾಗಿ ಮನವಿ

ನವದೆಹಲಿ (ಪಿಟಿಐ): ಲೈಂಗಿಕ ಕಿರುಕುಳ ನೀಡಿರುವ ಆರೋಪ ಹೊತ್ತಿರುವ ಭಾರತದ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ವಿರುದ್ಧ ಸಲ್ಲಿಕೆಯಾಗಿರುವ ಆರೋಪಪಟ್ಟಿಯ ಪ್ರತಿಯನ್ನು ನೀಡುವಂತೆ ದೂರುದಾರ ಮಹಿಳಾ ಕುಸ್ತಿಪಟುಗಳು ದೆಹಲಿಯ ನ್ಯಾಯಾಲಯವೊಂದಕ್ಕೆ ಸೋಮವಾರ ಮನವಿ ಮಾಡಿದ್ದಾರೆ.

ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿ ಬ್ರಿಜ್ ಭೂಷಣ್ ವಿರುದ್ಧ ದೆಹಲಿ ಪೊಲೀಸರು ಆರೋಪಪಟ್ಟಿ ಸಲ್ಲಿಸಿದ್ದಾರೆ. ಡಬ್ಲ್ಯುಎಫ್‌ಐನ ಉಚ್ಚಾಟಿತ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್ ಅವರ ಹೆಸರನ್ನೂ ಆರೋಪಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ. ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಹರ್ಜೀತ್ ಸಿಂಗ್ ಜಸ್ಪಾಲ್ ಅವರು ಈ ಆರೋಪಪಟ್ಟಿಯನ್ನು ಮಂಗಳವಾರ ವಿಚಾರಣೆಗೆ ತೆಗೆದುಕೊಳ್ಳಲಿದ್ದಾರೆ.

ದೆಹಲಿ: ಸುರಂಗ ಮಾರ್ಗದಲ್ಲಿ ಕಾರು ಅಡ್ಡಗಟ್ಟಿ ದರೋಡೆ

ನವದೆಹಲಿ (ಪಿಟಿಐ): ದೆಹಲಿಯ ಪ್ರಗತಿ ಮೈದಾನ ಸುರಂಗ ಮಾರ್ಗದಲ್ಲಿ ಚಲಿಸುತ್ತಿದ್ದ ಕಾರನ್ನು ಅಡ್ಡಗಟ್ಟಿದ ದುಷ್ಕರ್ಮಿಗಳು ಪಿಸ್ತೂಲ್‌ನಿಂದ ಬೆದರಿಸಿ ಶನಿವಾರ ₹2 ಲಕ್ಷ ನಗದು ದರೋಡೆ ಮಾಡಿದ್ದು, ಜನರಿಗೆ ಸುರಕ್ಷತೆ ಇಲ್ಲದಂತಾಗಿದೆ. ಕೂಡಲೇ, ನೈತಿಕ ಹೊಣೆ ಹೊತ್ತು ಲೆಫ್ಟಿನೆಂಟ್ ಗವರ್ನರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಆಗ್ರಹಿಸಿದ್ದಾರೆ.

1.5 ಕಿ.ಮೀ ಉದ್ದದ ಈ ಮಾರ್ಗವು ದೆಹಲಿಯಿಂದ ಸರೈ ಕಾಲೇಖಾನ್ ಮತ್ತು ನೋಯ್ಡಾಗೆ ಸಂಪರ್ಕ ಬೆಸೆಯುತ್ತದೆ. ಡೆಲಿವರಿ ಏಜೆಂಟ್, ಅವರ ಸಹೋದ್ಯೋಗಿ ಕಾರಿನಲ್ಲಿ ಗುರುಗ್ರಾಮಕ್ಕೆ ನಗದು ತಲುಪಿಸಲು ತೆರಳುತ್ತಿದ್ದರು. ವಾಹನಗಳ ಸಂಚಾರ ಹೆಚ್ಚಿದ್ದ ವೇಳೆಯೇ ದರೋಡೆ ನಡೆದಿದೆ. ಈ ಕುರಿತ ವಿಡಿಯೊ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಅಲಹಾಬಾದ್ ಹೈಕೋರ್ಟ್ ಅಭಿಪ್ರಾಯ

ಸಹಜೀವನ ಸಂಬಂಧ ಸಾಮಾಜಿಕ ಸಮಸ್ಯೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಅಂತರ್‌ಧರ್ಮೀಯ ಜೋಡಿಗೆ ರಕ್ಷಣೆ ನೀಡುವಂತೆ ಆದೇಶಿಸಲು ನಿರಾಕರಣೆ
- 'ಸಹಜೀವನ ಸಂಬಂಧ: ಕಾನೂನು ತೊಡಕಿನ ಬಗ್ಗೆ ಜಾಗೃತಿ ಮೂಡಿಸಬೇಕು'

ಲಖನೌ: 'ಸಹಜೀವನ ಸಂಬಂಧವು (ಲಿವ್ ಇನ್ ರಿಲೇಷನ್‌ಶಿಪ್) ಸಾಮಾಜಿಕ ಸಮಸ್ಯೆಯಾಗಿದ್ದು, ಇದನ್ನು ನ್ಯಾಯಾಲಯಗಳ ಮಧ್ಯಸ್ಥಿಕೆಯಿಂದ ಬಗೆಹರಿಸಲಾಗದು. ಈ ಸಮಸ್ಯೆಯನ್ನು ಸಾಮಾಜಿಕವಾಗಿಯೇ ಬೇರುಸಮೇತ ಕಿತ್ತುಹಾಕಬೇಕು' ಎಂದು ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠವು ತನ್ನ ಮಹತ್ವದ ತೀರ್ಪಿನಲ್ಲಿ ಇತ್ತೀಚೆಗೆ ಅಭಿಪ್ರಾಯಪಟ್ಟಿದೆ.

ನ್ಯಾಯಮೂರ್ತಿಗಳಾದ ಸಂಗೀತಾ ಚಂದ್ರ ಮತ್ತು ನರೇಂದ್ರ ಕುಮಾರ್ ಜೊಹಾರಿ ಅವರನ್ನೊಳಗೊಂಡ ವಿಭಾಗೀಯ ನ್ಯಾಯಪೀಠವು, ಸಹಜೀವನ ನಡೆಸುತ್ತಿದ್ದ ಅಂತರ ಧರ್ಮೀಯ ಜೋಡಿಯೊಂದು (ಹಿಂದೂ ಮಹಿಳೆ– ಮುಸ್ಲಿಂ ಪುರುಷ) ಪೊಲೀಸ್ ಕಿರುಕುಳದಿಂದ ರಕ್ಷಣೆ ಕೋರಿದ ಪ್ರಕರಣದಲ್ಲಿ ಈ ತೀರ್ಪು ನೀಡಿದೆ. ಮಧ್ಯಸ್ಥಿಕೆ ವಹಿಸಿ ಜೋಡಿಗೆ ರಕ್ಷಣೆ ನೀಡುವಂತೆ ಆದೇಶ ನೀಡಲೂ ಪೀಠ ನಿರಾಕರಿಸಿದೆ.

'ಸಹಜೀವನ ಸಂಬಂಧವು ಸಾಮಾಜಿಕವಾಗಿ ಬೇರುಸಹಿತ ಕಿತ್ತುಹಾಕಬಹುದಾದ ಸಮಸ್ಯೆ ಎಂದು ನಾವು ನಂಬುತ್ತೇವೆಯೇ ಹೊರತು ನ್ಯಾಯಾಲಯದ ಮಧ್ಯಪ್ರವೇಶದಿಂದ ಬಗೆಹರಿಸಬಹುದಾದ ಸಮಸ್ಯೆ ಎಂದಲ್ಲ. ಒಂದು ವೇಳೆ ಅರ್ಜಿದಾರರು ತಮ್ಮ ಸಹಜೀವನದ ಕಾರಣಕ್ಕಾಗಿಯೇ ತಮ್ಮ ಸಂಬಂಧಿಕರು, ಪೋಷಕರಿಂದ ಜೀವ ಬೆದರಿಕೆ ಎದುರಿಸುತ್ತಿದ್ದರೆ ಅವರು ಎಫ್‌ಐಆರ್ ದಾಖಲಿಸಲು ಸ್ವತಂತ್ರರು' ಎಂದು ನ್ಯಾಯಪೀಠವು ಹೇಳಿದೆ.

'ಸಹಜೀವನ ಸಂಬಂಧಕ್ಕೆ ಇಸ್ಲಾಂ ಧರ್ಮದಲ್ಲಿ ಮನ್ನಣೆ ಇಲ್ಲ ಎಂದು ಹೇಳಿದ ನ್ಯಾಯಾಲಯವು, 'ಮುಸ್ಲಿಂ ಕಾನೂನಿನಲ್ಲಿ ಮದುವೆಗೆ ಹೊರತಾದ ಲೈಂಗಿಕತೆಗೆ ಯಾವುದೇ ಮಾನ್ಯತೆ ನೀಡಲಾಗುವುದಿಲ್ಲ' ಎಂದೂ ಹೇಳಿದೆ.

ಇಸ್ಲಾಂ ಧರ್ಮದ 'ಝಿನಾ' (ಗಂಡ–ಹೆಂಡತಿಯ ಲೈಂಗಿಕ ಸಂಬಂಧ ಹೊರತುಪಡಿಸಿ ವಿವಾಹಬಾಹಿರ ಹಾಗೂ ವಿವಾಹಕ್ಕೂ ಮುಂಚಿನ ಲೈಂಗಿಕ ಸಂಬಂಧ) ಕುರಿತು ಉಲ್ಲೇಖಿಸಿದ ನ್ಯಾಯಾಲಯವು, 'ಇಸ್ಲಾಂನಲ್ಲಿ ಮದುವೆಗೆ ಮುಂಚಿನ ಲೈಂಗಿಕತೆ, ಪ್ರೀತಿಯ ಕ್ರಿಯೆಗಳಾದ ಚುಂಬನ, ಸ್ಪರ್ಶ, ದಿಟ್ಟಿಸಿ ನೋಡುವುದು ಇತ್ಯಾದಿ 'ಹರಾಮ್' (ನಿಷಿದ್ಧ) ಆಗಿರುತ್ತವೆ. ಏಕೆಂದರೆ, ಇಂತಹ ಕ್ರಿಯೆಗಳನ್ನು 'ಝಿನಾ'ದ ಭಾಗಗಳನ್ನಾಗಿ ಪರಿಗಣಿಸಲಾಗಿದೆ. ಕುರಾನ್‌ನ (ಅಧ್ಯಾಯ 24) ಪ್ರಕಾರ, ಅಂತಹ ಅಪರಾಧ ಮಾಡುವ ಅವಿವಾಹಿತ ಗಂಡು ಮತ್ತು ಹೆಣ್ಣಿಗೆ ನೂರು ಹೊಡೆತಗಳ ಶಿಕ್ಷೆಯನ್ನು ಮತ್ತು ವಿವಾಹಿತ ಗಂಡು ಮತ್ತ ಹೆಣ್ಣಿಗೆ ಕಲ್ಲು ಎಸೆದು ಸಾಯಿಸುವ ಶಿಕ್ಷೆಯನ್ನು ವಿಧಿಸಲಾಗಿದೆ' ಎಂದೂ ಹೇಳಿದೆ.

'ಸಹಜೀವನ ಸಂಬಂಧಗಳು ಸೃಷ್ಟಿಸಬಹುದಾದ ಭಾವನಾತ್ಮಕ ಮತ್ತು ಸಾಮಾಜಿಕ ಒತ್ತಡಗಳು, ಆಸ್ತಿಹಂಚಿಕೆ ಸೇರಿದಂತೆ ಇತರ ವಿಷಯಗಳು ಕಾನೂನು ತೊಡಕನ್ನು ಉಂಟುಮಾಡಬಹುದು. ಈ ದೃಷ್ಟಿಯಿಂದ ಯುವ ಜನರಲ್ಲಿ ಜಾಗೃತಿ ಮೂಡಿಸಬೇಕು. ಅಷ್ಟೇ ಅಲ್ಲ, ಸಹಜೀವನ ಸಂಬಂಧದಲ್ಲಿ ಸಂಗಾತಿಯಿಂದ ವಂಚನೆ, ಸಂಗಾತಿ ತೊರೆದು ಹೋದರೆ ಅಥವಾ ಮರಣ ಹೊಂದಿದ ಸಂದರ್ಭದಲ್ಲಿ ಪುನರ್‌ವಸತಿ ಕಲ್ಪಿಸುವುದು ಹಾಗೂ ಅಂತಹ ಸಂಬಂಧಗಳಿಂದ ಜನಿಸಿದ ಮಕ್ಕಳ ಪಾಲನೆಯನ್ನು ನಿಭಾಯಿಸುವುದು ತೊಡಕುಂಟು ಮಾಡುತ್ತದೆ. ಸಹಜೀವನದ ಸಂಬಂಧದಲ್ಲಿ ಜತೆಗಿರುವ ವ್ಯಕ್ತಿಗಳು ತಮ್ಮ ಸಂಗಾತಿಯ ಆಸ್ತಿಗೆ ನೇರ ಉತ್ತರಾಧಿಕಾರದ ಹಕ್ಕನ್ನು ಅನುಭವಿಸಲು ಆಗದು' ಎಂದೂ ನ್ಯಾಯಾಲಯವು ವಿವರಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,665
ಇಂದಿನ ಅಂತ್ಯ	18,691
▲	26
ದಿನದ ಗರಿಷ್ಠ	18,722

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1200-1500
ಮಧ್ಯಮ	₹800-1200
ಸಣ್ಣ	₹400-800

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹600
12 ಮೊಟ್ಟೆಗೆ	₹80

ಮೈಸೂರು

100 ಮೊಟ್ಟೆಗೆ	₹603

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1640)
ಸೋಯಾ (ರಿಫೈನ್ಡ್)	₹930 (930)
ಸೂರ್ಯಕಾಂತಿ (ರಿಫೈನ್ಡ್)	₹930 (930)
ಪಾಮೋಲಿನ್	₹848 (848)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್‌.ಪೇಟೆ	₹7900-7900
ತರೀಕೆರೆ	₹7800-7800
ತುರುವೇಕೆರೆ	₹8100-8100

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149.50
ಆರ್‌ಎಸ್‌ಎಸ್-5	₹144.50
ಗುಡ್ ಲಾಟ್	₹125

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹201-408
ದ್ವಿತಳಿ (ಬಿ.ವಿ)	₹185-555

‘ಶೀಘ್ರವೇ ಲೆಕ್ಕಪರಿಶೋಧನೆ: ಬೈಜೂಸ್’

ನವದೆಹಲಿ (ಪಿಟಿಐ): ದೀರ್ಘಾವಧಿಯಿಂದ ಬಾಕಿ ಇರುವ ಲೆಕ್ಕ ಪರಿಶೋಧನೆಯನ್ನು ಶೀಘ್ರವೇ ಪೂರ್ಣಗೊಳಿಸುವುದಾಗಿ ಬೈಜೂಸ್ ಕಂಪನಿಯು ಹೂಡಿಕೆದಾರರಿಗೆ ಭರವಸೆ ನೀಡಿದೆ ಎಂದು ಮೂಲಗಳು ಹೇಳಿವೆ.

2021–22ನೇ ಹಣಕಾಸು ವರ್ಷದ ಲೆಕ್ಕಪರಿಶೋಧನೆಯನ್ನು ಸೆಪ್ಟೆಂಬರ್ ಒಳಗಾಗಿ ಹಾಗೂ 2022–23ನೇ ಹಣಕಾಸು ವರ್ಷದ ಲೆಕ್ಕಪರಿಶೋಧನೆಯನ್ನು ಡಿಸೆಂಬರ್ ಒಳಗಾಗಿ ಪೂರ್ಣಗೊಳಿಸುವುದಾಗಿ ಹೂಡಿಕೆದಾರರಿಗೆ ಕಂಪನಿ ತಿಳಿಸಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ಷೇರುದಾರರೊಂದಿಗೆ ಶನಿವಾರ ದೂರವಾಣಿ ಮೂಲಕ ಮಾತನಾಡಿರುವ ಬೈಜೂಸ್ ಸಿಇಒ ಬೈಜು ರವೀಂದ್ರನ್, ತಮ್ಮ ಹಿಂದಿನ ತಪ್ಪುಗಳನ್ನು ಒಪ್ಪಿಕೊಂಡಿದ್ದಾರೆ. ಕಲಿಕೆಯು ತಪ್ಪು ಹೆಜ್ಜೆಗಳನ್ನು ಇಡದಂತೆ ಮಾಡುತ್ತದೆ ಎಂದು ಹೇಳಿದ್ದಾರೆ. ಆಡಳಿತ ಮಂಡಳಿಯ ಸದಸ್ಯರು ರಾಜೀನಾಮೆ ನೀಡಿರುವುದನ್ನು ರವೀಂದ್ರನ್ ಒಪ್ಪಿಕೊಂಡಿದ್ದಾರೆ. ಕಂಪನಿಯು ಅವರ ರಾಜೀನಾಮೆಯನ್ನು ಒಪ್ಪಿಕೊಂಡಿಲ್ಲ. ಆದರೆ, ಅದಕ್ಕೂ ಮೊದಲೇ ಆ ಮಾಹಿತಿಯು ಸೋರಿಕೆಯಾಗಿದೆ ಎಂದು ಷೇರುದಾರರಿಗೆ ತಿಳಿಸಿದ್ದಾರೆ ಎಂದು ಗೊತ್ತಾಗಿದೆ.

ಸಮೂಹದ ಸಿಎಫ್‌ಒ ಅಜಯ ಗೋಯಲ್ ಅವರನ್ನು ಷೇರುದಾರರಿಗೆ ಪರಿಚಯಿಸಿದ್ದಾರೆ. 2022 ಮತ್ತು 2023ನೇ ಹಣಕಾಸು ವರ್ಷದ ಲೆಕ್ಕಪರಿಶೋಧನೆಯನ್ನು ಕ್ರಮವಾಗಿ ಸೆಪ್ಟೆಂಬರ್ ಮತ್ತು ಡಿಸೆಂಬರ್ ಒಳಗಾಗಿ ಪೂರ್ಣಗೊಳಿಸುವ ಬದ್ಧತೆಯನ್ನು ಅವರು ನೀಡಿದ್ದಾರೆ ಎಂದು ಸಭೆಯಲ್ಲಿ ಭಾಗವಹಿಸಿದ್ದ ಒಬ್ಬರು ತಿಳಿಸಿದ್ದಾರೆ. ಹಣಕಾಸು ಮಾಹಿತಿ ನೀಡುವಲ್ಲಿ ವಿಳಂಬ ಮಾಡಿರುವ ಕಾರಣಕ್ಕಾಗಿ ಡೆಲಾಯ್ಟ್ ಕಂಪನಿಯು ಬೈಜೂಸ್‌ನ ಲೆಕ್ಕಪರಿಶೋಧಕ ಸ್ಥಾನದಿಂದ ಹಿಂದೆ ಸರಿದಿದೆ.



ಆರ್‌ಬಿಐ ತೀರ್ಮಾನ ಕುರಿತು ಎಸ್‌ಆ್ಯಂಡ್‌ಪಿ ಅಂದಾಜು

2024ರಲ್ಲಿ ರೆಪೊ ದರ ಇಳಿಕೆ?

ಮುಂಬೈ/ನವದೆಹಲಿ (ರಾಯಿಟರ್ಸ್/ಪಿಟಿಐ): ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇಕಡ 4ಕ್ಕೆ ತಗ್ಗಿದ ನಂತರದಲ್ಲಿ, 2024ರ ಆರಂಭದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ತಗ್ಗಿಸುವ ಸಾಧ್ಯತೆ ಇದೆ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ರೇಟಿಂಗ್ಸ್ ಅಂದಾಜಿಸಿದೆ.

ಮುಖ್ಯಾಂಶಗಳು

- ರೆಪೊ ಸದ್ಯಕ್ಕೆ ಸ್ಥಿರವಾಗಿರುವ ನಿರೀಕ್ಷೆ
- ರೆಪೊ ಇನ್ನಷ್ಟು ಹೆಚ್ಚಳಿಕ್ಕಿಲ್ಲ: ಎಸ್‌ಆ್ಯಂಡ್‌ಪಿ
- ಮುಂದಿನ ವರ್ಷ 100 ಮೂಲಾಂಶದಷ್ಟು ತಗ್ಗುವ ನಿರೀಕ್ಷೆ

ಮೇ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 4.25ಕ್ಕೆ ತಗ್ಗಿದೆ. ಆರ್‌ಬಿಐನ ಹಣಕಾಸು ನೀತಿ ಸಮಿತಿಯು ಕಳೆದ ವರ್ಷದ ಮೇ ತಿಂಗಳ ನಂತರದಲ್ಲಿ ರೆಪೊ ದರವನ್ನು 250 ಮೂಲಾಂಶಗಳಷ್ಟು ಹೆಚ್ಚಿಸಿದೆ. ಈ ವರ್ಷದ ಇನ್ನುಳಿದ ಅವಧಿಗೆ ಸಮಿತಿಯು ರೆಪೊ ದರವನ್ನು ಇನ್ನಷ್ಟು ಹೆಚ್ಚಿಸಲಿಕ್ಕಿಲ್ಲ ಎಂಬ ನಿರೀಕ್ಷೆ ಇದೆ.

ದೇಶದ ಚಿಲ್ಲರೆ ಹಣದುಬ್ಬರ ಪ್ರಮಾಣ ಹಾಗೂ ರೆಪೊ ದರವು ಗರಿಷ್ಠ ಮಟ್ಟವನ್ನು ಮುಟ್ಟಿಯಾಗಿದೆ ಎಂದು ಎಸ್‌ಆ್ಯಂಡ್‌ಪಿ ಹೇಳಿದೆ. ಹಣದುಬ್ಬರ ಪ್ರಮಾಣವು ಈ ಆರ್ಥಿಕ ವರ್ಷದಲ್ಲಿ ಸರಾಸರಿ ಶೇ 5ರಷ್ಟು, ಜಿಡಿಪಿ ಬೆಳವಣಿಗೆ ದರವು ಶೇ 6ರಷ್ಟು ಆಗಲಿದೆ ಎಂದು ಎಸ್‌ಆ್ಯಂಡ್‌ಪಿ ಅಂದಾಜು ಮಾಡಿದೆ.

ಆರ್‌ಬಿಐ ಪ್ರಸಕ್ತ ಹಣಕಾಸು ವರ್ಷದಲ್ಲಿ ರೆಪೊ ದರವನ್ನು 25 ಮೂಲಾಂಶಗಳಷ್ಟು ಕಡಿಮೆ ಮಾಡಲಿದೆ. ಆಗ ರೆಪೊ ದರವು ಶೇ 6.25ಕ್ಕೆ ತಗ್ಗುತ್ತದೆ. ಮಾರ್ಚ್ ಅಂತ್ಯದ ವೇಳೆಗೆ ಇದು ಸಾಧ್ಯವಾಗಬಹುದು. 2024–25ರಲ್ಲಿ ರೆಪೊ ದರವನ್ನು ಆರ್‌ಬಿಐ ಇನ್ನೂ 100 ಮೂಲಾಂಶಗಳಷ್ಟು ಕಡಿಮೆ ಮಾಡಬಹುದು ಎಂದು ಎಸ್‌ಆ್ಯಂಡ್‌ಪಿ ಅಂದಾಜು ಮಾಡಿದೆ. ಸಾಲದ ಮೇಲಿನ ಬಡ್ಡಿ ದರ ಹಾಗೂ ರೆಪೊ ದರದ ನಡುವೆ ನೇರ ನಂಟು ಇದೆ.

ಈ ವರ್ಷದಲ್ಲಿ ಭಾರತವು ಏಷ್ಯಾ–ಪೆಸಿಫಿಕ್ ಪ್ರದೇಶದಲ್ಲಿ ಅತ್ಯಂತ ವೇಗದ ಆರ್ಥಿಕ ಪ್ರಗತಿಯನ್ನು ಕಾಣಲಿದೆ ಎಂದು ಸಂಸ್ಥೆಯು ಅಂದಾಜು ಮಾಡಿದೆ. ಸಂಸ್ಥೆಯು ಚೀನಾದ ಆರ್ಥಿಕ ಬೆಳವಣಿಗೆ ಅಂದಾಜನ್ನು ಶೇ 5.2ಕ್ಕೆ ತಗ್ಗಿಸಿದೆ.

ಸಂಕ್ಷಿಪ್ತ ಸುದ್ದಿ

‘ಗೋ ಫಸ್ಟ್’ಗೆ ಮಧ್ಯಂತರ ನೆರವು?

ಮುಂಬೈ (ರಾಯಿಟರ್ಸ್): ಆರ್ಥಿಕವಾಗಿ ನಷ್ಟದಲ್ಲಿ ಇರುವ ‘ಗೋ ಫಸ್ಟ್’ ವಿಮಾನಯಾನ ಕಂಪನಿಯ ಕಾರ್ಯಾಚರಣೆ ಪುನರಾರಂಭಿಸಲು ಅನುಕೂಲ ಆಗುವಂತೆ ₹450 ಕೋಟಿ ಮಧ್ಯಂತರ ನೆರವು ನೀಡಲು ಬ್ಯಾಂಕ್‌ಗಳು ಒಪ್ಪಿಗೆ ನೀಡಿವೆ ಎಂದು ಬ್ಯಾಂಕಿಂಗ್ ಮೂಲಗಳು ಹೇಳಿವೆ.

ಈ ಮಧ್ಯಂತರ ನೆರವಿನ ಮೊತ್ತವು ದಿವಾಳಿ ಪ್ರಕ್ರಿಯೆಗೆ ಸಂಬಂಧಿಸಿದ ವೆಚ್ಚದ ಭಾಗವಾಗಿದೆ. ಇತರೆ ಬಾಕಿಗಳಿಗೆ ನೀಡುವಷ್ಟೇ ಆದ್ಯತೆಯನ್ನು ಈ ಮೊತ್ತಕ್ಕೂ ನೀಡಬೇಕು ಎಂದು ಬ್ಯಾಂಕ್‌ನ ಒಂದು ಮೂಲವು ತಿಳಿಸಿದೆ.

ಕಂಪನಿಯಲ್ಲಿ ಹೆಚ್ಚಿನ ಮೊತ್ತವನ್ನು ಹೂಡಿಕೆ ಮಾಡುವ ಆಲೋಚನೆ ಇಲ್ಲ ಎನ್ನುವ ಸೂಚನೆಯನ್ನು ಪ್ರವರ್ತಕರು ನೀಡಿರುವುದಾಗಿ ಹೇಳಿವೆ.

ಕಂಪನಿಗೆ ಸಾಲ ನೀಡಿರುವುದರಲ್ಲಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡಾ, ಐಡಿಬಿಐ ಬ್ಯಾಂಕ್ ಮತ್ತು ಡಾಯಿಷ್ ಬ್ಯಾಂಕ್ ಪ್ರಮುಖವಾಗಿವೆ. ಬ್ಯಾಂಕ್‌ಗಳಿಗೆ ಕಂಪನಿಯು ₹6,521 ಕೋಟಿ ಬಾಕಿ ಉಳಿಸಿಕೊಂಡಿದೆ.

ಮಲಬಾರ್ ಗೋಲ್ಡ್: ಜೂನಿಯರ್ ಎನ್‌ಟಿಆರ್ ಬ್ರ್ಯಾಂಡ್ ರಾಯಭಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗತಿಕವಾಗಿ ಆರನೆಯ ಅತಿದೊಡ್ಡ ಆಭರಣ ರಿಟೇಲ್ ಕಂಪನಿಯಾಗಿರುವ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್, ತೆಲುಗು ನಟ ಜೂನಿಯರ್ ಎನ್‌ಟಿಆರ್ (ನಂದಮೂರಿ ತಾರಕ ರಾಮರಾವ್) ಅವರನ್ನು ತನ್ನ ಬ್ರ್ಯಾಂಡ್ ರಾಯಭಾರಿ ಆಗಿಸಿಕೊಂಡಿದೆ.

ಜೂನಿಯರ್ ಎನ್‌ಟಿಆರ್ ಅವರು ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಜಾಹೀರಾತುಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ‘ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ರಾಯಭಾರಿ ಆಗಿರುವುದಕ್ಕೆ ಸಂತಸವಾಗುತ್ತಿದೆ’ ಎಂದು ಜೂನಿಯರ್ ಎನ್‌ಟಿಆರ್ ಪ್ರತಿಕ್ರಿಯಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-41500
ಹಳತು	48000-50500
ಕುಮಟಾ	
ಚಿಪ್ಪು	29509-32899
ಕೋಕ	21099-32800
ಹಳೆಚಾಲಿ	37599-40200
ಹೊಸಚಾಲಿ	36999-39499
ಸಾಗರ	
ಬಿಳಿಗೋಟು	27989-32899
ಚಾಲಿ	33161-38659
ಕೋಕ	28699-35989
ಕೆಂಪುಗೋಟು	30299-38699
ರಾಶಿ	36989-52359
ಶಿವಮೊಗ್ಗ	
ಬೆಟ್ಟೆ	45899-53029
ಗೊರಬಲು	17000-39258
ರಾಶಿ	40009-53219
ಸರಕು	50009-81496
ಸಿದ್ದಾಪುರ	
ಬಿಳಿಗೋಟು	30800-34000
ಚಾಲಿ	36539-39119
ಕೋಕ	30100
ಕೆಂಪುಗೋಟು	31889-34689
ರಾಶಿ	43199-49899
ತಟ್ಟಿಬೆಟ್ಟೆ	40099-45869
ಶಿರಸಿ	
ಬೆಟ್ಟೆ	36199-48399
ಬಿಳಿಗೋಟು	24289-35399
ಚಾಲಿ	36505-39899
ಕೆಂಪುಗೋಟು	30199-35829
ರಾಶಿ	46518-49999
ಯಲ್ಲಾಪುರ	
ಬಿಳಿಗೋಟು	24699-35369
ಚಾಲಿ	35212-39650
ಕೋಕ	22899-33922
ಕೆಂಪುಗೋಟು	30009-34990
ರಾಶಿ	43419-52998
ತಟ್ಟಿಬೆಟ್ಟೆ	39709-48699

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹14500
ಎಸಿ	₹7280
ಆರ್‌ಪಿ	₹10200
ಆರ್‌ಸಿ	₹6090

ಮುಂಬೈ ಧಾರಣೆ

ಶೇಂಗಾ

26-6-2023

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650(1650)
ಒಂದು ವಾರದ ಡೆಲಿವರಿ	1645(1645)
ಸೋಯಾ ಕಚ್ಚಾ	870(870)
ಪಾಮ್ ವಾರದ ಡೆಲಿವರಿ	846(846)
ಸೂರ್ಯಕಾಂತಿ ಎಣ್ಣೆ ಕಚ್ಚಾ	830(830)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,200 (58,200)
ಬೆಳ್ಳಿ ಕೆ.ಜಿ
68,400 (68,400)

ಆವರಣದಲ್ಲಿ ಶನಿವಾರದ ಧಾರಣೆ

ಇಪಿಎಫ್‌ಒ: ಪಿಂಚಣಿ ಗಡುವು ವಿಸ್ತರಣೆ

ನವದೆಹಲಿ (ಪಿಟಿಐ): ಹೆಚ್ಚಿನ ಪಿಂಚಣಿ ಬಯಸಿ ಅರ್ಜಿ ಸಲ್ಲಿಸಲು ನೀಡಿದ್ದ ಗಡುವನ್ನು ಉದ್ಯೋಗಿಗಳ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಜುಲೈ 11ರವರೆಗೆ ವಿಸ್ತರಿಸಿದೆ. ಸಂಘಟನೆಯು ಗಡುವನ್ನು ಎರಡನೆಯ ಬಾರಿ ವಿಸ್ತರಿಸಿದಂತಾಗಿದೆ.

ಈ ಮೊದಲು ಮೇ 3ರ ಗಡುವು ನೀಡಲಾಗಿತ್ತು. ಅದನ್ನು ಜೂನ್ 26ರವರೆಗೆ ವಿಸ್ತರಿಸಲಾಗಿತ್ತು. ಈಗ ಮತ್ತೆ ಗಡುವು ವಿಸ್ತರಣೆಯಾಗಿದೆ.

ಇದು ಕೊನೆಯ ಅವಕಾಶ ಎಂದು ಇಪಿಎಫ್‌ಒ ಹೇಳಿದೆ. ‘ಹೆಚ್ಚಿನ ಪಿಂಚಣಿ ಬಯಸಿದವರಿಗೆ ಆಯ್ಕೆಯನ್ನು ದೃಢೀಕರಿಸಲು, ಜಂಟಿ ಆಯ್ಕೆ ಸಲ್ಲಿಸಲು ಆನ್‌ಲೈನ್ ಸೌಲಭ್ಯ ಕಲ್ಪಿಸಲಾಗಿದೆ’ ಎಂದು ಪ್ರಕಟಣೆ ತಿಳಿಸಿದೆ.

‘ಹೆಚ್ಚಿನ ಪಿಂಚಣಿಗೆ ಅರ್ಜಿ ಸಲ್ಲಿಸಲು ಉದ್ಯೋಗದಾತರಿಗೆ 3 ತಿಂಗಳ ಅವಧಿಗೆ ಗಡುವು ವಿಸ್ತರಿಸಲಾಗಿದೆ. ನೌಕರರಿಗೆ 15 ದಿನಗಳ-ಮಟ್ಟಿಗೆ ಗಡುವು ವಿಸ್ತರಿಸಲಾಗಿದೆ’ ಎಂದು ಇಪಿಎಫ್‌ಒ ಧರ್ಮದರ್ಶಿಗಳ ಮಂಡಳಿ ಸದಸ್ಯ ಕೆ.ಇ. ರಘುನಾಥನ್ ಹೇಳಿದ್ದಾರೆ.

ಸಂದಿಗ್ಧತೆಯಲ್ಲಿ ವ್ಯಾಗ್ನರ್ ಪಡೆಗಳ ಸಾಗರೋತ್ತರ ಕಾರ್ಯಾಚರಣೆ

ಪ್ಯಾರಿಸ್ (ಎಎಫ್‌ಪಿ): ಖಾಸಗಿ ಸೇನಾ ಗುಂಪು ‘ವ್ಯಾಗ್ನರ್’ ಅನ್ನು ರಷ್ಯಾವು ಈ ಹಿಂದೆ ಸಿರಿಯಾ ಮತ್ತು ಆಫ್ರಿಕಾ ದೇಶಗಳಲ್ಲಿ ತನ್ನ ಪ್ರಭಾವವನ್ನು ವಿಸ್ತರಿಸಲು ಬಳಸಿಕೊಂಡಿತ್ತು ಎಂದು ಮೂಲಗಳು ತಿಳಿಸಿವೆ.

> ರಷ್ಯಾ ಸರ್ಕಾರವನ್ನು ಕಿತ್ತೊಗೆಯುವ ಉದ್ದೇಶವಿರಲಿಲ್ಲ. ಉಕ್ರೇನ್‌ನಲ್ಲಿ ಪರಿಣಾಮಕಾರಿಯಲ್ಲದ ಯುದ್ಧ ನಡೆಸುತ್ತಿರುವುದರ ವಿರುದ್ಧ ಪ್ರತಿಭಟಿಸುವುದಾಗಿತ್ತು
>
> **ಯೆವ್ಗೆನಿ ಪ್ರಿಗೋಷಿನ್,** ಪುಟಿನ್ ಅವರ ಖಾಸಗಿ ಸೇನೆ ‘ವ್ಯಾಗ್ನರ್’ ಮುಖ್ಯಸ್ಥ
>
> (ರಷ್ಯಾ ವಿರುದ್ಧವೇ ಬಂಡಾಯ ಪ್ರಯತ್ನ ನಡೆಸಿ ವಿಫಲವಾದ ಬಳಿಕ ಸಾರ್ವಜನಿಕವಾಗಿ ನೀಡಿರುವ ಮೊದಲ ಪ್ರತಿಕ್ರಿಯೆ)

‘ವ್ಯಾಗ್ನರ್’ನ ಮುಖ್ಯಸ್ಥ ಯೆವ್ಗೆನಿ ಪ್ರಿಗೋಷಿನ್ ರಷ್ಯಾದ ವಿರುದ್ಧವೇ ಬಂಡಾಯ ಪ್ರಯತ್ನ ನಡೆಸಿ ವಿಫಲವಾದ ಬಳಿಕ ಈ ಪಡೆಯ ಸಾಗರೋತ್ತರ ಕಾರ್ಯಾಚರಣೆಯ ಬಗ್ಗೆ ಇದೀಗ ಪ್ರಶ್ನೆಗಳು ಎದ್ದಿವೆ ಎಂದೂ ಹೇಳಿವೆ.

‘ವ್ಯಾಗ್ನರ್’ ಪಡೆಗಳ ಸಾಗರೋತ್ತರ ಉಪಸ್ಥಿತಿಯನ್ನು ಗಮನಿಸಿದರೆ ಮಧ್ಯ ಪ್ರಾಚ್ಯ ಮತ್ತು ಉತ್ತರ ಆಫ್ರಿಕಾದ ಮೇಲೆ ಇದು ಹೆಚ್ಚಿನ ಪರಿಣಾಮ ಬೀರಬಹುದು ಎಂದು ‘ಫಾರಿನ್ ಪಾಲಿಸಿ ರಿಸರ್ಚ್ ಇನ್‌ಸ್ಟಿಟ್ಯೂಟ್’ನ ರಾಬ್ ಲೀ ಟ್ವಿಟರ್‌ನಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ವ್ಯಾಗ್ನರ್ ಪಡೆಗಳು ಆಫ್ರಿಕಾದಾದ್ಯಂತ ದೊಡ್ಡ ಉಪಸ್ಥಿತಿ ಹೊಂದಿದ್ದು, ಇದರಿಂದ ಆ ದೇಶಕ್ಕೆ ಪ್ರಯೋಜನವಿದೆ ಎಂದೂ ಅವರು ಹೇಳಿದ್ದಾರೆ.

ಆಫ್ರಿಕಾದಲ್ಲಿ ವ್ಯಾಗ್ನರ್ ಯೋಧರ ಕಾರ್ಯಾಚರಣೆಯ ಹಿಂದೆ ರಷ್ಯಾದ ಹಿತಾಸಕ್ತಿಯೂ ಅಡಗಿದೆ ಎಂದೂ ಮೂಲಗಳು ಹೇಳಿವೆ. 2015ರಲ್ಲಿ ಸಿರಿಯಾದ ಆಂತರಿಕ ಯುದ್ಧದ ಸಂದರ್ಭದಲ್ಲಿ ವ್ಯಾಗ್ನರ್ ಯೋಧರು ವಿಶೇಷ ಪಡೆಗಳ ರೀತಿಯಲ್ಲಿ ಅಲ್ಲಿ ಕಾರ್ಯಾಚರಣೆಗೆ ಇಳಿದಿದ್ದರು ಎಂದೂ ಹೇಳಿವೆ.

‘ಕಾರ್ಯಾಚರಣೆ ಮುಂದುವರಿಯಲಿದೆ’

(ಮಾಸ್ಕೊ ವರದಿ): ವ್ಯಾಗ್ನರ್ ಯೋಧರು ಮಾಲಿ ಮತ್ತು ಮಧ್ಯ ಆಫ್ರಿಕಾ ದೇಶಗಳಲ್ಲಿ ತಮ್ಮ ಕಾರ್ಯಾಚರಣೆಯನ್ನು ಮುಂದುವರಿಸಲಿದ್ದಾರೆ ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ಹೇಳಿದ್ದಾರೆ.

ಯೂರೋಪ್ ಮತ್ತು ಫ್ರಾನ್ಸ್, ದಕ್ಷಿಣಾ ಆಫ್ರಿಕಾದ ಈ ಎರಡು ದೇಶಗಳನ್ನು ಕೈಬಿಟ್ಟರೂ ರಷ್ಯಾವು ಅವುಗಳಿಗೆ ಸೇನಾ ತರಬೇತಿ ನೀಡುವವರನ್ನು ಒದಗಿಸಿ ಅಲ್ಲಿನ ನಾಯಕರಿಗೆ ರಕ್ಷಣೆ ನೀಡಲಿದೆ ಎಂದಿದ್ದಾರೆ.

ಬಂಡಾಯ: ಉಕ್ರೇನ್‌ಗೆ ನೈತಿಕಸ್ಥೈರ್ಯ

ಕೀವ್ (ಎಪಿ): ರಷ್ಯಾದ ವಿರುದ್ಧದ ‘ವ್ಯಾಗ್ನರ್’ ಪಡೆಗಳ ಬಂಡಾಯ 24 ತಾಸುಗಳೊಳಗೆ ಕೊನೆಗೊಂಡಿದ್ದರೂ ಅದು ಶತ್ರು ದೇಶ ಉಕ್ರೇನ್‌ಗೆ ಅನಿರೀಕ್ಷಿತವಾಗಿ ನೈತಿಕಸ್ಥೈರ್ಯ ತುಂಬಿದೆ ಎಂದು ಮೂಲಗಳು ಹೇಳಿವೆ.

‘ರಷ್ಯಾದ ವಿರುದ್ಧ ಮುಂಚೂಣಿಯಲ್ಲಿ ನಿಂತು ಹೋರಾಡುತ್ತಿರುವ ನಮ್ಮ ಯೋಧರ ಮೇಲೆ ‘ವ್ಯಾಗ್ನರ್’ ಬಂಡಾಯವು ಸಕಾರಾತ್ಮಕ ಪರಿಣಾಮ ಬೀರಿದೆ’ ಎಂದು ಉಕ್ರೇನ್ ಸೇನೆಯ ವಕ್ತಾರ ಸೆರ್ಗೆ ಚೆರೆವಟಿ ಹೇಳಿದ್ದಾರೆ.

ಸಾರ್ವಜನಿಕವಾಗಿ ಕಾಣಿಸಿಕೊಂಡ ಸೆರ್ಗೆಯ್

ಮಾಸ್ಕೊ(ಎಪಿ): ‘ವ್ಯಾಗ್ನರ್’ ಬಂಡಾಯದ ಬಳಿಕ ತಮ್ಮ ರಾಜೀನಾಮೆಗೆ ಒತ್ತಡ ಹೆಚ್ಚಿರುವ ಮಧ್ಯೆಯೇ ರಷ್ಯಾದ ರಕ್ಷಣಾ ಸಚಿವ ಸೆರ್ಗೆಯ್ ಶೋಯಿಗು ಅವರು ಸೋಮವಾರ ಸಾರ್ವಜನಿಕವಾಗಿ ಕಾಣಿಸಿಕೊಂಡರು. ಸೆರ್ಗೆಯ್ ಅವರು ಉಕ್ರೇನ್‌ನಲ್ಲಿ ರಷ್ಯಾ ಯೋಧರ ಜೊತೆಗಿರುವ ವಿಡಿಯೊವನ್ನು ರಷ್ಯಾದ ರಕ್ಷಣಾ ಸಚಿವಾಲಯ ಬಿಡುಗಡೆ ಮಾಡಿದೆ. ಸೆರ್ಗೆಯ್ ಅವರು ರಷ್ಯಾದ ಪ್ರಬಲ ನಾಯಕರಲ್ಲಿ ಒಬ್ಬರಾಗಿದ್ದಾರೆ.

ಕಾಸಿಯಾ: ಶಶಿಧರ ಶೆಟ್ಟಿ ಅಧಿಕಾರ ಸ್ವೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023–24ನೇ ಸಾಲಿಗೆ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷರಾಗಿ ಶಶಿಧರ ಶೆಟ್ಟಿ ಮತ್ತು ಉಪಾಧ್ಯಕ್ಷರಾಗಿ ಎಂ.ಜಿ. ರಾಜಗೋಪಾಲ್ ಅಧಿಕಾರ ವಹಿಸಿಕೊಂಡಿದ್ದಾರೆ.



ಶಶಿಧರ ಶೆಟ್ಟಿ

ಶಶಿಧರ ಅವರು ಆಟೋಮೊಬೈಲ್ ಉಪಕರಣಗಳನ್ನು ತಯಾರಿಸುವ ಪ್ರೊಟೆಕ್ ಎಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ. ಪ್ರಸ್ತುತ ಕಾಸಿಯಾ ಕ್ರೆಡಿಟ್ ಸಹಕಾರ ಸಂಘದ ಉಪಾಧ್ಯಕ್ಷ ಆಗಿದ್ದಾರೆ.

ಭಾರತ–ಅಮೆರಿಕ ಬಾಂಧವ್ಯ ಹೆಚ್ಚು ಫಲಪ್ರದ: ಬೈಡನ್ ಮೆಚ್ಚುಗೆ

ವಾಷಿಂಗ್ಟನ್ (ಪಿಟಿಐ): ‘ವಿಶ್ವದ ಅತ್ಯಂತ ಮಹತ್ವದ ದ್ವಿಪಕ್ಷೀಯ ಸಂಬಂಧಗಳಲ್ಲಿ ಅಮೆರಿಕ-ಭಾರತ ಸಂಬಂಧವೂ ಒಂದಾಗಿದ್ದು, ಉಭಯ ರಾಷ್ಟ್ರಗಳ ಬಾಂಧವ್ಯ ಹೆಚ್ಚು ಫಲಪ್ರದವೆನಿಸಿದೆ’ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ಭಾರತದ ಪ್ರಧಾನಿ ಮೋದಿ ಅಮೆರಿಕಕ್ಕೆ ನೀಡಿದ ಐತಿಹಾಸಿಕ ಭೇಟಿಯ ವೇಳೆ ಉಭಯ ರಾಷ್ಟ್ರಗಳು ತಮ್ಮ ಕಾರ್ಯತಂತ್ರ, ತಂತ್ರಜ್ಞಾನ ಪಾಲುದಾರಿಕೆಯನ್ನು ಹಿಂದೆಂದಿಗಿಂತಲೂ ಹೆಚ್ಚು ಕ್ರಿಯಾಶೀಲಗೊಳಿಸಿವೆ ಎಂದು ಭಾನುವಾರ ಟ್ವೀಟ್ ಮಾಡಿದ್ದಾರೆ. ‘ಅಮೆರಿಕ ಮತ್ತು ಭಾರತದ ನಡುವಿನ ಸ್ನೇಹ ಜಗತ್ತಿನಲ್ಲೇ ಅತ್ಯಂತ ಪರಿಣಾಮಕಾರಿಯಾಗಿದೆ’ ಎಂದು ಬಣ್ಣಿಸಿದ್ದಾರೆ.

ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಮೋದಿ,‘ನಿಮ್ಮ ಮಾತನ್ನು ಸಂಪೂರ್ಣ ಒಪ್ಪುತ್ತೇನೆ. ನಮ್ಮ ರಾಷ್ಟ್ರಗಳ ನಡುವಿನ ಸ್ನೇಹವು ಜಾಗತಿಕ ಒಳಿತಿಗಾಗಿ ಒಂದುಗೂಡಿದ ಶಕ್ತಿ ಎನಿಸಿದೆ. ಭೂಗ್ರಹವನ್ನು ಉತ್ತಮ ಮತ್ತು ಸುಸ್ಥಿರವನ್ನಾಗಿ ಇಡಲಿವೆ ಎಂದು ಟ್ವೀಟ್ ಮಾಡಿದ್ದಾರೆ.

ಭಾರತದ ಮಹಿಳೆಗೆ ಮತ್ತೆ 3 ವರ್ಷ ಜೈಲು

ಸಿಂಗಪುರ (ಪಿಟಿಐ): ಮನೆ ಕೆಲಸದ ಸಹಾಯಕಿಗೆ ಹಲವು ಬಾರಿ ದೈಹಿಕವಾಗಿ ಹಿಂಸೆ ನೀಡಿದ್ದ ಪ್ರಕರಣದಲ್ಲಿ 14 ವರ್ಷ ಜೈಲು ಶಿಕ್ಷೆ ಅನುಭವಿಸುತ್ತಿದ್ದ ಭಾರತ ಮೂಲದ ಮಹಿಳೆಗೆ ಸಾಕ್ಷಿ ನಾಶ ಮಾಡಿದ ಕಾರಣ ಮತ್ತೆ ಮೂರು ವರ್ಷ ಸಜೆ ವಿಧಿಸಿದೆ.

ಪ್ರೇಮಾ ಎಸ್. ನಾರಾಯಣಸ್ವಾಮಿ ಶಿಕ್ಷೆಗೆ ಗುರಿಯಾದ ಮಹಿಳೆ. 2016ರಲ್ಲಿ ಮನೆ ಕೆಲಸದಾಕೆ ಮೇಲೆ 14 ತಿಂಗಳುಗಳ ಕಾಲ ದೌರ್ಜನ್ಯ ನಡೆಸಿದ ಪರಿಣಾಮ ಆಕೆ ಮೆದುಳಿಗೆ ಪೆಟ್ಟು ಬಿದ್ದು ಸಾವನ್ನಪ್ಪಿದ್ದಳು.

ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್ • ಕುವೈತ್ ವಿರುದ್ಧ ಪಂದ್ಯ ಇಂದು • ಅಗ್ರಸ್ಥಾನದತ್ತ ಚಿತ್ತ

ಭಾರತಕ್ಕೆ ಹ್ಯಾಟ್ರಿಕ್ ಜಯದ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಮಿಫೈನಲ್‌ನಲ್ಲಿ ಈಗಾಗಲೇ ಸ್ಥಾನ ಪಡೆದಿರುವ ಭಾರತ ಮತ್ತು ಕುವೈತ್ ತಂಡಗಳು ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಕೊನೆಯ ಲೀಗ್ ಪಂದ್ಯದಲ್ಲಿ ಮಂಗಳವಾರ ಎದುರಾಗಲಿದ್ದು, ಜಿದ್ದಾಜಿದ್ದಿನ ಪೈಪೋಟಿ ನಿರೀಕ್ಷಿಸಲಾಗಿದೆ.

ಉಭಯ ತಂಡಗಳು ತಲಾ ಆರು ಪಾಯಿಂಟ್ಸ್ ಕಲೆಹಾಕಿದ್ದು, 'ಎ' ಗುಂಪಿನಿಂದ ನಾಕೌಟ್ ಹಂತದಲ್ಲಿ ಸ್ಥಾನ ಪಡೆದುಕೊಂಡಿವೆ. ಉತ್ತಮ ಗೋಲು ವ್ಯತ್ಯಾಸದಲ್ಲಿ ಕುವೈತ್ ಅಗ್ರಸ್ಥಾನದಲ್ಲಿದ್ದು, ಆತಿಥೇಯ ತಂಡ 2ನೇ ಸ್ಥಾನದಲ್ಲಿದೆ.

ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ನಡೆಯುವ ಪಂದ್ಯ ಗೆದ್ದು, ಗುಂಪಿನಲ್ಲಿ ಅಗ್ರಸ್ಥಾನ ಪಡೆಯುವುದು ಸುನಿಲ್ ಚೆಟ್ರಿ ಬಳಗದ ಗುರಿ. ಹಾಗಾದಲ್ಲಿ ಜುಲೈ 1 ರಂದು ನಡೆಯುವ ಸೆಮಿಫೈನಲ್‌ನಲ್ಲಿ ಬಲಿಷ್ಠ ಲೆಬನಾನ್ ತಂಡವನ್ನು ಎದುರಿಸುವ ಸಂಕಷ್ಟ ತಪ್ಪಲಿದೆ. ಲೆಬನಾನ್ ತಂಡ 'ಬಿ' ಗುಂಪಿನಲ್ಲಿ ಅಗ್ರಸ್ಥಾನವನ್ನು ಬಹುತೇಕ ಖಚಿತಪಡಿಸಿಕೊಂಡಿದೆ.

'ಎ' ಗುಂಪಿನಲ್ಲಿ ಅಗ್ರಸ್ಥಾನ ಪಡೆಯುವ ತಂಡ 'ಬಿ' ಗುಂಪಿನಲ್ಲಿ ಎರಡನೇ ಸ್ಥಾನ ಪಡೆಯುವ ತಂಡವನ್ನು ಸೆಮಿಫೈನಲ್‌ನಲ್ಲಿ ಎದುರಿಸಲಿದೆ. ಬಾಂಗ್ಲಾದೇಶ ಅಥವಾ ಮಾಲ್ಡೀವ್ಸ್ 'ಬಿ' ಗುಂಪಿನಲ್ಲಿ ಎರಡನೇ ಸ್ಥಾನ ಪಡೆಯುವ ಸಾಧ್ಯತೆಯಿದೆ.

ಭಾರತ ತಂಡದ ಆಟಗಾರರು ಸೋಮವಾರ ಅಭ್ಯಾಸ ನಡೆಸಿದರು ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ಮೊದಲ ಎರಡು ಪಂದ್ಯಗಳಲ್ಲಿ ಕ್ರಮವಾಗಿ ಪಾಕಿಸ್ತಾನ ಮತ್ತು ನೇಪಾಳ ತಂಡಗಳನ್ನು 4–0 ಹಾಗೂ 2–0 ರಲ್ಲಿ ಮಣಿಸಿರುವ ಭಾರತ, ಹ್ಯಾಟ್ರಿಕ್ ಜಯದ ನಿರೀಕ್ಷೆಯಲ್ಲಿದೆ. ಚೆಟ್ರಿ ಬಳಗ ಎದುರಾಳಿಗಳಿಗೆ ಒಂದೂ ಗೋಲು ಬಿಟ್ಟುಕೊಟ್ಟಿಲ್ಲ. ಡಿಫೆಂಡರ್‌ಗಳು ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ.

ಆದರೆ ಫಿಫಾ ರ‍್ಯಾಂಕಿಂಗ್‌ನಲ್ಲಿ 143ನೇ ಸ್ಥಾನದಲ್ಲಿರುವ ಕುವೈತ್ ತಂಡ ಟೂರ್ನಿಯಲ್ಲಿ ಶಿಸ್ತಿನ ಆಟವಾಡಿದ್ದು, ಭಾರತಕ್ಕೆ ಪ್ರಬಲ ಪೈಪೋಟಿ ಒಡ್ಡುವುದರಲ್ಲಿ ಎರಡು ಮಾತಿಲ್ಲ.

ನೇಪಾಳ ಎದುರಿನ ಪಂದ್ಯದಲ್ಲಿ ಗೋಲಿನ ಖಾತೆ ತೆರೆಯಲು ಭಾರತಕ್ಕೆ ಒಂದು ಗಂಟೆ ಪರಿಶ್ರಮ ಪಡಬೇಕಾಗಿತ್ತು. ನೇಪಾಳಕ್ಕೆ ಹೋಲಿಕೆ ಮಾಡಿದರೆ, ಕುವೈತ್ ತಂಡದ ರಕ್ಷಣಾ ವಿಭಾಗ ಇನ್ನಷ್ಟು ಬಲಿಷ್ಠವಾಗಿದೆ. ಆದ್ದರಿಂದ ಚೆಟ್ರಿ ಬಳಗ ತನ್ನ ಆಟದ ವೇಗ ಮತ್ತು ಆಕ್ರಮಣವನ್ನು ಹೆಚ್ಚಿಸುವುದು ಅನಿವಾರ್ಯ.

ಆತಿಥೇಯ ತಂಡವು ಚೆಟ್ರಿ ಅವರನ್ನು ಅತಿಯಾಗಿ ಅವಲಂಬಿಸಿದೆ ಎಂಬುದು ಮೊದಲ ಎರಡು ಪಂದ್ಯಗಳಲ್ಲಿ ಸಾಬೀತಾಗಿದೆ. ಪಾಕಿಸ್ತಾನದ ವಿರುದ್ಧ ಹ್ಯಾಟ್ರಿಕ್ ಗಳಿಸಿದ್ದ ಅವರು ನೇಪಾಳ ಎದುರೂ ಗೋಲು ಗಳಿಸಿದ್ದರು. ಕುವೈತ್ ಡಿಫೆಂಡರ್‌ಗಳು ಚೆಟ್ರಿ ಅವರನ್ನು ಕಟ್ಟಿಹಾಕುವಲ್ಲಿ ಯಶಸ್ವಿಯಾದರೆ, ಪರಿಸ್ಥಿತಿಗೆ ತಕ್ಕಂತೆ ಆಟವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಇತರರು ಮುಂದಾಗುವುದು ಅಗತ್ಯ. ಸಹಲ್ ಅಬ್ದುಲ್ ಸಮದ್, ಚಾಂಗ್ಟೆ ಮತ್ತು ಮಹೇಶ್ ಸಿಂಗ್ ಕಾಲ್ಚಳಕ ತೋರುವುದು ಅನಿವಾರ್ಯ.

ಒಂದು ಪಂದ್ಯದ ನಿಷೇಧ ಶಿಕ್ಷೆ ಪೂರೈಸಿರುವ ಕೋಚ್ ಇಗೋರ್ ಸ್ಟಿಮ್ಯಾಚ್ ಅವರ ಮಾರ್ಗದರ್ಶನವು ಈ ಪಂದ್ಯದ ವೇಳೆ ಲಭಿಸಲಿರುವುದು ಭಾರತದ ಆಟಗಾರರ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.

ಮಂಗಳವಾರ ಮಧ್ಯಾಹ್ನ ನಡೆಯಲಿರುವ ಪಂದ್ಯದಲ್ಲಿ ಪಾಕಿಸ್ತಾನ–ನೇಪಾಳ ತಂಡಗಳು ಎದುರಾಗಲಿವೆ. ಆಡಿರುವ ಎರಡೂ ಪಂದ್ಯಗಳನ್ನು ಸೋತಿರುವ ಉಭಯ ತಂಡಗಳು ಸೆಮಿ 'ರೇಸ್'ನಿಂದ ಈಗಾಗಲೇ ಹೊರಬಿದ್ದಿವೆ.

ಇಂದಿನ ಪಂದ್ಯ

Vs	ಪಾಕಿಸ್ತಾನ – ನೇಪಾಳ	ಮಧ್ಯಾಹ್ನ 3.30
Vs	ಭಾರತ – ಕುವೈತ್	ರಾತ್ರಿ 7.30

ಲೈವ್: ಫ್ಯಾನ್‌ಕೋಡ್ ಆ್ಯಪ್

ಗಗನದಿಂದ ಭುವಿಗಿಳಿದ ಟ್ರೋಫಿ!

ಏಕದಿನ ವಿಶ್ವಕಪ್: ಇಂದಿನಿಂದ 18 ರಾಷ್ಟ್ರಗಳಿಗೆ ಪ್ರವಾಸ

ದುಬೈ (ಪಿಟಿಐ): ಏಕದಿನ ವಿಶ್ವಕಪ್ ಕ್ರಿಕೆಟ್ ಟ್ರೋಫಿಯು ಚಿತ್ತಾಕರ್ಷಕ ರೀತಿಯಲ್ಲಿ ಅನಾವರಣಗೊಂಡಿದ್ದು, ಭಾರತದಲ್ಲಿ ಟೂರ್ನಿ ನಡೆಯುವ ಮೊದಲು ವಿಶ್ವದ ಆಯ್ದ ರಾಷ್ಟ್ರಗಳಿಗೆ ಸಂಚರಿಸಲಿದೆ. ಕ್ರಿಕೆಟ್ ಪ್ರೇಮಿಗಳಿಗೆ ವಿಶ್ವಕಪ್ ಜೊತೆ ಕಾಣಿಸಿಕೊಳ್ಳುವ ಅಪರೂಪದ ಅವಕಾಶವು ದೊರೆಯಲಿದೆ.

ಇದಕ್ಕೆ ಮೊದಲು ಟ್ರೋಫಿಯ ಅನಾವರಣಕ್ಕೆ ಅಭೂತಪೂರ್ವ ರೀತಿಯಲ್ಲಿ ಚಾಲನೆ ನೀಡಲಾಯಿತು. ಭುವಿಯಿಂದ 1.20 ಲಕ್ಷ ಅಡಿ ಎತ್ತರದಲ್ಲಿ ಬಲೂನ್‌ಗೆ ಕಟ್ಟಿದ ಪ್ರತಿಷ್ಠಿತ ಬೆಳ್ಳಿಯ ಟ್ರೋಫಿಯನ್ನು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಅತ್ಯಾಕರ್ಷಕ ರೀತಿಯಲ್ಲಿ ಇಳಿಸಲಾಯಿತು. ಅತ್ಯಾಧುನಿಕ ಕ್ಯಾಮೆರಾಗಳ ಮೂಲಕ ಈ ಅದ್ಭುತ ದೃಶ್ಯವನ್ನು ಸೆರೆಹಿಡಿಯಲಾಯಿತು. ಇದು ಗಗನಕ್ಕೇರಿದ ಮೊದಲ ಕ್ರೀಡಾ ಟ್ರೋಫಿ ಎನ್ನುವ ಹೆಗ್ಗಳಿಕೆಗೆ ಪಾತ್ರವಾಯಿತು.

2023ರ ಟ್ರೋಫಿಯ ಪ್ರವಾಸ ಇದುವರೆಗಿನ ಅತಿ ದೊಡ್ಡದು ಎನಿಸಲಿದ್ದು ಕ್ರಿಕೆಟ್ ಪ್ರೇಮಿಗಳಿಗೆ ಟ್ರೋಫಿಯೊಂದಿಗೆ ಒಡನಾಡುವ ಅವಕಾಶ ದೊರೆಯಲಿದೆ. ಜೂನ್ 27 ರಂದು ಟ್ರೋಫಿಯ 'ವಿಶ್ವ ಸಂಚಾರ' ಆರಂಭವಾಗಲಿದ್ದು, 18 ರಾಷ್ಟ್ರಗಳಿಗೆ ಸಂಚರಿಸಲಿದೆ. ಇವುಗಳಲ್ಲಿ ಕುವೈತ್, ಬಹರೇನ್, ಮಲೇಷ್ಯಾ, ನೈಜೀರಿಯಾ, ಉಗಾಂಡಾ, ಫ್ರಾನ್ಸ್, ಇಟಲಿ, ಅಮೆರಿಕ ದೇಶಗಳು ಒಳಗೊಂಡಿವೆ. ಅಲ್ಲಿಂದ ಭಾರತಕ್ಕೆ ಬರಲಿದೆ ಎಂದು ಐಸಿಸಿ ಪ್ರಕಟಣೆ ತಿಳಿಸಿದೆ.

'ಐಸಿಸಿ ಪುರುಷರ ವಿಶ್ವಕಪ್ ಟ್ರೋಫಿಯ ಸಂಚಾರವು ಟೂರ್ನಿಯ ಕೌಂಟ್‌ಡೌನ್‌ನಲ್ಲಿ ಪ್ರಮುಖ ಮೈಲಿಗಲ್ಲು. ಇದು ಅತಿ ದೊಡ್ಡ ವಿಶ್ವಕಪ್ ಟೂರ್ನಿಯಾಗಲಿದೆ' ಎಂದು ಐಸಿಸಿ ಚೀಫ್ ಎಕ್ಸಿಕ್ಯೂಟಿವ್ ಜೆಫ್ ಅಲ್ಲರ್‌ಡೈಸ್ ತಿಳಿಸಿದರು.

'ಈ ಆಕರ್ಷಕ ಟ್ರೋಫಿಯ ಪ್ರವಾಸದ ವೇಳೆ ವಿವಿಧ ದೇಶಗಳ ಮುಖ್ಯಸ್ಥರು ಭಾಗಿಯಾಗಲಿದ್ದಾರೆ. ಪ್ರಮುಖ ಸಾಮುದಾಯಕ ಚಟುವಟಿಕೆಗೆ ಚಾಲನೆ ಸಿಗಲಿದೆ. ಕ್ರಿಕೆಟ್ ಅಭಿವೃದ್ಧಿ ಚಟುವಟಿಕೆಗೆ ಬೆಂಬಲ ಸಿಗಲಿದೆ. ವಿಶ್ವದ ಕೆಲವು ಆಕರ್ಷಕ ತಾಣಗಳಿಗೂ ತಲುಪಲಿದೆ' ಎಂದರು.

'ಭಾರತವನ್ನು ಕ್ರಿಕೆಟ್‌ನಷ್ಟು ಬೇರೆ ಯಾವ ಕ್ರೀಡೆಯೂ ಒಗ್ಗೂಡಿಸುವುದಿಲ್ಲ. ಈಗಾಗಲೇ ದೇಶದಾದ್ಯಂತ ಉತ್ಸಾಹ ಕಾಣಿಸಿಕೊಳ್ಳತೊಡಗಿದೆ. ವಿಶ್ವದ 10 ಅತ್ಯುತ್ತಮ ತಂಡಗಳು ಆರು ವಾರಗಳ ಕಾಲ ಜನರನ್ನು ರೋಮಾಂಚನಗೊಳಿಸಲಿವೆ' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕಾರ್ಯದರ್ಶಿ ಜಯ್ ಶಾ ಹೇಳಿದರು. ಅಕ್ಟೋಬರ್ 5 ರಿಂದ ನವೆಂಬರ್ 19ರವರೆಗೆ ಈ ಟೂರ್ನಿ ನಡೆಯಲಿದೆ.

ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಟ್ರೋಫಿಯನ್ನು 1.20 ಲಕ್ಷ ಅಡಿ ಎತ್ತರದಿಂದ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣಕ್ಕೆ ಇಳಿಸಲಾಯಿತು –ಐಸಿಸಿ ಟ್ವಿಟರ್ ಚಿತ್ರ

ವಾಂಖೆಡೆ, ಈಡನ್‌ಗೆ ಸೆಮಿಫೈನಲ್ ಆತಿಥ್ಯ?

ನವದೆಹಲಿ (ಪಿಟಿಐ): ಮುಂಬೈನ ವಾಂಖೆಡೆ ಮತ್ತು ಕೋಲ್ಕತ್ತದ ಈಡನ್ ಗಾರ್ಡನ್ ಕ್ರೀಡಾಂಗಣಗಳು ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪಂದ್ಯಗಳ ಆತಿಥ್ಯ ವಹಿಸುವ ತಾಣಗಳಲ್ಲಿ ಮುಂಚೂಣಿಯಲ್ಲಿವೆ.

ಹೀಗಾಗಿ ದೇಶದ ಇನ್ನೊಂದು ಪ್ರಮುಖ ಕ್ರೀಡಾಂಗಣ ಚೆನ್ನೈನ ಎಂ.ಎ.ಚಿದಂಬರಂ ಕ್ರೀಡಾಂಗಣಕ್ಕೆ ಬಹು ಪ್ರಮುಖ ಪಂದ್ಯದ ಆತಿಥ್ಯ ಕೈತಪ್ಪುವ ಸಾಧ್ಯತೆಯಿದೆ.

'ವಾಂಖೆಡೆ ಮತ್ತು ಈಡನ್ ಗಾರ್ಡನ್ ಕ್ರೀಡಾಂಗಣಗಳು ಸೆಮಿಫೈನಲ್ ಪಂದ್ಯಗಳಿಗೆ ತಾಣಗಳಾಗುವ ಸಾಧ್ಯತೆಯಿದೆ. ಚೆನ್ನೈ ಕೂಡ ಈ ಹಿಂದೆ ಪೈಪೋಟಿಯಲ್ಲಿತ್ತು. ಈಗ ಕೋಲ್ಕತ್ತ ಮುಂದಿದೆ' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮೂಲ ಸೋಮವಾರ ಪಿಟಿಐಗೆ ತಿಳಿಸಿದೆ. ನವೆಂಬರ್‌ನಲ್ಲಿ ಚೆನ್ನೈನಲ್ಲಿ ಮಳೆಯಾಗುವ ಸಾಧ್ಯತೆ ಹೆಚ್ಚಿರುವುದು ಇದಕ್ಕೆ ಕಾರಣ.

ಆತಿಥ್ಯ ವಹಿಸುವ 12 ತಾಣಗಳ ಕ್ರಿಕೆಟ್ ಸಂಸ್ಥೆಗಳ ಸಭೆ ಸೋಮವಾರ ಮುಂಬೈನಲ್ಲಿ ನಡೆದು, ವೇಳಾಪಟ್ಟಿ ಅಂತಿಮಗೊಳಿಸುವ ಸಂಬಂಧ ಸಮಾಲೋಚನೆ ನಡೆಯಿತು. ಮಂಗಳವಾರ ವೇಳಾಪಟ್ಟಿ ಅಧಿಕೃತವಾಗಿ ಬಿಡುಗಡೆ ಆಗಲಿದೆ. ಭಾರತವು ಸೆಮಿಫೈನಲ್‌ಗೆ ಅರ್ಹತೆ ಪಡೆದರೆ ತನ್ನ ಪಂದ್ಯವನ್ನು ಮುಂಬೈನಲ್ಲಿ ಆಡಲಿದೆ.

ಏಕದಿನ ಕ್ರಿಕೆಟ್‌ನ ಎರಡನೇ ಅತಿದೊಡ್ಡ ಗೆಲುವು

ಜಿಂಬಾಬ್ವೆಗೆ 304 ರನ್ ಜಯ

ಹರಾರೆ (ಎಎಫ್‌ಪಿ): ನಾಯಕ ಸೀನ್ ವಿಲಿಯಮ್ಸ್ (174 ರನ್, 101 ಎಸೆತ) ಅವರ ಬಿರುಸಿನ ಶತಕದ ನೆರವಿನಿಂದ ಜಿಂಬಾಬ್ವೆ ತಂಡ, ಏಕದಿನ ವಿಶ್ವಕಪ್ ಟೂರ್ನಿಯ ಅರ್ಹತಾ ಸುತ್ತಿನ ಪಂದ್ಯದಲ್ಲಿ ಸೋಮವಾರ ಅಮೆರಿಕ ತಂಡವನ್ನು 304 ರನ್‌ಗಳ ದಾಖಲೆ ಅಂತರದಿಂದ ಮಣಿಸಿತು. ಇದು ಏಕದಿನ ಕ್ರಿಕೆಟ್‌ನ ಎರಡನೇ ಅತಿದೊಡ್ಡ ಗೆಲುವಿನ ಅಂತರವಾಗಿದೆ.

ಆತಿಥೇಯ ಜಿಂಬಾಬ್ವೆ ತಂಡ 50 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 408 ರನ್ ಗಳಿಸಿತು. ವಿಲಿಯಮ್ಸ್ ಆಟದಲ್ಲಿ 21 ಬೌಂಡರಿ ಮತ್ತು ಐದು ಸಿಕ್ಸರ್‌ಗಳಿದ್ದವು. ಬೃಹತ್ ಗುರಿಯನ್ನು ಬೆನ್ನಟ್ಟಿದ ಅಮೆರಿಕ ತಂಡವು 25.1 ಓವರ್‌ಗಳಲ್ಲಿ 104 ರನ್ನಿಗೆ ಉರುಳಿತು. ಜಿಂಬಾಬ್ವೆ, ಆಡಿದ ಎಲ್ಲ ಪಂದ್ಯಗಳನ್ನು ಗೆದ್ದು 'ಎ' ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಸೂಪರ್ ಸಿಕ್ಸ್ ಹಂತಕ್ಕೇರಿತು.

2023ರ ಜನವರಿ 15ರಂದು ಭಾರತವು ದಾಖಲೆಯ 317 ರನ್‌ಗಳಿಂದ ಶ್ರೀಲಂಕಾ ತಂಡವನ್ನು ಪರಾಭವಗೊಳಿಸಿತ್ತು. ಇದು ಏಕದಿನ ಕ್ರಿಕೆಟ್‌ನ ಅತಿದೊಡ್ಡ ಅಂತರದ ಗೆಲುವು.

ಏಕದಿನ ಪಂದ್ಯದಲ್ಲಿ ಗರಿಷ್ಠ ಗೆಲುವಿನ ಅಂತರ

ವಿಜೇತ ತಂಡ	ಗೆಲುವಿನ ಅಂತರ	ಎದುರಾಳಿ	ವರ್ಷ
ಭಾರತ	317	ಶ್ರೀಲಂಕಾ	2023
ಜಿಂಬಾಬ್ವೆ	304	ಅಮೆರಿಕ	2023
ನ್ಯೂಜಿಲೆಂಡ್	290	ಐರ್ಲೆಂಡ್	2008
ಆಸ್ಟ್ರೇಲಿಯಾ	275	ಅಫ್ಗಾನಿಸ್ತಾನ	2015
ದಕ್ಷಿಣ ಆಫ್ರಿಕಾ	272	ಜಿಂಬಾಬ್ವೆ	2010

ಸೂಪರ್ ಓವರ್‌ನಲ್ಲಿ ಗೆದ್ದ ನೆದರ್ಲೆಂಡ್ಸ್

ಹರಾರೆ: ರೋಚಕ ಹಣಾಹಣಿ ನಡೆದ ಅರ್ಹತಾ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡ ಸೂಪರ್ ಓವರ್‌ನಲ್ಲಿ ವೆಸ್ಟ್ ಇಂಡೀಸ್ ತಂಡವನ್ನು ಮಣಿಸಿತು. ಆಲ್‌ರೌಂಡರ್ ಲೋಗನ್ ವಾನ್ ಬೀಕ್, ಗೆಲುವಿನ ರೂವಾರಿ ಆದರು.

ಮೊದಲು ಬ್ಯಾಟ್ ಮಾಡಿದ ವೆಸ್ಟ್ ಇಂಡೀಸ್ 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 374 ರನ್ ಗಳಿಸಿತು. ನೆದರ್ಲೆಂಡ್ಸ್ 9 ವಿಕೆಟ್‌ಗಳಿಗೆ 374 ರನ್ ಗಳಿಸಿದ್ದರಿಂದ ಪಂದ್ಯ 'ಟೈ' ಆಯಿತು.

ಸೂಪರ್ ಓವರ್‌ನಲ್ಲಿ ನೆದರ್ಲೆಂಡ್ಸ್ ಮೊದಲು ಬ್ಯಾಟ್ ಮಾಡಿತು. ಜೇಸನ್ ಹೋಲ್ಡರ್ ಓವರ್ ಬೌಲ್ ಮಾಡಿದ ಓವರ್‌ನಲ್ಲಿ ಲೋಗನ್ 30 ರನ್ (4,6,4,6,6,4) ಸಿಡಿಸಿದರು. ಆ ಬಳಿಕ ಬೌಲಿಂಗ್‌ನಲ್ಲೂ ಮಿಂಚಿದ ಅವರು ಕೇವಲ ಎಂಟು ರನ್ ಬಿಟ್ಟುಕೊಟ್ಟು, ಗೆಲುವಿಗೆ ಕಾರಣರಾದರು. ನೆದರ್ಲೆಂಡ್ಸ್ (6 ಪಾಯಿಂಟ್ಸ್) ಮತ್ತು ವೆಸ್ಟ್ ಇಂಡೀಸ್ (4) ಕ್ರಮವಾಗಿ 2 ಹಾಗೂ 3ನೇ ಸ್ಥಾನ ಪಡೆದು 'ಎ' ಗುಂಪಿನಿಂದ ಸೂಪರ್ ಸಿಕ್ಸ್ ಹಂತ ಪ್ರವೇಶಿಸಿದವು.

ಮಹಿಳಾ ಬಾಕ್ಸಿಂಗ್: ಕೋಚ್ ಭಾಸ್ಕರ್ ಭಟ್ ರಾಜೀನಾಮೆ

ನವದೆಹಲಿ (ಪಿಟಿಐ): ಏಷ್ಯನ್ ಗೇಮ್ಸ್‌ಗೆ ಕೇವಲ ಮೂರು ತಿಂಗಳು ಬಾಕಿ ಇರುವಂತೆ ಭಾರತ ಮಹಿಳಾ ಬಾಕ್ಸಿಂಗ್‌ನ ಮುಖ್ಯ ಕೋಚ್ ಭಾಸ್ಕರ್ ಭಟ್ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಭಾರತ ಕ್ರೀಡಾ ಪ್ರಾಧಿಕಾರದ (ಎಸ್‌ಎಐ) ಹೈ ಪರ್ಫಾರ್ಮೆನ್ಸ್ ನಿರ್ದೇಶಕ ಸ್ಥಾನದ ಮೇಲೆ ಹೆಚ್ಚಿನ ಗಮನ ಕೇಂದ್ರೀಕರಿಸುವ ಸಲುವಾಗಿ ಅವರು ಈ ನಿರ್ಧಾರ ಕೈಗೊಂಡಿದ್ದಾರೆ.

ಈ ತಿಂಗಳ ಆರಂಭದಲ್ಲಿ ಭಾಸ್ಕರ್ ಭಟ್ ಅವರನ್ನು ಈ ಹೊಸ ಜವಾಬ್ದಾರಿ ನೀಡಲಾಗಿತ್ತು. ಅವರು ಸಾಯ್‌ನ ನ್ಯಾಷನಲ್ ಸೆಂಟರ್ ಆಫ್ ಎಕ್ಸಲೆನ್ಸ್‌ನಲ್ಲಿ ಪುರುಷ ಮತ್ತು ಮಹಿಳಾ ಬಾಕ್ಸಿಂಗ್ ಎರಡನ್ನೂ ನೋಡಿಕೊಳ್ಳಲಿದ್ದಾರೆ.

ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್, ಮುಂದಿನ ವರ್ಷದ ಒಲಿಂಪಿಕ್ಸ್ ಬಾಕ್ಸಿಂಗ್ ಅರ್ಹತೆ ಪಡೆಯಲು ಇರುವ ಮೊದಲ ಅವಕಾಶವಾಗಿದೆ. ಎಲೋರ್ಡಾ ಕಪ್‌ಗೆ ಭಾರತದ ಎರಡನೇ ಹಂತದ ತಂಡದೊಂದಿಗೆ ಅವರು ಸದ್ಯ ಕಜಕಸ್ತಾನದಲ್ಲಿದ್ದಾರೆ.

ಭಾಸ್ಕರ್ ಭಟ್

ಭಾಸ್ಕರ್ ಭಟ್ ಅವರು 2021ರ ನವೆಂಬರ್‌ನಲ್ಲಿ ಭಾರತ ಮಹಿಳಾ ಬಾಕ್ಸಿಂಗ್ ಮುಖ್ಯ ಕೋಚ್ ಆಗಿ ನೇಮಕಗೊಂಡಿದ್ದರು. ಅದಕ್ಕೂ ಮೊದಲು 2017ರಿಂದ ಯುವ ತಂಡದಲ್ಲಿದ್ದರು. 2005ರಿಂದ 2012ರ ವರೆಗೆ ಸೀನಿಯರ್ ಮಹಿಳೆಯರ ಶಿಬಿರದಲ್ಲಿ ಸಹಾಯಕ ಕೋಚ್ ಆಗಿ ಕರ್ತವ್ಯ ನಿರ್ವಹಿಸಿದ್ದರು. ಅವರ ಮಾರ್ಗದರ್ಶನದಲ್ಲಿ 2022ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತೀಯ ಮಹಿಳಾ ಬಾಕ್ಸರ್‌ಗಳು 1 ಚಿನ್ನ, 2 ಕಂಚಿನ ಪದಕ ಗೆದ್ದಿದ್ದರು.

76 ಚಿನ್ನ, 75 ಬೆಳ್ಳಿ, 51 ಕಂಚು ಗೆದ್ದ ಕ್ರೀಡಾಪಟುಗಳು

ವಿಶೇಷ ಒಲಿಂಪಿಕ್ಸ್: ಭಾರತಕ್ಕೆ 202 ಪದಕ

ಬರ್ಲಿನ್ (ಪಿಟಿಐ): ಭಾರತ ತಂಡವು, ಭಾನುವಾರ ಇಲ್ಲಿ ಮುಕ್ತಾಯಗೊಂಡ ವಿಶೇಷ ಒಲಿಂಪಿಕ್ಸ್‌ನಲ್ಲಿ 76 ಚಿನ್ನ ಸೇರಿದಂತೆ 202 ಪದಕಗಳನ್ನು ಗಳಿಸಿ ಅಮೋಘ ಸಾಧನೆ ಪ್ರದರ್ಶಿಸಿದೆ. ಇದರಲ್ಲಿ 75 ಬೆಳ್ಳಿ, 51 ಕಂಚಿನ ಪದಕಗಳೂ ಸೇರಿವೆ.

ಕೊನೆಯ ದಿನ ನಡೆದ ಅಥ್ಲೆಟಿಕ್ಸ್‌ನಲ್ಲಿ ಭಾರತೀಯ ಅಥ್ಲೀಟ್‌ಗಳು ಎರಡು ಚಿನ್ನ, ಮೂರು ಬೆಳ್ಳಿ, ಒಂದು ಕಂಚು ಗೆದ್ದರು. ಆಂಚಲ್ ಗೋಯಲ್ (400 ಮೀ, ಬಿ ಹಂತ) ಮತ್ತು ರವಿಮತಿ ಅರ್ಮುಗಂ (400 ಮೀ, ಸಿ ಹಂತ) ಅಗ್ರಸ್ಥಾನದೊಂದಿಗೆ ಚಿನ್ನಕ್ಕೆ ಮುತ್ತಿಟ್ಟರು. ಮಿನಿ ಜಾವೆಲಿನ್‌ನಲ್ಲಿ ಈ ಹಿಂದೆ ಬೆಳ್ಳಿ ಪದಕ ಗೆದ್ದಿದ್ದ ಸಾಕೇತ್ ಕುಂದು, 400 ಮೀ. ಓಟದಲ್ಲಿ ಕಂಚಿನ ಪದಕ ಗೆದ್ದರು.

ಟೇಬಲ್ ಟೆನಿಸ್‌ನ ಮಹಿಳೆಯ ಡಬಲ್ಸ್‌ನಲ್ಲಿ ಅಲವೇಲಮ್ಮ ಮತ್ತು ಗಾಯತ್ರಿ, ಪುರುಷರ ಡಬಲ್ಸ್‌ನಲ್ಲಿ ವಿಘ್ನೇಶ್ ಮತ್ತು ಪ್ರತೀಕ್, ಮಹಿಳಾ ಸಿಂಗಲ್ಸ್‌ನಲ್ಲಿ ಅಲವೇಲಮ್ಮ, ಪುರುಷರ ಸಿಂಗಲ್ಸ್‌ನಲ್ಲಿ ವಿಘ್ನೇಶ್ ಚಿನ್ನದ ಪದಕ ಗೆದ್ದರು. ಭಾರತೀಯ ಕ್ರೀಡಾಪಟುಗಳು ಪ್ರದರ್ಶನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ವಿಶೇಷ ಒಲಿಂಪಿಕ್ಸ್ ಭಾರತ್‌ನ ಅಧ್ಯಕ್ಷೆ ಮಲ್ಲಿಕಾ ನಾಡಾ, 'ಕ್ರೀಡೆಗಳಲ್ಲಿ ಅವರ ಸಾಮರ್ಥ್ಯ ಅಸಾಮಾನ್ಯವಾದುದು. ಅವರು ತಮ್ಮ ಸಾಹಸ, ವೇಗ, ಶಿಸ್ತು, ಏಕಾಗ್ರತೆಯನ್ನು ಸಾಬೀತು ಮಾಡಿದ್ದಾರೆ. ಇದು ಎಲ್ಲರಿಗೂ ಮಾದರಿಯಾಗಿದೆ. ನಾವು ಈ ಆಂದೋಲನವನ್ನು ಮತ್ತಷ್ಟು ವಿಸ್ತರಿಸಬೇಕು' ಎಂದು ಹೇಳಿದ್ದಾರೆ.

'ಸರ್ಫರಾಜ್ ಯಾರಿಗೂ ಅಗೌರವ ತೋರಿಲ್ಲ'

ನವದೆಹಲಿ: ಭಾರತ ತಂಡಕ್ಕೆ ಮುಂಬೈ ಬ್ಯಾಟರ್ ಸರ್ಫರಾಜ್ ಖಾನ್ ಅವರನ್ನು ಸೇರ್ಪಡೆ ಮಾಡದಿರಲು ಫಿಟ್ನೆಸ್ ಮತ್ತು ನಡವಳಿಕೆಯ ಕಾರಣ ನೀಡಲಾಗುತ್ತಿದೆ. ಆದರೆ, ಇಂಥ ಹೇಳಿಕೆಯಲ್ಲಿ ಹುರುಳಿಲ್ಲ ಎಂದು ಮುಂಬೈ ಕ್ರಿಕೆಟ್‌ನ ಮೂಲಗಳು ಹೇಳಿವೆ.

ಸರ್ಫರಾಜ್ ತಮ್ಮ ದೈಹಿಕ ಕ್ಷಮತೆ ಉತ್ತಮ ಗೊಳಿಸಬೇಕು ಮತ್ತು ಮೈದಾನದಲ್ಲಿ ಮತ್ತು ಕ್ರೀಡಾಂಗಣದಾಚೆ ನಡವಳಿಕೆ ಸುಧಾರಿಸಿಕೊಳ್ಳಬೇಕು. ಆಗ ಅವರಿಗೆ ಅವಕಾಶ ಸಿಗಬಹುದು ಎಂದು ಬಿಸಿಸಿಐ ಅಧಿಕಾರಿಯೊಬ್ಬರು ಹೇಳಿದ್ದು ವರದಿಯಾಗಿತ್ತು. ಆದರೆ ಮುಂಬೈನ ಮಧ್ಯಮ ಕ್ರಮಾಂಕದ ಆಟಗಾರನ ಜೊತೆ ಗುರುತಿಸಿಕೊಂಡಿರುವವರು ಅವರನ್ನು ಸಮರ್ಥಿಸಿಕೊಂಡಿದ್ದಾರೆ.

ದೆಹಲಿ ವಿರುದ್ಧ ರಣಜಿ ಪಂದ್ಯದಲ್ಲಿ ನಿರ್ಣಾಯಕ ಶತಕ ಗಳಿಸಿದ ನಂತರ ಡ್ರೆಸಿಂಗ್ ರೂಮ್‌ನತ್ತ ಬೊಟ್ಟು ಮಾಡಿದ ರೀತಿ ಅವರಿಗೆ ಗೌರವ ತರುವ ರೀತಿಯಲ್ಲಿರಲಿಲ್ಲ ಎನ್ನಲಾಗಿತ್ತು. ಪಂದ್ಯ ವೀಕ್ಷಿಸುತ್ತಿದ್ದ ಆಯ್ಕೆಗಾರನಿಗೆ ಅದು ಅಣಕಿಸುವ ರೀತಿಯಲ್ಲಿತ್ತು ಎಂದೂ ಅರ್ಥೈಸಲಾಗಿತ್ತು.

ಸರ್ಫರಾಜ್ ಖಾನ್

ಸರ್ಫರಾಜ್ ಅವರ ಸಂಭ್ರಮದ ವೇಳೆ, ತಂಡದ ಆಟಗಾರರು ಮತ್ತು ಕೋಚ್ ಅಮೋಲ್ ಮಜುಂದಾರ್ ಅವರ ಕಡೆ ಬೊಟ್ಟುಮಾಡಿದ್ದರು. ಅಲ್ಲಿ ಆಯ್ಕೆಯಾರ ಚೇತನ್ ಶರ್ಮಾ ಇರಲಿಲ್ಲ. ಇನ್ನೊಬ್ಬ ಆಯ್ಕೆಗಾರ ಸಲೀಲ್ ಅಂಕೋಲಾ ಉಪಸ್ಥಿತರಿದ್ದರು. ತಂಡವನ್ನು ಸಂಕಷ್ಟದಿಂದ ಪಾರು ಮಾಡಿದ ಖುಷಿಯಲ್ಲಿ ನಿರಾಳರಾಗಿ ಆ ರೀತಿ ಮಾಡಿದ್ದರು' ಎಂದು ಕ್ರಿಕೆಟಿಗನ ಆಪ್ತ ಮೂಲ ಸೋಮವಾರ ಪಿಟಿಐಗೆ ತಿಳಿಸಿದೆ.

ಇನ್ನೊಂದು ಪ್ರಕರಣದಲ್ಲಿ ಅವರ ವರ್ತನೆ ಮಧ್ಯಪ್ರದೇಶ ಕೋಚ್ ಚಂದ್ರಕಾಂತ್ ಪಂಡಿತ್ ಅವರಿಗೆ ಹಿಡಿಸಿರಲಿಲ್ಲ ಎನ್ನಲಾಗುತ್ತಿದೆ. ಆದರೆ ಪಂಡಿತ್, ಮುಂಬೈನ ಬ್ಯಾಟರ್‌ನನ್ನು ಅಕ್ಕರೆಯಿಂದ ಕಾಣುತ್ತಿದ್ದರು ಎಂದು ಈ ಮೂಲ ತಿಳಿಸಿದೆ.

ಟೇಕ್ವಾಂಡೊ: ಪ್ರವಲಿಕಗೆ ಚಿನ್ನ

ಬೆಂಗಳೂರು: ನಗರದ ಪ್ಯಾಂಥರ್ಸ್ ಟೇಕ್ವಾಂಡೊ ಅಕಾಡೆಮಿಯ ಪ್ರವಲಿಕ ವಿ.ಕುಷ್ಟಗಿ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಿರುಮಲಶೆಟ್ಟಿಹಳ್ಳಿಯಲ್ಲಿ ನಡೆದ ರಾಜ್ಯಮಟ್ಟದ ಟೇಕ್ವಾಂಡೊ ಚಾಂಪಿಯನ್‌ಷಿಪ್‌ನ ಸೀನಿಯರ್ ಮಹಿಳೆಯರ ಪ್ಲಸ್ 73 ಕೆ.ಜಿ. ವಿಭಾಗದಲ್ಲಿ ಚಿನ್ನ ಗೆದ್ದರು.

ಸೆಪ್ಟೆಂಬರ್‌ನಲ್ಲಿ ಅಸ್ಸಾಂನ ಗುವಾಹಟಿಯಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಟೇಕ್ವಾಂಡೊ ಚಾಂಪಿಯನ್‌ಷಿಪ್‌ಗೆ ಪ್ರವಲಿಕ ಅರ್ಹತೆ ಪಡೆದುಕೊಂಡಿದ್ದಾರೆ ಎಂದು ಅವರ ತರಬೇತುದಾರರಾದ ಸತೀಶ್ ಕುಮಾರ್ ಎಸ್. ಹಾಗೂ ನವೀನ್ ತಿಳಿಸಿದ್ದಾರೆ.

ಪ್ರವಲಿಕ

ಗುಜರಾತ್ ಪರ ಆಡಲಿರುವ ಬಿಷ್ಣೋಯಿ

ನವದೆಹಲಿ (ಪಿಟಿಐ): ಲೆಗ್‌ಸ್ಪಿನ್ನರ್ ರವಿ ಬಿಷ್ಣೋಯಿ ಅವರು ದೇಸಿ ಕ್ರಿಕೆಟ್‌ನಲ್ಲಿ ತವರು ರಾಜ್ಯ ರಾಜಸ್ಥಾನ ತಂಡವನ್ನು ತೊರೆದು ಗುಜರಾತ್ ಪರ ಆಡಲು ನಿರ್ಧರಿಸಿದ್ದಾರೆ.

ಮುಂಬರುವ ಋತುವಿನಲ್ಲಿ ಗುಜರಾತ್ ತಂಡವನ್ನು ಪ್ರತಿನಿಧಿಸಲಿರುವ ವಿಷಯವನ್ನು ಅವರು ಇನ್‌ಸ್ಟಾಗ್ರಾಂ ಖಾತೆಯಲ್ಲಿ ಪ್ರಕಟಿಸಿದ್ದಾರೆ. ಗುಜರಾತ್ ಕ್ರಿಕೆಟ್ ಸಂಸ್ಥೆಯ ಪೋಷಾಕು ಧರಿಸಿ ಅಭ್ಯಾಸ ಮಾಡುತ್ತಿರುವ ಫೋಟೊ ಪ್ರಕಟಿಸಿರುವ ಬಿಷ್ಣೋಯಿ, 'ಹೊಸ ಆರಂಭ' ಎಂದು ಬರೆದುಕೊಂಡಿದ್ದಾರೆ.

22 ವರ್ಷದ ಬಿಷ್ಣೋಯಿ ಕಳೆದ ವರ್ಷ ಟಿ20 ವಿಶ್ವಕಪ್‌ಗೂ ಮುನ್ನ, ದಕ್ಷಿಣ ಆಫ್ರಿಕಾ ವಿರುದ್ಧ ತಮ್ಮ ಮೊದಲ ಏಕದಿನ ಪಂದ್ಯವನ್ನಾಡಿದ್ದರು. 2022ರ ಏಷ್ಯಾಕಪ್‌ಗೆ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದರೂ ಅವರನ್ನು ಟಿ20 ವಿಶ್ವಕಪ್ ಟೂರ್ನಿಗೆ ಆಯ್ಕೆ ಮಾಡಿರಲಿಲ್ಲ. ಇದುವರೆಗೆ 10 ಟಿ20 ಮತ್ತು 1 ಏಕದಿನ ಅಂತರರಾಷ್ಟ್ರೀಯ ಪಂದ್ಯ ಆಡಿದ್ದಾರೆ.

ಲೈಂಗಿಕ ಸಮಸ್ಯೆಗೆ ವಿಶ್ವದ ನಂಬರ್ 1 ಪರಿಹಾರ

ಶಿಶ್ನ ಚಿಕ್ಕದಾಗಿದೆಯೆ?, ವಕ್ರವಾಗಿದೆಯೆ? ಸೆಕ್ಸ್ ಸಮಯ ಹೆಚ್ಚಿಸಬೇಕೆ? ಚಿಂತಿಸಬೇಡಿ. ವಿಶ್ವದ ನಂಬರ 1 ಆಯುರ್ವೇದಿಕ ಔಷಧಿಯಿಂದ ಶಿಶ್ನದ ಗಾತ್ರ 7 ರಿಂದ 8 ಇಂಚು ಉದ್ದದಪ್ಪ ಹಾಗೂ ಲೈಂಗಿಕ ಸಮಯವನ್ನು ಹೆಚ್ಚಿಸಿಕೊಳ್ಳಿ. ಯಾವುದೇ ಅಡ್ಡಪರಿಣಾಮ ಇಲ್ಲ, ಲಕ್ಷಾಂತರ ಮಂದಿ ಸಂತುಷ್ಟರಾಗಿದ್ದಾರೆ.
ಸಂಪರ್ಕಿಸಿ
02262676816

ಮೈಸೂರು ವಲಯಕ್ಕೆ ಗೆಲುವು

ಬೆಂಗಳೂರು: ಕೃತಿಕ್ ಕೃಷ್ಣ (ಅಜೇಯ 83) ಅವರ ಅರ್ಧ ಶತಕದ ನೆರವಿನಿಂದ ಮೈಸೂರು ವಲಯ ತಂಡ, ಕೆಎಸ್‌ಸಿಎ 23 ವರ್ಷದೊಳಗಿನವರ ಅಂತರ (ಗ್ರಾಮಾಂತರ) ವಲಯ ಕ್ರಿಕೆಟ್ ಟೂರ್ನಿಯಲ್ಲಿ ಜಯ ಸಾಧಿಸಿತು.

ಆರ್‌ಡಬ್ಲ್ಯುಎಫ್ ಮೈದಾನದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಮೈಸೂರು ವಲಯ 3 ವಿಕೆಟ್‌ಗಳಿಂದ ಶಿವಮೊಗ್ಗ ವಲಯ ತಂಡವನ್ನು ಮಣಿಸಿತು.

ಇನ್ನೊಂದು ಪಂದ್ಯದಲ್ಲಿ ಧಾರವಾಡ ವಲಯ, 71 ರನ್‌ಗಳಿಂದ ಮಂಗಳೂರು ವಲಯ ವಿರುದ್ಧ ಗೆದ್ದಿತು. ಆದರ್ಶ್ ವಿ. ಹಿರೇಮಠ್ (30 ರನ್ ಹಾಗೂ 17ಕ್ಕೆ 4) ಗಮನ ಸೆಳೆದರು.

ಸಂಕ್ಷಿಪ್ತ ಸ್ಕೋರ್: (ಆರ್‌ಡಬ್ಲ್ಯುಎಫ್ ಮೈದಾನ) ಶಿವಮೊಗ್ಗ ವಲಯ: 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 214 (ಶ್ರವಣ್ ಎಸ್. ಬಾಬು 32, ಅಬು 24, ಶ್ರೇಯಾಂಕ್ ಸಾಗರ್ 33, ಎಂ.ಆರ್. ಜಯಂತ್ 31ಕ್ಕೆ 2, ಮಹೇಂದ್ರ ಕುಮಾರ್ 29ಕ್ಕೆ 3) ಮೈಸೂರು ವಲಯ 47.1 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 216 (ಎಂ.ಎಸ್.ಸ್ವರೂಪ್ 21, ಕೃತಿಕ್ ಕೃಷ್ಣ 83, ಎಲ್.ಆರ್.ಕುಮಾರ್ 24, ಮೌರ್ಯ ಜನಾರ್ದನ್ 25, ಮಿತೇಶ್ 31ಕ್ಕೆ 2) ಫಲಿತಾಂಶ: ಮೈಸೂರು ವಲಯಕ್ಕೆ 3 ವಿಕೆಟ್ ಗೆಲುವು **(ಆದಿತ್ಯ ಗ್ಲೋಬಲ್ ಮೈದಾನ) ಧಾರವಾಡ ವಲಯ:** 48.1 ಓವರ್‌ಗಳಲ್ಲಿ 199 (ಆದರ್ಶ್ ವಿ.ಹಿರೇಮಠ್ 30, ಓಂಕಾರ್ ಯು.ವಿ 35, ರಾಜೇಂದ್ರ 41, ಅದ್ವಿತ್ ಎಂ. ಶೆಟ್ಟಿ 27ಕ್ಕೆ 4, ನೇಥನ್ ಡಿ ಮೆಲೊ 28ಕ್ಕೆ 2) ಮಂಗಳೂರು ವಲಯ: 44.2 ಓವರ್‌ಗಳಲ್ಲಿ 128 (ಹರ್ಷಿತ್ ಪೂಜಾರಿ 24, ಹೃಷಿತ್ ಶೆಟ್ಟಿ 26, ಆದರ್ಶ್ ಹಿರೇಮಠ್ 17ಕ್ಕೆ 4, ರಾಜೇಂದ್ರ 18ಕ್ಕೆ 3) ಫಲಿತಾಂಶ: ಧಾರವಾಡಕ್ಕೆ 71 ರನ್ ಗೆಲುವು **(ಬಿಜಿಎಸ್ ಮೈದಾನ) ತುಮಕೂರು ವಲಯ:** 31.1 ಓವರ್‌ಗಳಲ್ಲಿ 86 (ಹೇಮಂತ್ ಕುಮಾರ್ 21, ಅಶುತೋಷ್ 21ಕ್ಕೆ 3, ಶಶಿಕುಮಾರ್ 14ಕ್ಕೆ 5) ರಾಯಚೂರು ವಲಯ: 18.5 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 87 (ಎಸ್.ಪಿ.ಶ್ರೇಯಸ್ 36, ಈಶ್ವರ್ ನಾಯಕ್ 23) ರಾಯಚೂರು ವಲಯಕ್ಕೆ 6 ವಿಕೆಟ್ ಗೆಲುವು

ಮಹಿಳಾ ಆ್ಯಷಸ್: ಆಸ್ಟ್ರೇಲಿಯಾಕ್ಕೆ ಜಯ

ನಾಟಿಂಗ್‌ಹ್ಯಾಮ್ (ಎಪಿ): ಇಂಗ್ಲೆಂಡ್‌ನ ಕೊನೆಯ ಐದು ವಿಕೆಟ್‌ಗಳನ್ನು ಅಂತಿಮ ದಿನ ಲಂಚ್‌ಗಿಂತ ಮೊದಲೇ ಕಬಳಿಸಿದ ಆಸ್ಟ್ರೇಲಿಯಾ ಆಟಗಾರ್ತಿಯರು, ಮಹಿಳಾ ಆ್ಯಷಸ್ ಸರಣಿಯ ಮೊದಲ ಟೆಸ್ಟ್ ಪಂದ್ಯವನ್ನು 89 ರನ್‌ಗಳಿಂದ ಗೆದ್ದುಕೊಂಡರು.

268 ರನ್‌ಗಳನ್ನು ಗಳಿಸುವ ಗುರಿಯೊಂದಿಗೆ, ಅಂತಿಮ ದಿನವಾದ ಸೋಮವಾರ 5 ವಿಕೆಟ್‌ಗೆ 116 ರನ್‌ಗಳೊಡನೆ ಆಟ ಮುಂದುವರಿಸಿದ ಇಂಗ್ಲೆಂಡ್ 178 ರನ್‌ಗಳಿಗೆ ಪತನ ಕಂಡಿತು. ಡಾನಿ ವ್ಯಾಟ್ ಗಳಿಸಿದ 54 ರನ್‌ಗಳು (88 ಎಸೆತ, 5 ಬೌಂಡರಿ) ತಂಡದ ಗೆಲುವಿಗೆ ಬರಲಿಲ್ಲ.

ಆಫ್ ಸ್ಪಿನ್ನರ್ ಆ್ಯಶ್ಲಿ ಗಾರ್ಡನರ್ 20 ಓವರುಗಳಲ್ಲಿ 66 ರನ್ನಿಗೆ 8 ವಿಕೆಟ್ ಪಡೆದು ಕಾಂಗರೂ ಪಡೆಯ ಗೆಲುವನ್ನು ತ್ವರಿತಗೊಳಿಸಿದರು. ಅವರು ಪಂದ್ಯದಲ್ಲಿ 12 ವಿಕೆಟ್‌ಗಳ ಸಮೃದ್ಧ ಗೊಂಚಲು ಪಡೆದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 473 , ಇಂಗ್ಲೆಂಡ್: 463, ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 257, ಇಂಗ್ಲೆಂಡ್: 49 ಓವರುಗಳಲ್ಲಿ 178 (ಡಾನಿ ವ್ಯಾಟ್ 54; ಆ್ಯಶ್ಲಿ ಗಾರ್ಡನರ್ 66ಕ್ಕೆ8).

ವಿವೇಕ್ಸ್‌ಗೆ ಮಣಿದ ರೈಸಿಂಗ್ ಸ್ಟಾರ್

ಬೆಂಗಳೂರು: ವಿವೇಕ್ಸ್ ಎಸ್‌ಸಿ ತಂಡವು ಎಂ.ಸಿ. ಶ್ರೀನಿವಾಸ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ 'ಬಿ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಮೈಸೂರಿನ ರೈಸಿಂಗ್ ಸ್ಟಾರ್ ತಂಡವನ್ನು 77–64ರಿಂದ ಮಣಿಸಿತು.

ರೈಸಿಂಗ್ ಸ್ಟಾರ್ ತಂಡವು ಮಧ್ಯಂತರ ವೇಳೆಗೆ 41–40 ಮುನ್ನಡೆಯಲ್ಲಿತ್ತು. ರಾಜೇಶ್ (30 ಪಾಯಿಂಟ್ಸ್), ಪೌರುಷ್ (14 ಪಾಯಿಂಟ್ಸ್) ಅವರ ಆಟದ ನೆರವಿನಿಂದ ವಿವೇಕ್ಸ್ ತಂಡವು ಜಯವನ್ನು ತನ್ನದಾಗಿಸಿಕೊಂಡಿತು.

ಇತರ ಪಂದ್ಯದಲ್ಲಿ ಮನೋಜ್ ಕೆಎಸ್‌ಪಿ ತಂಡ ಮೈಸೂರಿನ ಪ್ರೊಟೆಕ್ ಅಸೋಸಿಯೇಷನ್ ತಂಡವನ್ನು ಮಣಿಸಿತು. ಜೆಎಸ್‌ಸಿ ತಂಡ 86–53ರಿಂದ ಕೋರಮಂಗಲ ಎಸ್‌ಸಿ ತಂಡವನ್ನು ಸೋಲಿಸಿತು. ದೇವಾಂಗ ಯೂನಿಯನ್ ತಂಡ 84–72ರಿಂದ ಬಾಷ್ ತಂಡವನ್ನು ಪರಾಭವಗೊಳಿಸಿತು.

ಇಂಗ್ಲೆಂಡ್‌ನ ಎಯಾನ್ ಮಾರ್ಗನ್, ಹೀದರ್ ನೈಟ್‌ಗೂ ಅವಕಾಶ

ಎಂಸಿಸಿ ಕ್ರಿಕೆಟ್ ಸಮಿತಿಗೆ ಜೂಲನ್

ಲಂಡನ್ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಾರೆಯಾಗಿದ್ದ ಜೂಲನ್ ಗೋಸ್ವಾಮಿ, ಇಂಗ್ಲೆಂಡ್ ಮಹಿಳಾ ತಂಡದ ನಾಯಕಿ ಹೀದರ್ ನೈಟ್ ಮತ್ತು ಮಾಜಿ ನಾಯಕ ಎಯಾನ್ ಮಾರ್ಗನ್ ಅವರು ಎಂಸಿಸಿ (ಮೆರಿಲ್‌ಬೋರ್ನ್ ಕ್ರಿಕೆಟ್ ಕ್ಲಬ್) ವಿಶ್ವ ಕ್ರಿಕೆಟ್ ಸಮಿತಿಗೆ ಸೇರ್ಪಡೆಗೊಂಡಿದ್ದಾರೆ ಎಂದು ಕ್ಲಬ್ ಸೋಮವಾರ ತಿಳಿಸಿದೆ.

ಲಾರ್ಡ್ಸ್‌ನಲ್ಲಿ ನಡೆಯುವ ಸೋಮವಾರ ಆರಂಭವಾದ ಎರಡು ದಿನಗಳ ಎಂಸಿಸಿ ಸಭೆಗೆ ಮುನ್ನ ಈ ಸೇರ್ಪಡೆ ನಡೆದಿದೆ. ಮಾರ್ಗನ್ ಅವರು 2019ರಲ್ಲಿ ಏಕದಿನ ವಿಶ್ವಕಪ್ ಗೆದ್ದ ಇಂಗ್ಲೆಂಡ್ ತಂಡದ ಕ್ಯಾಪ್ಟನ್ ಆಗಿದ್ದರು. ಎಂಸಿಸಿಯು, ವಿವಿಧ ದೇಶಗಳ ಹಾಲಿ ಮತ್ತು ಮಾಜಿ ಆಟಗಾರರನ್ನು, ಅಂಪೈರ್‌ಗಳು ಮತ್ತು ಅಧಿಕಾರಿಗಳನ್ನು ಒಳಗೊಂಡ ಸ್ವತಂತ್ರ ಸಂಸ್ಥೆಯಾಗಿದೆ.

ಜೂಲನ್ ಗೋಸ್ವಾಮಿ

ಮಹಿಳಾ ಕ್ರಿಕೆಟ್‌ನ ವೇಗದ ಬೌಲರ್‌ಗಳಲ್ಲಿ ಒಬ್ಬರಾಗಿದ್ದ ಗೋಸ್ವಾಮಿ, ಕಳೆದ ವರ್ಷ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದರು. ಇಂಗ್ಲೆಂಡ್ ಎದುರಿನ ಏಕದಿನ ವಿಶ್ವಕಪ್‌ನಲ್ಲಿ ಅವರು ತಮ್ಮ ಕೊನೆಯ ಪಂದ್ಯವನ್ನು ಆಡಿದ್ದರು. ಅಲ್ಲಿ ಅವರಿಗೆ ಎಲ್ಲರೂ ಗೌರವ ಸಲ್ಲಿಸಿದ್ದರು.

272 ಏಕದಿನ ಪಂದ್ಯಗಳಲ್ಲಿ 300ಕ್ಕೂ ಹೆಚ್ಚು ವಿಕೆಟ್‌ಗಳನ್ನು ಪಡೆದಿರುವ ಜೂಲನ್, 12 ಟೆಸ್ಟ್ ಪಂದ್ಯಗಳಿಂದ 44 ವಿಕೆಟ್‌ಗಳನ್ನು ಗಳಿಸಿದ್ದಾರೆ. ಅವರಿಗೆ ಏಪ್ರಿಲ್ ತಿಂಗಳಲ್ಲಿ ಎಂಸಿಸಿ ಗೌರವ ಅಜೀವ ಸದಸ್ಯತ್ವ ನೀಡಲಾಗಿತ್ತು.

'ನಮಗೆ ಜೂಲನ್, ಹೀದರ್ ಮತ್ತು ಎಯಾನ್ ಮಾರ್ಗನ್ ಅವರನ್ನು ಸ್ವಾಗತಿಸಲು ಸಂತಸವಾಗುತ್ತಿದೆ' ಎಂದು ಎಂಸಿಸಿ ವಿಶ್ವ ಕ್ರಿಕೆಟ್ ಸಮಿತಿಯ ಅಧ್ಯಕ್ಷರಾಗಿರುವ ಮೈಕ್ ಗ್ಯಾಟಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಈ ಮೂವರು ಆಟಗಾರರು ಅಂತರರಾಷ್ಟ್ರೀಯ ಕ್ರಿಕೆಟ್‌ಅನ್ನು ಉನ್ನತ ಮಟ್ಟದಲ್ಲಿ ಆಡಿದ್ದಾರೆ. ಈ ಎತ್ತರಕ್ಕೇರಿರುವ ಅವರ ಜ್ಞಾನ, ಅನುಭವವು ಸಮಿತಿಗೆ ಉಪಯುಕ್ತ ಆಗಲಿದೆ' ಎಂದಿದ್ದಾರೆ

'ಇತ್ತೀಚಿನ ವರ್ಷಗಳಲ್ಲಿ ಮಹಿಳಾ ಕ್ರಿಕೆಟ್ ಬೆಳವಣಿಗೆ ಕಾಣುತ್ತಿದ್ದು, ಮಹಿಳಾ ಪ್ರಾತಿನಿಧ್ಯ ಹೆಚ್ಚುತ್ತಿರುವುದೂ ಮಹತ್ವಪೂರ್ಣ. ಜೂಲನ್ ಮತ್ತು ಹೀದರ್ ಅವರು ಕ್ಲೇರ್ ಕಾನರ್ ಮತ್ತು ಸೂಝೀ ಬೇಟ್ಸ್ ಅವರನ್ನು ಸೇರಿಕೊಳ್ಳಲಿದ್ದಾರೆ. ಅವರೆಲ್ಲರ ಅನುಭವ ಮಹಿಳಾ ಕ್ರಿಕೆಟ್ ಪ್ರಗತಿಗೆ ನೆರವಾಗಲಿದೆ' ಎಂದರು.

ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ನಡವೆ ಆ್ಯಷಸ್ ಸರಣಿಯ ಎರಡನೇ ಟೆಸ್ಟ್‌ಗೆ ಮುನ್ನ ಎರಡು ದಿನಗಳ ಎಂಸಿಸಿ ಸಭೆ ಸೋಮವಾರ ಆರಂಭವಾಗಿದೆ.